ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ನವೆಂಬರ್ 21 ಶುಕ್ರವಾರ 2025

ಸಂಪುಟ: 46 | ಸಂಚಿಕೆ: 213 | ಪುಟಗಳು: 12+IV

₹4


ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23

ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com

ಜಾಹೀರಾತು: ad@mysurumithra.com, website: www.mysurumithra.com


ಲಾಂಚಿಂಗ್ ಫೇಸ್ 3
G SQUARE
Alchemy
ನ್ಯೂ ಕಾಂತರಾಜ್ ಅರಸ್ 80 ಅಡಿ ರಸ್ತೆ
ಸಲೂನ್‌ಗಳು ಮತ್ತು ಸ್ಪಾಗಳಿಗೆ 7000 ಚದರ. ಅಡಿ
ಬ್ಯಾಂಕ್ ಮತ್ತು ಎಟಿಎಂ ಗಳಿಗೆ 8000 ಚದರ. ಅಡಿ
BANK
BARBERSHOP
80 ಅಡಿ ರಸ್ತೆ, ORR - PRR ಸಂಪರ್ಕ ಹಾಗೂ ವಾಣಿ
ಗಳಿಗೆ ಪ್ರವೇಶವನ್ನು ಹೊಂದಿರುವ 41 ಎಕ
ಕೋ ವರ್ಕಿಂಗ್ ಸ್ಥಳಗಳ
15,000 ಚದರ. ಅಡಿ
ಅಪಾರ್ಟ್ ಮೆಂಟ್ 25,000 ಚದರ. ಅಡಿ
ಔಟರ್ ರಿಂಗ್ ರೋಡ್
.AVAIL UP TO 90%
LOAN FROM ALL LEADING BANKS
FOR COMMERCIAL APPROVED PLOTS


ಆಸ್ಪತ್ರೆಗಳಿಗೆ
25,000 ಚದರ. ಅಡಿ
ರೆಸ್ಟೋರೆಂಟ್‌ಗಳು
10,000 ಚದರ. ಅಡಿ
Hospital
SCHOOL
ಜ್ಯ ಸ್ಥಳಗಳು ಮತ್ತು ದೊಡ್ಡ ವಸತಿ ಪ್ಲಾಟ್
ರೆಯ ಏಕೈಕ ವಿಲ್ಲಾ ಸಮುದಾಯ
ಹೈಪರ್‌ಮಾರ್ಕೆಟ್‌ಗಳು
10,000 ಚದರ. ಅಡಿ
ರಿಟೇಲ್ ಮಾರಾಟ
ಮಳಿಗೆಗಳು
6000 ಚದರ. ಅಡಿ
SHOP
9.0M ROAD
18.0M Proposed
BENGALURU
TIER - 1
MYSURU
FUTURE TIER - 1
Why are Bengalureans moving to Mysuru?
Great Ring Road connectivity, clean and livable surroundings, and
Karnataka's new IT policy are making Mysuru a top choice for professionals.
50% Rent Reimbursement – Up to ₹2 Cr
30% Property Tax Reimbursement – For 3 years
100% Electricity Duty Waiver – For 5 years
25% Phone & Internet Bill Waiver – Up to ₹12 lakh
R&D Incentives – Up to ₹50 Cr
Source: ANI
RERA NO: PRM/KA/RERA/1268/378/PR/020125/007342
MUDA APPROVED RERA
FOR SITE VISIT CALL
89397 10006

ವೈಸೂರು ಮಿತ್ರ

ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ನವೆಂಬರ್ 21 ಶುಕ್ರವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ-ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 213 | ಪುಟಗಳು: 12 + IV
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಸಿದ್ದರಾಮಯ್ಯನವರು ಎಂದೂ ಕೊಟ್ಟ ಮಾತು ತಪ್ಪುವವರಲ್ಲ...!!

● ಮಾಜಿ ಸಂಸದ ಡಿ.ಕೆ. ಸುರೇಶ್ ಅತೀವ ವಿಶ್ವಾಸ ● ರಾಜಕಾರಣದಲ್ಲಿ ನಾಯಕರಾಗಿ ಉಳಿಯಬೇಕೆಂದರೆ ಕೊಟ್ಟ ಭರವಸೆಯಂತೆ ನಡೆಯಲೇಬೇಕು....!! ● ಹಾಗೆ ನಡೆದುಕೊಂಡರೆ ನಾಯಕರಾಗಿಯೇ ಉಳಿಯುತ್ತಾರೆ; ಮಾರ್ಮಿಕ ನುಡಿ



ಬೆಂಗಳೂರು, ನ.20(ಕೆಎಂಶಿ)– ರಾಜಕಾರಣದಲ್ಲಿ ಶಾಶ್ವತವಾಗಿ ಉಳಿಯಬೇಕೆಂದರೆ ಕೊಟ್ಟ ಭರವಸೆಯಂತೆ ನಡೆದುಕೊಳ್ಳಬೇಕು. ಮುಖ್ಯಮಂತ್ರಿ ಸಿದ್ದರಾಮಯ್ಯನವರು ಎಂದೂ ಕೊಟ್ಟ ಮಾತು ತಪ್ಪುವವರಲ್ಲ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸಹೋದರ ಹಾಗೂ ಮಾಜಿ ಸಂಸದ ಡಿ.ಕೆ.ಸುರೇಶ್ ಇಂದಿಲ್ಲಿ ಪರೋಕ್ಷವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ನೆನಪಿಸಿದ್ದಾರೆ.

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಪಕ್ಷ ಅಧಿಕಾರಕ್ಕೆ ಬಂದ ಸಮಯದಲ್ಲಿ ನಾಯಕತ್ವ ವಿಚಾರವೂ ಸೇರಿದಂತೆ ಬಹುತೇಕ ಎಲ್ಲಾ ಸಂದರ್ಭಗಳಲ್ಲೂ ನಾನು ಸಾಕ್ಷಿಯಾಗಿದ್ದೇನೆ.

ಸಿದ್ದರಾಮಯ್ಯ ಕೊಟ್ಟ ಮಾತಿನಂತೆ ಇದುವರೆಗೂ ನಡೆದುಕೊಂಡಿದ್ದಾರೆ. ಹಿಂದೆ ಅಧಿಕಾರದಲ್ಲಿದ್ದಾಗ ನೀಡಿದ್ದ ಭರವಸೆಗಳನ್ನು ಈಡೇರಿಸಿದ್ದರು. ಈಗಲೂ ಅದನ್ನೇ ಮಾಡುತ್ತಿದ್ದಾರೆ. ತಾವು ಕೊಟ್ಟ ಮಾತಿನಂತೆ ನಡೆದುಕೊಂಡರೆ ನಾಯಕರಾಗಿ ಉಳಿಯುತ್ತಾರೆ ಎಂದು ಮಾರ್ಮಿಕವಾಗಿ ನುಡಿದರು. ಪಕ್ಷದ ಕಾರ್ಯಕರ್ತನಾಗಿ ನನಗೆ ಬಹಳಷ್ಟು ವಿಚಾರ ತಿಳಿದಿದೆ. ಶಿವಕುಮಾರ್ ಶ್ರಮಕ್ಕೆ ಪ್ರತಿಫಲ ಇಂದಲ್ಲಾ ನಾಳೆ

▶ 10ನೇ ಪುಟಕ್ಕೆ

ರಾಜ್ಯ ಕಾಂಗ್ರೆಸ್ ಸರ್ಕಾರ ಎರಡೂವರೆ ವರ್ಷ ಪೂರೈಕೆ

ಜೋರಾಯ್ತು ಪವರ್ ಪ್ಲೇ



● ಅಧಿಕಾರ ಗಿಟ್ಟಿಸಿಕೊಳ್ಳಲು ಅಖಾಡಕ್ಕಿಳಿದ ಡಿ.ಕೆ.ಶಿವಕುಮಾರ್
● ಸಿಎಂ ಸಿದ್ದರಾಮಯ್ಯ ಬಣದಿಂದ ಪ್ರತ್ಯಾಸ್ತ್ರ ಪ್ರಯೋಗ ಸಿದ್ಧತೆ

ಬೆಂಗಳೂರು, ನ.20– ಮುಖ್ಯಮಂತ್ರಿ ಸಿದ್ದರಾಮಯ್ಯ ಎರಡೂವರೆ ವರ್ಷಗಳ ಅಧಿಕಾರ ಪೂರ್ಣಗೊಳಿಸುತ್ತಿದ್ದಂತೆ ಅಧಿಕಾರ ಹಸ್ತಾಂತರ ಪ್ರಸ್ತಾವ ಈಗ ಮುನ್ನೆಲೆಗೆ ಬಂದಿದ್ದು, ಉಪ ಮುಖ್ಯಮಂತ್ರಿ ಡಿ.ಕೆ.ಶಿವ ಕುಮಾರ್ ಅಕ್ಷರಶಃ ಪವರ್ ಪ್ಲೆ ಅಖಾಡಕ್ಕೆ ಇಳಿದಿದ್ದಾರೆ.

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಅಭೂತ ಪೂರ್ವ ಜಯದೊಂದಿಗೆ 136 ಶಾಸಕರ ಬಲದಲ್ಲಿ ಸರ್ಕಾರ ರಚಿಸಿತ್ತು. ಈ ವೇಳೆ ಮುಖ್ಯಮಂತ್ರಿಗಾದಿಗೆ ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ನಡುವೆ ಪೈಪೋಟಿ ನಡೆದಿತ್ತು. ಆಗ ವರಿಷ್ಠರ ಸಮ್ಮುಖದಲ್ಲಿ ತಲಾ ಎರಡೂವರೆ ವರ್ಷಗಳು ಅಧಿಕಾರ ಹಂಚಿಕೆ ಅಲಿಖಿತ ಒಡಂಬಡಿಕೆ ಆಗಿತ್ತೆಂದು ಹೇಳಲಾಗಿದೆ.

ಈ ಒಡಂಬಡಿಕೆ ಪಕ್ಷದ ವರಿಷ್ಠರೂ ಹಾಗೂ ಇಬ್ಬರು ನಾಯಕರ ನಡುವೆ ನಡೆದಿದ್ದಾಗಿದ್ದರಿಂದ ಬೇರೆಯವರಿಗೆ ಇದರ ಬಗ್ಗೆ ಸ್ಪಷ್ಟತೆ ಇಲ್ಲ. ಹಾಗಾಗಿಯೇ ಪಕ್ಷ ಮತ್ತು ಸರ್ಕಾರದ ಹಂತದಲ್ಲಿ ಗೊಂದಲಗಳು ಆಗಾಗ ಉದ್ಭವಿಸುತ್ತಿದ್ದವು. ಆದರೆ ಈಗ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಎರಡೂವರೆ ವರ್ಷ ಪೂರೈಸುತ್ತಿದ್ದಂತೆಯೇ ಅಧಿಕಾರ ಹಸ್ತಾಂತರ ಪ್ರಶ್ನೆ ಉದ್ಭವಿಸಿದೆ. ಈಗಾಗಲೇ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ವರಿಷ್ಠರನ್ನು ಭೇಟಿಯಾಗಿ ಮಾತುಕತೆ ನಡೆಸಿ, ತಮಗೆ ಅಧಿಕಾರ ವಹಿಸಿಕೊಡುವಂತೆ ಮನವಿ ಮಾಡಿ ಬಂದಿದ್ದರು.

ಆದರೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಅವರ ಬಣ ಅಧಿಕಾರ ಹಸ್ತಾಂತರ ಸಂಬಂಧ ದಿನಕ್ಕೊಂದು ಹೇಳಿಕೆ ನೀಡುತ್ತಿರುವ ಹಿನ್ನೆಲೆಯಲ್ಲಿ ಸರ್ಕಾರಕ್ಕೆ ಎರಡೂವರೆ ವರ್ಷ ಪೂರ್ಣಗೊಂಡ ಹಿನ್ನಲೆಯಲ್ಲಿ ಡಿ.ಕೆ.ಶಿವಕುಮಾರ್ ಇಂದು ಕುಮಾರಕೃಪಾದಲ್ಲಿ ತಮ್ಮ ಬೆಂಬಲಿಗ ಸಚಿವರು, ಶಾಸಕರು ಹಾಗೂ ಮುಖಂಡರೊಂದಿಗೆ ಸಭೆ ನಡೆಸಿದ್ದಾರೆ. ಅಲ್ಲದೇ ಕೆಲವು ಸಚಿವರು ಹಾಗೂ ಶಾಸಕರನ್ನು ದೆಹಲಿಗೂ ಕಳುಹಿಸಿ, ವರಿಷ್ಠರ ಮೇಲೆ ಒತ್ತಡ ತರುವ ಪ್ರಯತ್ನ ಆರಂಭಿಸಿದ್ದಾರೆ. ಕೆಲವು ಶಾಸಕರು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿಯಾಗಿ ಮಾತುಕತೆ ನಡೆಸಿದ್ದಾರೆ ಎಂದು ಹೇಳಲಾಗಿದೆ. ಈ ಮಧ್ಯೆ ಕೃಷಿ ಸಚಿವ ಚೆಲುವರಾಯಸ್ವಾಮಿ ದೆಹಲಿಯಲ್ಲಿದ್ದು, ವರಿಷ್ಠರ ಭೇಟಿಗೆ ಸಜ್ಜಾಗಿದ್ದಾರೆ.

ಈ ವಿಷಯ ಗುಪ್ತಚರ ವಲಯದಿಂದ ತಿಳಿಯುತ್ತಿದ್ದಂತೆ ಚಾಮರಾಜನಗರ ಜಿಲ್ಲಾ ಪ್ರವಾಸದಲ್ಲಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ಮೈಸೂರು ವಾಸ್ತವ್ಯ ಕೈಬಿಟ್ಟು ಬೆಂಗಳೂರಿಗೆ ವಾಪಸ್ಸಾಗಿದ್ದು, ಕೃಷಿ ಸಚಿವರಿಗೆ ನಾಳೆ (ಶುಕ್ರವಾರ) ತಮ್ಮ ನೇತೃತ್ವದಲ್ಲಿ ನಡೆಯುವ ಮೆಕ್ಕೆಜೋಳ ಸೇರಿದಂತೆ ಕೆಲವು ಬೆಳೆಗೆ ಬೆಂಬಲ ಬೆಲೆ ನಿರ್ಧರಿಸುವ ಮಹತ್ವದ ಸಭೆಗೆ ಹಾಜರಾಗುವಂತೆ ತುರ್ತು ಪತ್ರ ರವಾನಿಸಿದ್ದಾರೆ. ಆದರೆ ತಾವು ಕೇಂದ್ರ ಕೃಷಿ ಸಚಿವರ ಭೇಟಿಗೆ ಕಾದಿದ್ದು, ನಂತರ ವಾಪಸ್ಸಾಗುವುದಾಗಿ ಸಂದೇಶ ನೀಡಿದ್ದಾರೆಂದು ಬಲ್ಲ ಮೂಲಗಳು ತಿಳಿಸಿವೆ.

ಬಣ ರಾಜಕೀಯ: ಈ ಮಧ್ಯೆ ಡಿ.ಕೆ.ಶಿವಕುಮಾರ್ ಆಪ್ತರು ರೇಸ್‌ಕೋರ್ಸ್ ರಸ್ತೆಯ ಪಂಚತಾರಾ ಹೋಟೆಲ್‌ನ ಎಲ್ಲಾ ರೂಂಗಳನ್ನು ನವೆಂಬರ್ 21 ರಿಂದ 23ರವರೆಗೆ ಕಾಯ್ದಿರಿಸಿದ್ದಾರೆ. ರಾಜ್ಯ ರಾಜಕಾರಣದಲ್ಲಿ ಕ್ಷಣಕ್ಕೊಂದು ಬೆಳವಣಿಗೆಯಾಗುತ್ತಿದ್ದು, ಬಣ ರಾಜಕೀಯ ಆರಂಭವಾಗಿದೆ.

ಇತ್ತ ಮುಖ್ಯಮಂತ್ರಿ ಸಿದ್ದರಾಮಯ್ಯ ಕಾವೇರಿ ನಿವಾಸದಲ್ಲಿ ತಮ್ಮ ಆಪ್ತ ಸಚಿವರು ಹಾಗೂ ಶಾಸಕರೊಂದಿಗೆ ಸಭೆ ನಡೆಸಿದ್ದಾರೆ. ಸಭೆಯಲ್ಲಿ ಮುಂದಿನ ರಾಜಕೀಯ ಬೆಳವಣಿಗೆಗಳ ಬಗ್ಗೆ ಗಂಭೀರ ಚರ್ಚೆ ನಡೆಸಿದ್ದಾರೆ ಎಂದು ಹೇಳಲಾಗುತ್ತಿದೆ.

ಮಹಾರಾಷ್ಟ್ರ ಮಾದರಿ?: ಪಕ್ಷದ ಸರ್ಕಾರ ಅಸ್ತಿತ್ವಕ್ಕೆ ಬಂದ ಸಂದರ್ಭದಲ್ಲಿ ಮುಖ್ಯಮಂತ್ರಿ ಸ್ಥಾನಕ್ಕೆ ಬಿಗಿಪಟ್ಟು ಹಿಡಿದಿದ್ದ ಡಿ.ಕೆ.ಶಿವಕುಮಾರ್, ಪಕ್ಷದ ನಾಯಕರಾದ ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಹಾಗೂ ಮಲ್ಲಿಕಾರ್ಜುನ ಖರ್ಗೆಯವರ ಮನವೊಲಿಕೆ ಬಳಿಕ ತಮ್ಮ ಪಟ್ಟು ಸಡಿಲಿಸಿ ಸರ್ಕಾರ ರಚನೆಗೆ ಸಹಕರಿಸಿದ್ದಲ್ಲದೇ ಎರಡೂವರೆ ವರ್ಷದಿಂದ ಯಶಸ್ವಿಯಾಗಿ ಕಾರ್ಯ ನಿರ್ವಹಣೆಗೆ ಹೆಗಲು ನೀಡಿದ್ದರು. ಆದರೆ ಈಗ ಮಾತಿನಂತೆ ತಮಗೆ ಅಧಿಕಾರ ದಕ್ಕದೇ ಇರುವುದಕ್ಕೆ ಹತಾಶರಾಗಿದ್ದು, ತಮ್ಮದೇ ರಾಜಕೀಯ ದಾಳ ಉರುಳಿಸುವ ಪ್ರಯತ್ನಕ್ಕೆ ಮುಂದಾಗಿದ್ದಾರೆ. ಡಿ.ಕೆ.ಶಿವಕುಮಾರ್ ಅವರನ್ನು ಹತ್ತಿರದಿಂದ ಬಲ್ಲವರು, ಈ ಹಿಂದೆ ಮಹಾರಾಷ್ಟ್ರದಲ್ಲಿ ಶಿವಸೇನೆಯಿಂದ ಸಿಡಿದು ಸರ್ಕಾರ ರಚನೆಗೆ ಏಕನಾಥ್ ಶಿಂದೆ ನಾಂದಿ ಹಾಡಿದ ಬೆಳವಣಿಗೆಯನ್ನು ಸ್ಮರಿಸಿಕೊಳ್ಳುತ್ತಿದ್ದಾರೆ.

ಡಿನ್ನರ್ ಮೀಟಿಂಗ್

ಚಾಮರಾಜನಗರ ಜಿಲ್ಲಾ ಪ್ರವಾಸದಿಂದ ವಾಪಸ್ಸಾದ ಮುಖ್ಯಮಂತ್ರಿ ಸಿದ್ದರಾಮಯ್ಯರನ್ನು ಭೇಟಿಯಾದ ಬಳಿಕ ಸಚಿವರಾದ ಸತೀಶ್ ಜಾರಕಿಹೊಳಿ, ಹೆಚ್.ಸಿ. ಮಹದೇವಪ್ಪ, ಮಾಜಿ ಸಚಿವ ಕೆ.ಎನ್. ರಾಜಣ್ಣ ಹಾಗೂ ಇತರರು ಸತೀಶ್ ಜಾರಕಿಹೊಳಿ ನಿವಾಸದಲ್ಲಿ ಡಿನ್ನರ್ ಮೀಟಿಂಗ್ ನಡೆಸಿದ್ದಾರೆ. ಬಳಿಕ ಇವರೆಲ್ಲಾ ರಹಸ್ಯ ಸ್ಥಳಕ್ಕೆ ತೆರಳಿದ್ದಾರೆ ಎಂದು ಮೂಲಗಳು ತಿಳಿಸಿವೆ.

ತಮ್ಮ ಬೆಂಬಲಿತ ಶಾಸಕರು ದೆಹಲಿಗೆ ತೆರಳಿರುವುದು ನನಗೆ ಗೊತ್ತಿಲ್ಲ. ಅಷ್ಟು ಅನುಭವ ನನಗಿಲ್ಲ. ಏನು ನನಗೆ ಗೊತ್ತಿಲ್ಲ. ನನಗೆ ಹುಷಾರಿಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ ಐದು ವರ್ಷವೂ ಮುಖ್ಯಮಂತ್ರಿಯಾಗಿ ಮುಂದುವರೆಯುವುದಾದರೆ ಬಹಳ ಸಂತೋಷ. ಒಟ್ಟಿಗೆ ಕೆಲಸ ಮಾಡುತ್ತೇವೆ.

- ಡಿ.ಕೆ. ಶಿವಕುಮಾರ್

ರಾಜ್ಯದ ವಾಹನ ಸವಾರರಿಗೆ ಭರ್ಜರಿ ಆಫರ್

ಮತ್ತೊಮ್ಮೆ ಟ್ರಾಫಿಕ್ ಫೈನ್ 50% ರಿಯಾಯಿತಿ ಘೋಷಣೆ



ಬೆಂಗಳೂರು, ನ.20– ರಾಜ್ಯದ ವಾಹನ ಸವಾರರಿಗೆ ರಾಜ್ಯ ಸರ್ಕಾರ ಮತ್ತೊಮ್ಮೆ ಮಹತ್ವದ ರಿಯಾಯಿತಿ ಘೋಷಿಸಿದೆ. ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳಲ್ಲಿ ಬಾಕಿ ಇರುವ ದಂಡ ಮೊತ್ತದ ಮೇಲೆ ಶೇ.50 ರಿಯಾಯಿತಿ ನೀಡಲು ಸರ್ಕಾರ ಅಧಿಕೃತ ಆದೇಶ ಹೊರಡಿಸಿದೆ. ಈ ತೀರ್ಮಾನದಿಂದ ಲಕ್ಷಾಂತರ ವಾಹನ ಚಾಲಕರಿಗೆ ಸಂತಸವಾಗಿದೆ.

ಸರ್ಕಾರದ ಆದೇಶದಂತೆ ನಾಳೆಯಿಂದಲೇ ಅಂದರೆ ಸೆಪ್ಟೆಂಬರ್ 21ರಿಂದಲೇ ರಾಜ್ಯ ದಾದ್ಯಂತ ಶೇ.50 ದಂಡ ರಿಯಾಯಿತಿ ಯೋಜನೆ ಜಾರಿಗೆ ಬರಲಿದೆ. ಈ ವಿಶೇಷ ಅವಕಾಶ ಡಿಸೆಂಬರ್ 12 ರವರೆಗೆ ಮಾತ್ರ ಲಭ್ಯವಿರಲಿದೆ. ಚಾಲಕರು ಈ ಅವಧಿ ಯೊಳಗೆ ತಮ್ಮ ದಂಡ ಪಾವತಿಸಬಹುದು.

ಚಾಮರಾಜನಗರಕ್ಕೆ ಬಂದಷ್ಟು ನನ್ನ ಕುರ್ಚಿ ಗಟ್ಟಿ

● ಮುಖ್ಯಮಂತ್ರಿ ಸಿದ್ದರಾಮಯ್ಯ ಉತ್ಸಾಹದ ನುಡಿ
● ಸಹಕಾರ ಸಪ್ತಾಹ ಸಮಾರೋಪ ಸಮಾರಂಭದಲ್ಲಿ ಭಾಗಿ



ಸುದ್ದಿಗಾರರೊಂದಿಗೆ ಮಾತನಾಡುತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ

ಚಾಮರಾಜನಗರ, ನ.20– ನಾನು ಮೌಢ್ಯಗಳಲ್ಲಿ ನಂಬಿಕೆ ಇಟ್ಟಿಲ್ಲ. ಚಾಮರಾಜನಗರ ಜಿಲ್ಲಾ ಕೇಂದ್ರಕ್ಕೆ 20ಕ್ಕೂ ಹೆಚ್ಚು ಬಾರಿ ಬಂದಿದ್ದೇನೆ. ಇಲ್ಲಿಗೆ ಬಂದಷ್ಟು ನನ್ನ ಕುರ್ಚಿ ಗಟ್ಟಿಯಾಗುತ್ತಲೇ ಇದೆ. ಈ ಬಾರಿ ನನ್ನ ಕುರ್ಚಿಯಷ್ಟೇ ಅಲ್ಲ, ನನ್ನ ಸರ್ಕಾರವೂ ಗಟ್ಟಿಯಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಮಾರ್ಮಿಕವಾಗಿ ನುಡಿದರು.

ನಗರದ ಡಾ. ಬಿ.ಆರ್.ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣದ ಹೆಲಿಪ್ಯಾಡ್‌ನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಚಾಮರಾಜನಗರಕ್ಕೆ ಬಂದರೆ ಅಧಿಕಾರ ಕಳೆದುಕೊಳ್ಳುತ್ತಾರೆ ಎಂಬುದು ಮೂಢನಂಬಿಕೆ. ಐದು ವರ್ಷಗಳಲ್ಲಿ ಜನರಿಗೆ ನೀಡಿದ ಭರವಸೆಗಳನ್ನು ಈಡೇರಿಸಲು ಪ್ರಾಮಾಣಿಕ ಪ್ರಯತ್ನ ನಡೆಸಲಾಗುತ್ತಿದೆ ಎಂದರು.

ಜನರ ಆಶೀರ್ವಾದ ಇರುವ ತನಕ ನಾನೇ ಸಿಎಂ: ಎರಡೂವರೆ ವರ್ಷ ಆದ ಮೇಲೆ ಸಂಪುಟ ಪುನಾರಚನೆ ಮಾಡೋಣ

▶ 10ನೇ ಪುಟಕ್ಕೆ

ಡಿಪ್ಲೋಮಾ, ಪದವಿಯಲ್ಲಿ ಸಹಕಾರ ವಿಷಯ ಓದಿದವರಿಗೆ ನೇಮಕಾತಿಯಲ್ಲಿ ಆದ್ಯತೆ

■ ಸಹಕಾರ ಸಪ್ತಾಹ ಸಮಾರೋಪದಲ್ಲಿ ಸಿದ್ದರಾಮಯ್ಯ ಘೋಷಣೆ ■ ಪ್ರಾಥಮಿಕ, ಪ್ರೌಢ ಶಿಕ್ಷಣದ ಪಠ್ಯದಲ್ಲಿಯೂ ಸಹಕಾರಿ ವಿಷಯ ಸೇರ್ಪಡೆ

ಚಾಮರಾಜನಗರ, ನ.20– ಡಿಪ್ಲೋಮಾ, ಪದವಿಯಲ್ಲಿ ಸಹಕಾರ ವಿಷಯವನ್ನು ವ್ಯಾಸಂಗ ಮಾಡಿದ ವಿದ್ಯಾರ್ಥಿಗಳನ್ನು ಸಹಕಾರ ಸಂಘಗಳ ನೇಮಕಾತಿಯಲ್ಲಿ ಮೊದಲ ಆದ್ಯತೆಯಾಗಿ ಪರಿಗಣಿಸಲಾಗುವುದು. ಸಹಕಾರಿ ತತ್ವಗಳ ವಿಷಯವನ್ನು ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣದ ಪಠ್ಯಕ್ರಮಗಳಲ್ಲಿ ಸೇರ್ಪಡೆ ಮಾಡಲಾಗುವುದು ಎಂದು ಸಹಕಾರ ಸಚಿವರೂ ಆದ ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಣೆ ಮಾಡಿದರು.

ನಗರದ ಡಾ.ಬಿ.ಆರ್. ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆದ 72ನೇ ಸಹಕಾರ ಸಪ್ತಾಹ ಸಮಾರೋಪದಲ್ಲಿ 2 ಮಹತ್ವ ಘೋಷಣೆಯನ್ನು ಮಾಡಿದರು. ಸಹಕಾರಿ ಕ್ಷೇತ್ರವನ್ನು ಮತ್ತಷ್ಟು ಅಭಿವೃದ್ಧಿಪಡಿಸಲು ಸರ್ಕಾರ ಮುಂದಾಗಿದೆ. ಈಗಾಗಲೇ ನಮ್ಮ ಸರ್ಕಾರದ ಅವಧಿಯಲ್ಲಿ ಎಸ್‌ಸಿ, ಎಸ್‌ಟಿ ಸಮುದಾಯದವರಿಗೆ ಸಹಕಾರ ಸಂಘಗಳಲ್ಲಿ ಉಚಿತವಾಗಿ ಸದಸ್ಯತ್ವ ಕಲ್ಪಿಸಲಾಗುತ್ತಿದೆ. ಈ ನಿಟ್ಟಿನಲ್ಲಿ ಮುಂದಿನ ದಿನಗಳಲ್ಲಿ ಸಹ ಕಾರಿ ಸಂಘಗಳ ಸದಸ್ಯತ್ವವನ್ನು ಹೆಚ್ಚಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು. ಗ್ರಾಮೀಣ ಭಾರತದ ಆರ್ಥಿಕ ಅಭಿವೃದ್ಧಿಗೆ ಪ್ರತೀ ಗ್ರಾಮದಲ್ಲಿ ಒಂದು ಶಾಲೆ, ಒಂದು ಗ್ರಾಮ ಪಂಚಾಯ್ತಿ, ಒಂದು ಸಹಕಾರ ಸಂಘ ಅತ್ಯಗತ್ಯ ಎನ್ನುವುದು ನೆಹರೂ ಅವರ ದೃಷ್ಟಿಯಾಗಿತ್ತು.

▶ 10ನೇ ಪುಟಕ್ಕೆ

ಡ್ರಾಪ್ ಕೊಡುವ ನೆಪದಲ್ಲಿ ಕಾರು ಹತ್ತಿಸಿಕೊಂಡು ನಿರ್ಜನ ಪ್ರದೇಶದಲ್ಲಿ ಸುಲಿಗೆ ಮಾಡುತ್ತಿದ್ದ ಖದೀಮ ಇಂಜಿನಿಯರಿಂಗ್ ವಿದ್ಯಾರ್ಥಿಗಳ ಬಂಧನ

● ಹೊರ ರಾಜ್ಯದ ಕಾರು ಬಳಸಿಕೊಂಡು ವ್ಯವಸ್ಥಿತ ಸುಲಿಗೆ
● ಬಸ್‌ಗಾಗಿ ಕಾಯುತ್ತಿದ್ದವರೇ ಇವರ ಪ್ರಮುಖ ಟಾರ್ಗೆಟ್



ಮಂಡ್ಯ,ನ.20– ಸಾರಿಗೆ ಬಸ್‌ಗಾಗಿ ಕಾಯುವ ಪ್ರಯಾಣಿಕರನ್ನು ಕಾರಿಗೆ ಹತ್ತಿಸಿಕೊಂಡು ಮಾರ್ಗಮಧ್ಯೆ ಅವರನ್ನು ಬೆದರಿಸಿ, ದೋಚುತ್ತಿದ್ದ ಮೂವರು ಇಂಜಿನಿಯರಿಂಗ್ ವಿದ್ಯಾರ್ಥಿಗಳನ್ನು ಮಂಡ್ಯದ ಪೊಲೀಸರು ಬಂಧಿಸಿದ್ದಾರೆ.

ಬೆಂಗಳೂರು ಇಂಜಿನಿಯರಿಂಗ್ ಕಾಲೇಜೊಂದರ ಏಳನೇ ಸೆಮಿಸ್ಟರ್ ವಿದ್ಯಾರ್ಥಿಗಳಾದ ಕಿರಣ್, ಕುಶಾಲ್ ಬಾಬು ಹಾಗೂ ಇವರ ಸಹಪಾಠಿಯೊಬ್ಬನ ಸಹೋದರ ಗೋಕುಲ್ ಬಂಧಿತರು. ಇವರಲ್ಲಿ ಇಬ್ಬರು ಕೋಲಾರ ಮೂಲದವರಾಗಿದ್ದು, ಮತ್ತೋರ್ವ ಬೆಂಗಳೂರಿನವನು.

ಈ ಮೂವರೂ ಸ್ಥಿತಿವಂತ ಕುಟುಂಬದವರಾದರು ಆನ್‌ಲೈನ್ ಬೆಟ್ಟಿಂಗ್ ಇನ್ನಿತರ ದುಶ್ಚಟಗಳಿಗಾಗಿ ಹೆದ್ದಾರಿ ದರೋಡೆಗೆ ಇಳಿದಿದ್ದರು. ಹಣ, ಬೆಲೆಬಾಳುವ ವಸ್ತುಗಳನ್ನು ದೋಚುವುದರ ಜೊತೆಗೆ ಬೆಟ್ಟಿಂಗ್ ಆಪ್‌ಗೆ ಯುಪಿಐ ಮೂಲಕ ಹಣ ವರ್ಗಾವಣೆ ಮಾಡಿಸಿಕೊಳ್ಳುತ್ತಿದ್ದರು.

ಪ್ರಯಾಣಿಕರೇ ಟಾರ್ಗೆಟ್: ಬೆಂಗಳೂರಿನ ಕೆಂಗೇರಿ ಬಸ್ ನಿಲ್ದಾಣದ ಬಳಿ ಮಂಡ್ಯ ಅಥವಾ ಮೈಸೂರಿಗೆ ಬರುವ ಸಾಕಷ್ಟು ಮಂದಿ ಸಾರಿಗೆ ಬಸ್‌ಗಾಗಿ ಕಾದು ನಿಲ್ಲುತ್ತಾರೆ. ಬಸ್ ತುಂಬಾ ರಶ್ ಇದ್ದರೆ ಅಥವಾ ವಿಳಂಬವಾದರೆ ಮಂಡ್ಯ,

▶ 10ನೇ ಪುಟಕ್ಕೆ

ದುಶ್ಚಟಗಳಿಗೆ ದಾಸರಾಗಿದ್ದ ಶೋಕಿಲಾಲ್‌ಗಳು!

ಮಂಡ್ಯ: ಐಷಾರಾಮಿ ಜೀವನ ಹಾಗೂ ದುಶ್ಚಟಗಳಿಗಾಗಿ ಅಮಾಯಕ ಪ್ರಯಾಣಿಕರನ್ನು ಈ ಮೂವರು ಸುಲಿಗೆ ಮಾಡುತ್ತಿದ್ದರು ಎಂದು ಮಂಡ್ಯ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ತಿಳಿಸಿದ್ದಾರೆ.

ಈ ಪ್ರಕರಣದ ಬಗ್ಗೆ ವಿವರಣೆ ನೀಡಿದ ಅವರು, ನ.4ರಂದು ಅಬ್ದುಲ್ ಅವರನ್ನು ಸುಲಿಗೆ ಮಾಡಿದ್ದ ಪ್ರಕರಣದಲ್ಲಿ ತನಿಖೆ ನಡೆಸಿ ಮೂವರು ಆರೋಪಿಗಳನ್ನು ಬಂಧಿಸಲಾಗಿದ್ದು, ಇವರು ಅ.20ರಂದು ಶ್ರೀರಂಗಪಟ್ಟಣ ಠಾಣಾ ವ್ಯಾಪ್ತಿಯ ಕರಿಘಟ್ಟ ಬಳಿ ಮೈಸೂರಿನ ಯತೀಂದ್ರ ಎಂಬುವವರನ್ನು ಬೆದರಿಸಿ,

▶ 10ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಟೀಚರ್ : 8ರ ಅರ್ಧ ಎಷ್ಟು?
ಗುಂಡ : ಅಡ್ಡ ಕೊಯ್ದರೆ ಸೊನ್ನೆ, ಉದ್ದ ಕೊಯ್ದರೆ ಮೂರು!

ಮೈಸೂರು ಮಿತ್ರ

ಶುಕ್ರವಾರ, 21 ನವೆಂಬರ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ.........

ಪೆಟ್ಟು ಕೊಟ್ಟವರಿಗೆ ಮರುಪೆಟ್ಟು ಕೊಡಲು ನಾವು ನೀವ್ಯಾರು? ಪಟ್ಟು ಹಿಡಿಯದೇ ದುಪ್ಪಟ್ಟು ಪೆಟ್ಟು ಕೊಡಲು ಮೇಲೊಬ್ಬ ಇಲ್ಲವೆ?

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಕಣ್ಣಿಗೆ ಕಂಡದ್ದೆಲ್ಲಾ ನುಣ್ಣಗಿರುವುದಿಲ್ಲ.

ನಿಮ್ಮ ಪತ್ರಗಳು

ಯಕ್ಷಗಾನ ಕಲಾವಿದರ ಬಗ್ಗೆ ಅವಹೇಳನಕಾರಿ ಸರಿಯಲ್ಲ

ಮಾನ್ಯರೆ,

ಮೈಸೂರಿನಲ್ಲಿ ಇತ್ತೀಚೆಗೆ ನಡೆದ ಸಮಾರಂಭವೊಂದರಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ. ಪುರುಷೋತ್ತಮ ಬಿಳಿಮಲೆ ತಮ್ಮ ಭಾಷಣದಲ್ಲಿ ಯಕ್ಷಗಾನ ಕಲಾವಿದರಲ್ಲಿ ಬಹುತೇಕರು ಸಲಿಂಗಕಾಮಿಗಳು. ಅಲ್ಲಿ ಅಂತಹ ಅನಿವಾರ್ಯತೆ ಇತ್ತು ಎಂದು ಹೇಳಿಕೆ ನೀಡಿದ್ದಾರೆ. ಯಕ್ಷಗಾನ ಎಂಬುದು ನೂರಾರು ವರ್ಷಗಳ ಹಿಂದಿನಿಂದ ಕರಾವಳಿ ಹಾಗೂ ಮಲೆನಾಡಿನ ಭಾಗದ ಜನರು ಅತ್ಯಂತ ಪ್ರೀತಿಯಿಂದ ಆಸ್ವಾದಿಸುವ ಕಲೆಯಾಗಿದ್ದು ಇನ್ನಿಲ್ಲದ ರೀತಿ ಗೌರವ ನೀಡುತ್ತಾರೆ. ಈ ಯಕ್ಷಗಾನ ಆಟವು ಕರಾವಳಿಯ ಪ್ರಮುಖ ದೇವಾಲಯಗಳ ಆಡಳಿತ ಮಂಡಳಿಯ ವ್ಯಾಪ್ತಿಗೆ ಒಳಪಟ್ಟಿದ್ದು, ಭಾಗವಹಿಸುವ ಕಲಾವಿದರೂ ಸಹ ಅತ್ಯಂತ ಶ್ರದ್ಧೆ, ಭಕ್ತಿಭಾವದ ಹಾಗೂ ಕಟ್ಟುಪಾಡುಗಳನ್ನು ನಿಯಮಾನುಸಾರ ಪಾಲಿಸುವ ಮುಖಾಂತರ ಈ ಮೇಳದಲ್ಲಿ ಭಾಗವಹಿಸಿದ್ದಾರೆ.

ಬಹಳ ಅನಾದಿ ಕಾಲದಿಂದಲೂ ಈ ಪ್ರದೇಶಗಳಲ್ಲಿ ನಡೆಸಿಕೊಂಡು ಬರುತ್ತಿರುವ ಯಕ್ಷಗಾನ ಇದುವರೆವಿಗೂ ಯಾವುದೇ ಒಬ್ಬ ಕಲಾವಿದರ ಬಗ್ಗೆಯಾಗಲಿ ಅಥವಾ ತಂಡದ ಮೇಲಾಗಲಿ ಯಾವುದೇ ಅಪಸ್ವರ ಎದುರಾಗಿಲ್ಲ. ಈಗಲೂ ಈ ಬಾಗದ ಜನರು ದೇವರ ಹರಕೆಯನ್ನು ತೀರಿಸುವ ಮೂಲಕ ಯಕ್ಷಗಾನವನ್ನು ತಮ್ಮ ತಮ್ಮ ಸ್ಥಳಗಳಲ್ಲಿ ಆಡಿಸಲು ಮುಂಚಿತವಾಗಿ ಸಂಬಂಧಪಟ್ಟ ಆಯಾ ದೇವಸ್ಥಾನಕ್ಕೆ ಮುಂಗಡವಾಗಿ ಹಣ ಪಾವತಿಸಿ ತಮ್ಮ ಸರದಿಗಾಗಿ ವರ್ಷಾನುಗಟ್ಟಲೇ ಕಾಯುವ ಪರಿಸ್ಥಿತಿ ಕಾಣಬಹುದು. ಅಷ್ಟೊಂದು ಜನಪ್ರಿಯತೆ ಈ ಭಾಗದ ಜನರಲ್ಲಿ ಯಕ್ಷಗಾನ ಕಲೆ ಹುಟ್ಟುಹಾಕಿದೆ. ಇಂತಹ ಸಂದರ್ಭದಲ್ಲಿ ಅತ್ಯಂತ ಜವಾಬ್ದಾರಿಯುತ ಸ್ಥಾನದಲ್ಲಿ ಇರುವ ವ್ಯಕ್ತಿಗಳು ಈ ಒಂದು ಕಲೆಯ ಕಲಾವಿದರ ಬಗ್ಗೆ ಯಾವುದೇ ಪೂರ್ವಾಪರ ತಿಳಿದುಕೊಳ್ಳದೆ ತಮ್ಮದೇ ಧಾಟಿಯಲ್ಲಿ ಮನಸ್ಸಿಗೆ ಬಂದಂತೆ ಮಾತನಾಡುವ ಮೂಲಕ ತಮ್ಮ ಸ್ಥಾನಕ್ಕೆ ಗೌರವ ತಂದುಕೊಡುವ ಹೇಳಿಕೆ ಅಲ್ಲ.

ಇತ್ತೀಚೆಗೆ ನಾವುಗಳು ಗಮನಿಸಿದಂತೆ ಹಲವಾರು ಪ್ರಭಾವಿಗಳು ತಾವು ಹೊಂದಿರುವ ಜವಾಬ್ದಾರಿ ಕೆಲಸ ಕಾರ್ಯದ ಬಗ್ಗೆ ಮಾತನಾಡುವುದು ಬಿಟ್ಟು ಸದಾಕಾಲ ಸುದ್ದಿಯಲ್ಲಿ ಇರಬೇಕು ಅನ್ನುವ ಏಕೈಕ ಕಾರಣಕ್ಕೆ ಬೇರೆಯವರ ಹಿತಾಶಕ್ತಿಗೆ ಧಕ್ಕೆ ತರುವ ಹೇಳಿಕೆ ನೀಡುವ ಪ್ರವೃತ್ತಿ ಎಲ್ಲಾ ರಂಗಗಳಲ್ಲೂ ಕಾಣಬಹುದು. ಹಾಗೆಯೇ ಇದರಿಂದ ಪ್ರತಿರೋಧ ಕಂಡುಬಂದ ಸಂದರ್ಭದಲ್ಲಿ ತಮ್ಮ ಹೇಳಿಕೆ ತಪ್ಪಾಗಿ ಅರ್ಥೈಸಲಾಗಿದೆ ಎಂದು ಸಮಜಾಯಿಸಿ ನೀಡಿ ತೇಪೆ ಹಾಕುವ ಕೆಲಸ ಅತ್ಯಂತ ವ್ಯವಸ್ಥಿತವಾಗಿ ನಡೆದುಕೊಂಡು ಬರುತ್ತಿರುವುದು ಕಾಣಬಹುದು. ಇಂತಹ ಪ್ರವೃತ್ತಿ ಜವಾಬ್ದಾರಿಯುತ ಸ್ಥಾನದಲ್ಲಿ ಇರುವವರು ಮುಂದಿನ ದಿನಗಳಲ್ಲಿ ವೇದಿಕೆ ಮೇಲೆ ಮಾತನಾಡುವಾಗ ಸೂಕ್ಷ್ಮತೆ ಕಾಪಾಡಿಕೊಂಡು ಬರುವುದು ಸಮಾಜದಲ್ಲಿ ಸ್ವಾಸ್ತ್ಯ ಕೆಡದಂತೆ ಎಚ್ಚರಿಕೆ ವಹಿಸಿದರೆ ಒಳ್ಳೆಯದು.

–ಜಿ.ಎಸ್. ಗಣೇಶ್ ರಾವ್, ವಿಶ್ವೇಶ್ವರನಗರ, ಮೈಸೂರು

ಕುವೆಂಪುನಗರದಲ್ಲಿ ಕುಡುಕರ ಹಾವಳಿ ತಪ್ಪಿಸಿ

ಮಾನ್ಯರೆ,




ಮೈಸೂರಿನ ಕುವೆಂಪುನಗರದ 'ಐ' ಬ್ಲಾಕ್‌ನ ಕೆ.ಇ.ಬಿ ಆಫೀಸ್ ಹಿಂಭಾಗದ ರಸ್ತೆಯ ಎರಡು ಬದಿಗಳಲ್ಲಿ ರಾತ್ರಿ 8 ಗಂಟೆಯಿಂದ 11 ಗಂಟೆಯ ತನಕ ಕೆಲವು ಕುಡುಕರು ರಸ್ತೆ ಬದಿಯಲ್ಲಿ ತಮ್ಮ ಕಾರು ಆಟೋಗಳನ್ನು ನಿಲ್ಲಿಸಿಕೊಂಡು ಕುಡಿದು ರಸ್ತೆ ಬದಿಯಲ್ಲೇ ಮೂತ್ರ ವಿಸರ್ಜನೆ ಮಾಡಿ ಈ ಭಾಗದಲ್ಲಿ ಓಡಾಡುವ ಜನರಿಗೆ ಒಂದು ರೀತಿಯಲ್ಲಿ ಮಾನಸಿಕ ಹಿಂಸೆ ನೀಡುತ್ತಿದ್ದಾರೆ.

ಈ ರಸ್ತೆಯಲ್ಲಿ ಬೀದಿ ದೀಪಗಳಿಲ್ಲದಿರುವುದು ಕುಡುಕರಿಗೆ ಒಂದು ರೀತಿಯಲ್ಲಿ ಸ್ವರ್ಗವೇನಿಸಿದೆ. ಇದು ಕೇವಲ ಕುವೆಂಪುನಗರದ ಸಮಸ್ಯೆಯಲ್ಲ. ಮೈಸೂರಿನ ಬಹುತೇಕ ಪಾರ್ಕ್‌ಗಳಲ್ಲಿ ಮತ್ತು ಸ್ಟ್ರೀಟ್ ಲೈಟ್ ಇಲ್ಲದೇ ಇರುವ ಕಡೆಗಳಲ್ಲಿ ಈ ರೀತಿಯ ಕುಡುಕರ ಸಮಸ್ಯೆ ಸಾಮಾನ್ಯ ಎನ್ನುವಂತಾಗಿದೆ. ಆದರೆ ಕುವೆಂಪುನಗರದ ಐ ಬ್ಲಾಕ್‌ನ ಆಶ್ಚರ್ಯಕರ ಸಂಗತಿ ಎಂದರೆ ಕೇವಲ ನಾಲ್ಕು ಮಾರು ದೂರದಲ್ಲಿ ಅಶೋಕಪುರಂ ಪೊಲೀಸ್ ಠಾಣೆ ಇದ್ದರೂ, ಈ ಕುಡುಕರಿಗೆ ಯಾವ ಪೊಲೀಸರ ಭಯವೂ ಇಲ್ಲದಂತಾಗಿದೆ. ಮತ್ತೊಂದು ಆತಂಕಕಾರಿ ಸಂಗತಿ ಎಂದರೆ ಈ ಭಾಗದಲ್ಲಿ ಕೆಲವು ಸಭ್ಯರೆನಿಸಿಕೊಂಡವರು ಸಹ ರಾತ್ರಿ ವೇಳೆ ರಸ್ತೆ ಬದಿಯಲ್ಲಿ ಕುಳಿತು ರಾಜಾರೋಷವಾಗಿ ಕುಡಿಯುವುದು ಅನಾಗರಿಕರ ವರ್ತನೆ ಎನ್ನಬಹುದು. ಮೈಸೂರು ನಗರದಲ್ಲಿ ಗರುಡ ಪೊಲೀಸ್ ವ್ಯವಸ್ಥೆ ಇರುವುದಾದರೂ ಏತಕ್ಕೆ? ನಗರದ ಪೊಲೀಸ್ ಕಮೀಷನರ್ ಅವರು ಈ ಬಗ್ಗೆ ಸೂಕ್ತ ಕ್ರಮ ಕೈಗೊಂಡು ರಾತ್ರಿ ವೇಳೆ ಸಾರ್ವಜನಿಕರು ನೆಮ್ಮದಿಯಿಂದ ಓಡಾಡುವ ವ್ಯವಸ್ಥೆ ಕಲ್ಪಿಸುವಂತೆ ಮನವಿ.

–ಬೂಕನಕೆರೆ ವಿಜೇಂದ್ರ, ಕುವೆಂಪು ನಗರ, ಮೈಸೂರು


ಹದಗೆಟ್ಟಿರುವ ಸಬರ್ಬ್ ಬಸ್ ನಿಲ್ದಾಣದ ರಸ್ತೆ



ಮಾನ್ಯರೆ,

ಮೈಸೂರಿನ ಹಾರ್ಡಿಂಜ್ ವೃತ್ತದಿಂದ ಸಬರ್ಬ್ ಬಸ್ ನಿಲ್ದಾಣದವರೆಗೆ ಕೆಲವು ಕಡೆ ಆಳವಾದ ಗುಂಡಿಗಳಿದ್ದು ಇಲ್ಲಿ ದಿನವೂ ಸಾವಿರಾರು ವಾಹನಗಳು ಸಂಚರಿಸುತ್ತವೆ. ಆಳವಾದ ಗುಂಡಿಗಳಿಂದ ವಾಹನ ಸವಾರರಿಗೆ ಅಪಾಯದ ಭೀತಿ ಎದುರಾಗಿದೆ. ದಯವಿಟ್ಟು ಸಂಬಂಧ ಪಟ್ಟ ಅಧಿಕಾರ ವರ್ಗ ಗುಂಡಿ ಮುಚ್ಚಿ ವಾಹನ ಸವಾರರ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಬೇಕಾಗಿ ವಿನಂತಿ.

–ಡಿ.ಎಂ. ಮಂಜೇಶ್, ಮೈಸೂರು.



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ: 94482 08746/ 97421 79000

ಚಿಂತನೆ

ಶ್ರಮದ ಸಾರ್ಥಕತೆಯೇ ಸುಖವಲ್ಲವೇ...!

ನಾವು ಯಾವಾಗಲೂ ಸುಖವಾಗಿ, ಸಂತೋಷವಾಗಿ ಇರಬೇಕು ಎಂದು ಬಯಸುತ್ತೇವೆ. ಆದರೆ ಅದು ಯಾವಾಗಲೂ ಸಾಧ್ಯವಿಲ್ಲ ಎಂಬುದನ್ನು ಮೊದಲು ಅರಿಯಬೇಕು. ಸುಖ ಬೇಕೆಂದರೆ ಕಷ್ಟಪಡಲು ತಯಾರಾಗಿರಬೇಕು. ಹಾಗೆ ನೋಡಿದರೆ ಕಷ್ಟಪಟ್ಟ ನಂತರವೇ ಸುಖದ ಅರಿವಾಗುವುದು. ಯಾವಾಗಲೂ ಸುಖವಾಗಿರಲು ಸಾಧ್ಯವಾಗದು. ಬಾಯಾರಿಕೆಯಾದಾಗ ನೀರು ರುಚಿಸುವುದೇ ವಿನಃ, ಹಾಗೇ ನೀರು ಕುಡಿದಾಗ ಹಿತವೆನಿಸದು.

ನಮ್ಮ ಜೀವನ ಅಷ್ಟು ಸುಲಭವಲ್ಲ. ಆಧುನಿಕತೆ ಬೆಳೆದಂತೆ ನಮ್ಮ ಜೀವನ ಸುಖಮಯವಾಗುವುದರ ಬದಲು ಬವಣೆಯೆಡೆಗೆ ಸಾಗುವಂತೆ ಆಗುತ್ತಿದೆ. ನಮ್ಮ ಸುಖ, ಸೌಲಭ್ಯಕ್ಕಾಗಿ ನಾವು ಅನೇಕ ಯಂತ್ರೋಪಕರಣಗಳನ್ನು ಕಂಡುಹಿಡಿದು, ಈಗ ಜೀವನ ಸುಲಭ ಎಂದುಕೊಂಡೆವು. ನಿಜ, ಯಂತ್ರಗಳು ನಮ್ಮ ಕೆಲಸವನ್ನು ವೇಗವಾಗಿ, ನಿಖರವಾಗಿ ಮಾಡಬಲ್ಲವು. ಆದರೆ ಅದಕ್ಕೆ ಒಂದು ಮಿತಿ ಇರುತ್ತದೆ. ಯಂತ್ರವನ್ನು ಕಂಡುಹಿಡಿದ ನಮಗೆ ಅವುಗಳಿಲ್ಲದೆಯೂ ಜೀವನ ಮಾಡಲು ಬರಬೇಕು. ಇಂದು ಅನೇಕ ಮನೆಗಳಲ್ಲಿ ವಿದ್ಯುತ್ ಕಡಿತವಾದರೆ ಮನೆಯಲ್ಲಿ ಆಹಾರ ತಯಾರಾಗುವುದೇ ಇಲ್ಲ. ನಮಗೆ ಮಿಕ್ಸಿ, ಗ್ರೈಂಡರ್ ಬೇಕು. ಅದಿಲ್ಲದೆ ಅಡುಗೆಯಾಗದು. ವಿದ್ಯುತ್ ಇಲ್ಲದಿದ್ದರೆ ನಮಗೆ ಏನೋ ಕಳೆದುಕೊಂಡಂತೆ ಆಗುತ್ತದೆ. ನಮಗೆ ಅದಕ್ಕೆ ಬದಲಿ ವ್ಯವಸ್ಥೆ ಗೊತ್ತೇ ಇಲ್ಲ. ಹಿಂದೆ ಎಲ್ಲರ ಮನೆಗಳಲ್ಲಿ ರುಬ್ಬುವ ಕಲ್ಲುಗಳು ಇರುತ್ತಿದ್ದವು. ಅದಕ್ಕೆ ವಿದ್ಯುತ್ ಬೇಕಾಗಿರಲಿಲ್ಲ. ಅದರ ಉಪಯೋಗದಿಂದ ವ್ಯವಸ್ಥಿತವಾಗಿ ದೈಹಿಕ ಶ್ರಮವೂ ಆಗುತ್ತಿತ್ತು. ಅಂತಹ ಮನೆಯೊಡತಿಗೆ ಆರೋಗ್ಯದ ಸಮಸ್ಯೆಯೇ ಆಗುತ್ತಿರಲಿಲ್ಲ. ಅಲ್ಲದೆ ಈ ರುಬ್ಬುವ ಕಲ್ಲಿನಿಂದ ಮಾಡಿದ ಹಿಟ್ಟುಗಳು, ಚಟ್ನಿ ಇತ್ಯಾದಿ ರುಚಿಕರವಾಗಿರುತ್ತಿತ್ತು. ಆದರೆ ಮನೆಗೆ ಮಿಕ್ಸಿ, ಗ್ರೈಂಡರ್ ಬಂದ ನಂತರ ನಾವು ಅವುಗಳ ದಾಸರಾದೆವು. ನಮ್ಮ ಉಪಯೋಗಕ್ಕೆ ಎಂದು ಕಂಡುಹಿಡಿದ ಅವುಗಳು ನಮ್ಮನ್ನು, ತಮ್ಮ ಆಳುಗಳಂತೆ ಮಾಡಿಕೊಂಡುಬಿಟ್ಟಿವೆ. ಇಂದು ಕರೆಂಟ್ ಇಲ್ಲದಿದ್ದರೆ ಹೋಟೆಲ್ಲೇ ಗತಿ ಎಂಬಂತೆ ಆಗಿಹೋಗಿದೆ. ಬದಲಿ ವಿಧಾನ ನಮಗೆ ತಿಳಿದಿಲ್ಲ.

ನಮಗೆ ಹಿಂದಿನ ಜೀವನ ಪದ್ಧತಿ ಚೆನ್ನಾಗಿತ್ತು ಎಂಬುದು ತಿಳಿದಿದೆ. ಹಿಂದೆ ದೈಹಿಕ ಶ್ರಮಕ್ಕೆ ಮಹತ್ವವಿತ್ತು. ಶ್ರಮ ಪಟ್ಟ ನಂತರ ಅದನ್ನು ಸುಖವಾಗಿ ಪರಿವರ್ತಿಸಿಕೊಳ್ಳಬಹುದಾಗಿತ್ತು. ಶ್ರಮದ ನಡಿಗೆ, ಶ್ರಮದ ಕೆಲಸ ನಮಗೆ ಸುಖ ನಿದ್ರೆ ತರುತ್ತಿತ್ತು. ಇದು ನಮಗೆ ಗೊತ್ತಿದೆ. ಆದರೂ ಶ್ರಮಪಡಲು ಮನಸ್ಸು ಒಪ್ಪುವುದಿಲ್ಲ. ಸಣ್ಣಪುಟ್ಟ ಕೆಲಸಗಳಿಗೂ ನಮಗೆ ವಾಹನ ಬೇಕು. ಕೆಲವು ಮೀಟರುಗಳಷ್ಟು ದೂರವನ್ನೂ ನಾವು ಕಾಲು ನಡಿಗೆಯಲ್ಲಿ ಕ್ರಮಿಸಲಾರೆವು. ವಾಹನಗಳನ್ನು ಕಂಡುಹಿಡಿದಿದ್ದು, ನಮ್ಮ ಕೆಲಸಗಳು ಬೇಗ ಆಗಲಿ ಎಂಬ ಉದ್ದೇಶದಿಂದ. ಆದರೆ ಇಂದು ನಾವು ಅವುಗಳ ದಾಸರಾಗುವಂತೆ ಆಗಿಬಿಟ್ಟಿದೆ.

ಇಂದು ನಮ್ಮ ಕುಟುಂಬ ಪದ್ಧತಿಯಲ್ಲಿ ಶ್ರಮದ ಕೆಲಸಕ್ಕೆ ಹೆಚ್ಚಿನ ಆದ್ಯತೆ ನೀಡುವಂತೆ ಆಗಬೇಕಾಗಿದೆ. ಹಿಂದೆ ಅಡುಗೆ ಮನೆಯ ಕೆಲಸ ಅರ್ಧ ದಿನಕ್ಕಿಂತ ಹೆಚ್ಚಿನ ಸಮಯ ಬಯಸುತ್ತಿತ್ತು. ಆದರೆ ಇಂದು ಯಂತ್ರೋಪಕರಣಗಳು ಇದನ್ನು ಗಂಟೆಗಳಿಗೆ ಇಳಿಸಿವೆ. ಆದರೆ ಅವುಗಳ ಸ್ವಾದ ಮಾತ್ರ ಹಿಂದಿನಂತೆ ಇಲ್ಲ.

ಅಲ್ಲದೆ ಇಂದು ಮನೆಯಲ್ಲಿ ಶ್ರಮ ವಹಿಸಲು ತಂದೆ ತಾಯಿ ಹೆಚ್ಚಾಗಿ ಮುಂದಾಗುವುದರಿಂದ ಮಕ್ಕಳು ಯಾವುದೇ ಶ್ರಮದ ಕೆಲಸಕ್ಕೆ ಮುಂದಾಗುವುದಿಲ್ಲ. ಇಂದಿಗೂ ಐವತ್ತು, ಅರವತ್ತು ವರ್ಷದವರು ಮಾಡುವ ಕೆಲಸವನ್ನು ಇಪ್ಪತ್ತು. ಮೂವತ್ತು ವಯಸ್ಸಿನ ಮಕ್ಕಳು ಮಾಡಲಾರರು. ಹಿಂದೆ ಊರಿನಿಂದ ಊರಿಗೆ ಮೈಲುಗಟ್ಟಲೆ ಸೈಕಲ್ಲುಗಳಲ್ಲಿ, ನಡಿಗೆಯಲ್ಲಿ ಹೋಗುತ್ತಿದ್ದರು. ಆದರೆ ಇಂದು ಆ ದೃಶ್ಯ ಅಪರೂಪ!

ಇತ್ತೀಚೆಗೆ ಕೆಲವರು ಸೇರಿ ಕಾರ್ತಿಕ ಮಾಸದ ವಿಶೇಷ ಏನು ಎಂಬ ವಿಚಾರವಾಗಿ ಚರ್ಚೆ ನಡೆಸಿದರು. ಅವರೆಲ್ಲಾ ಹಿರಿಯ ನಾಗರಿಕರು. ಅವರು ಈ ಹಿಂದೆ ತಮ್ಮ ಯೌವನದಲ್ಲಿ ಆಚರಿಸುತ್ತಿದ್ದ ರೀತಿಯನ್ನು ಸ್ಮರಿಸಿಕೊಂಡರು. ನಮ್ಮ ಹಬ್ಬ-ಹರಿದಿನಗಳು ವೈಜ್ಞಾನಿಕ ಹಿನ್ನೆಲೆಯಲ್ಲಿ ಆಚರಣೆಗೆ ಬಂದಂತಹವು. ಕಾರ್ತಿಕ ಮಾಸದಲ್ಲಿ ದೀಪ ಬೆಳಗುವುದು ವಿಶೇಷ. ಇದರಲ್ಲಿ ವಿಶೇಷ ಏನಿದೆ ಎಂದು ಇಂದಿನ ಮಕ್ಕಳು ಪ್ರಶ್ನಿಸಬಹುದು. ಆದರೆ ಆ ದೀಪಗಳಿಗೆ ಉಪಯೋಗಿಸುತ್ತಿದ್ದ ಎಳ್ಳೆಣ್ಣೆ ನಮಗೆ ಆರೋಗ್ಯ ತಂದುಕೊಡುತ್ತದೆ. ಮನೆಯ ಮುಂದೆ ಇಂತಹ ದೀಪ ಹಚ್ಚಿದರೆ ಕ್ರಿಮಿಕೀಟಗಳು ಬರುವುದಿಲ್ಲ.

> "ನಾವು ಸಂತೋಷವಾಗಿ ಹಾಗೂ ಆರೋಗ್ಯವಾಗಿ ಬದುಕಬೇಕೆಂದರೆ ಶ್ರಮವನ್ನು ನಮ್ಮದಾಗಿಸಿಕೊಳ್ಳಬೇಕು. ಒಬ್ಬ ವಿದ್ಯಾರ್ಥಿ ಓದುವಾಗ ಹೇಗೆ ಸುಖ ಬಯಸಬಾರದೋ ಹಾಗೆ ಜೀವನ ಒಂದು ಹಂತ ತಲುಪುವವರೆಗೆ ಕಷ್ಟದ ವಿಧಾನ ಆರಿಸಿಕೊಳ್ಳಬೇಕು. ಇಂದು ಎಷ್ಟೇ ಶ್ರೀಮಂತರಾದರೂ ವೈದ್ಯರು ಅವರಿಗೆ ಹೇಳುವುದು ಒಂದಷ್ಟು ಶಾರೀರಿಕ ಶ್ರಮ ವಹಿಸಲೇಬೇಕು. ಕನಿಷ್ಠ ದಿನಕ್ಕೆ ಒಂದು ಗಂಟೆಯಾದರೂ ವಾಕಿಂಗ್ ಮಾಡಬೇಕು, ಹಾಗೆಯೇ ಸಿಕ್ಕಿದ್ದನ್ನೆಲ್ಲಾ ತಿನ್ನಬೇಡಿ, ಅವು ಆರೋಗ್ಯಕ್ಕೆ ಪೂರಕವಾಗಿರಲಿ ಎಂದೇ ಹೇಳುತ್ತಾರೆ. ಸುಖ ಬೇಕೆಂದರೆ ಅದರ ಹಿಂದೆ ಶ್ರಮವಿರಬೇಕು, ಕಷ್ಟವಿರಬೇಕು. ಕಷ್ಟದ ನಂತರವೇ ಸುಖವನ್ನು ಅನುಭವಿಸಲು ಸಾಧ್ಯ. ಇದನ್ನು ಅರ್ಥ ಮಾಡಿಕೊಳ್ಳಬೇಕು.

ಅಲ್ಲದೆ ಈ ತಿಂಗಳಿನಲ್ಲಿ ಕತ್ತಲೆ ಜಾಸ್ತಿ. ಹೊರ ಊರಿಗೆ ಹೋದವರು ಸಂಜೆ ಬರುವಾಗ ಕತ್ತಲೆಯಾದರೆ ಮನೆಯ ಮುಂದೆ ಹಚ್ಚುತ್ತಿದ್ದ ದೀಪ ಅವರಿಗೆ ದಾರಿದೀಪವಾಗುತ್ತಿತ್ತು. ಹಿಂದೆ ಈ ಸಮಯದಲ್ಲಿ ಆಕಾಶಬುಟ್ಟಿಗಳನ್ನು ಹಾರಿ ಬಿಡುತ್ತಿದ್ದರು. ಅದೂ ಸಹ ಊರಿನ ಜಾಡು ತಿಳಿಸುತ್ತಿತ್ತು. ಅಲ್ಲದೆ ಹಿಂದೆ ಈ ಎಣ್ಣೆಯ ದೀಪ ಉರಿಸುತ್ತಿದ್ದುದರಿಂದ, ಹಾಗೂ ಅದರ ಬೆಳಕಿನಲ್ಲಿ ಓದುತ್ತಿದ್ದುದರಿಂದ ಕಣ್ಣಿಗೆ ಹೆಚ್ಚು ಶ್ರಮವಾಗುತ್ತಿರಲಿಲ್ಲ. ಹಾಗಾಗಿ ಹಿಂದಿನವರು ಕನ್ನಡಕವನ್ನು ಹೆಚ್ಚು ಉಪಯೋಗಿಸುತ್ತಿರಲಿಲ್ಲ ಎಂಬ ಮಾತುಗಳು ಅಲ್ಲಿ ಕೇಳಿಬಂದವು. ಒಂದು ಹಂತದಲ್ಲಿ ಈ ವಿಚಾರಗಳು ಸರಿ ಎನಿಸುತ್ತವೆ. ನಾವು ಆಧುನಿಕತೆಯ ಹೆಸರಲ್ಲಿ ವಿದ್ಯುತ್ ದೀಪಗಳನ್ನು ಬಳಸಲು ಆರಂಭಿಸಿದ ನಂತರ ಕಣ್ಣುಗಳ ಆರೈಕೆ ಕಡಿಮೆಯಾಗಿ ಇಂದು ದೃಷ್ಟಿ ಸಮಸ್ಯೆ ಹೆಚ್ಚಾಗಿ ಕಂಡುಬರುವಂತಾಗಿದೆ.

ಇದು ಒಂದು ಉದಾಹರಣೆಯಷ್ಟೆ ಇಂತಹ ಹಲವು ಉದಾಹರಣೆಗಳು ನಮ್ಮ ಮುಂದಿವೆ. ಅಲ್ಲೆಲ್ಲಾ ಕಷ್ಟಗಳನ್ನು ಪಡುತ್ತಿದ್ದುದು, ಮುಂದೆ ಸುಖವಾಗಿರುವ ಸಾಧನವಾಗಿ ಕಂಡುಬರುತ್ತಿತ್ತು. ಆದರೆ ಇಂದು ಸುಖವೇ ಪ್ರಧಾನ ಎಂದು ಪರಿಗಣಿಸಿ, ಶ್ರಮದ ಕೆಲಸಗಳಿಗೆ ನಾವು ಮುಂದಾಗುತ್ತಿಲ್ಲ. ಹಿಂದಿನವರು ನಮಗೆ ಹೇಳುತ್ತಿದ್ದುದು, 'ನೀರು ಕುಡಿಯುವ ಮೊದಲು ಬಾಯಾರಿಕೆಯನ್ನು ಅನುಭವಿಸಬೇಕು, ಹಣವನ್ನು ಪಡೆಯುವ ಮೊದಲು ಬಡತನವನ್ನು ಅನುಭವಿಸಬೇಕು, ನಿದ್ರೆಯನ್ನು ಆನಂದಿಸುವ ಮೊದಲು ಆಯಾಸದ ನೋವನ್ನು ಅನುಭವಿಸಬೇಕು, ಪ್ರಪಂಚದ ಯಾವುದೇ ಸಂತೋಷವನ್ನು ಪಡೆಯುವ ಮೊದಲು ದುಃಖವನ್ನು ಅನುಭವಿಸಬೇಕು' ಎಂದು ಹೇಳಲಾಗುತ್ತಿತ್ತು. ಸುಮ್ಮನೇ ಹಣ ಬಂದರೆ ಅದರ ಮೌಲ್ಯ ನಮಗೆ ಅರ್ಥವಾಗುವುದಿಲ್ಲ. ಇದಕ್ಕೆ ಒಂದು ಪ್ರಸಂಗ ನೆನಪಿಗೆ ಬರುತ್ತದೆ. ತಂದೆಯಿಂದ ಪಾಕೆಟ್ ಮನಿ ಪಡೆಯುತ್ತಿದ್ದ ಮಗನಿಗೆ ಹಣದ ಮಹತ್ವವೇ ಗೊತ್ತಿರಲಿಲ್ಲ. ಒಮ್ಮೆ ಮತ್ತಷ್ಟು ಹಣ ಬೇಕೆಂದು ತಂದೆಯನ್ನು ಮಗ ಕೇಳಿದಾಗ, ತಂದೆಯು ನಿನಗೆ ಹಣದ ಮಹತ್ವ ತಿಳಿದಿಲ್ಲ. ಇಂದು ನೀನು ನೂರು ರೂಪಾಯಿಯನ್ನು ಸಂಪಾದಿಸಲು ಎಷ್ಟು ಕಷ್ಟ ಪಡಬೇಕು ಎಂಬುದೇ ನಿನಗೆ ತಿಳಿದಿಲ್ಲ ಎಂದು ಹೇಳಿದಾಗ, ನೂರು ರೂಪಾಯಿ ಸಂಪಾದಿಸುವುದು ಅಷ್ಟು ಕಷ್ಟವೇನಲ್ಲ ಬಿಡಿ ಅಂದರೆ, ಹಾಗಾದರೆ ನೂರು ರೂಪಾಯಿ ಸಂಪಾದಿಸಿ ತೋರಿಸು ಎಂದು ತಂದೆ ಹೇಳುತ್ತಾನೆ. ಮಗ ಪಂದ್ಯ ಒಪ್ಪಿಕೊಳ್ಳುತ್ತಾನೆ. ಅದರಂತೆ ಹಣ ಸಂಪಾದನೆಗೆ ಹೊರಡುತ್ತಾನೆ. ಆದರೆ ನಂತರ ಅವನಿಗೆ ಗೊತ್ತಾಗುತ್ತದೆ ಹಣ ಸಂಪಾದಿಸುವುದು ಕಷ್ಟ, ಯಾರೋ ಕೊಟ್ಟ ಹಣವನ್ನು ಖರ್ಚು ಮಾಡುವುದು ಬಹಳ ಸುಲಭ. ಅದನ್ನು ನಾವೇ ಸಂಪಾದಿಸಬೇಕೆಂದರೆ ಎಷ್ಟು ಕಷ್ಟಪಡಬೇಕಾಗುತ್ತದೆ ಎಂದು ಅವನಿಗೆ ಅರಿವಾಗುತ್ತದೆ. ಇದೇ ಸೂತ್ರ ಅನುಸರಿಸಿ ಹಲವು ಚಲನಚಿತ್ರಗಳೂ ಬಂದು ಹೋಗಿವೆ.

ಮತ್ತೊಂದು ಪ್ರಸಂಗ: ಇಂದು ನಮ್ಮಲ್ಲಿ ಮಾಡುವ ತಪ್ಪುಗಳೆಂದರೆ ಮನೆಯಲ್ಲಿ ಗಂಡಸು ಹೊರಗಿನ ಎಲ್ಲಾ ಕೆಲಸಗಳನ್ನು ಮಾಡಬೇಕು. ಹೆಂಡತಿ ಅಡುಗೆ ಮನೆಯ ಉಸ್ತುವಾರಿ ಹೊರಬೇಕು ಎಂಬುದು. ಅಂದರೆ ಇಬ್ಬರಿಗೂ ಶ್ರಮವಾಗಬಾರದು ಎಂದು. ಒಮ್ಮೆ ವೃದ್ಧ ದಂಪತಿ ಈಗ ನಮಗೆ ವಯಸ್ಸಾಗುತ್ತಿದೆ. ಒಬ್ಬರು ಇಲ್ಲದಿದ್ದರೆ ಮತ್ತೊಬ್ಬರಿಗೆ ಬದುಕು ಕಷ್ಟವಾಗುತ್ತದೆ. ಆದ್ದರಿಂದ ಒಬ್ಬರು ಮಾಡುತ್ತಿರುವ ಕೆಲಸವನ್ನು ನಾವು ಬದುಕಿರುವಾಗಲೇ ಇನ್ನೊಬ್ಬರಿಗೆ ಕಲಿಸಿಬಿಡ ಬೇಕು. ಹಾಗಾದಾಗ ಒಬ್ಬರು ಬೇಗ ಮೃತರಾದರೂ ಮತ್ತೊಬ್ಬರ ಜೀವನ ಕಷ್ಟವಾಗುವುದಿಲ್ಲ ಎಂದು ತೀರ್ಮಾನಿಸಿದರು. ಒಬ್ಬರ ಬಗ್ಗೆ ಮತ್ತೊಬ್ಬರಿಗೆ ಕಾಳಜಿ ಇದ್ದುದರಿಂದ ಈ ತೀರ್ಮಾನ ಮಾಡಿದರು. ಗಂಡ ಯೋಚಿಸಿದ, ನನ್ನ ಹೆಂಡತಿ ಇದುವರೆವಿಗೆ ಎಂದಿಗೂ ಬ್ಯಾಂಕಿಗೆ ಹೋಗಿಲ್ಲ, ಅಂಚೆ ಕಚೇರಿಗೂ ಹೋಗಿಲ್ಲ, ಆಕೆಗೆ ವಿದ್ಯುತ್ ಬಿಲ್ಲು, ಟೆಲಿಫೋನ್ ಬಿಲ್ಲು ಎಲ್ಲಿ ಹಾಗೂ ಹೇಗೆ ಕಟ್ಟಬೇಕು ಎಂಬುದೂ ತಿಳಿದಿಲ್ಲ. ಅವಳಿಗೆ ಆನ್‌ಲೈನ್ ಬ್ಯಾಂಕಿಂಗ್ ಗೊತ್ತಿಲ್ಲ ಇದೆಲ್ಲಾ ಅವಳಿಗೆ ಕಲಿಸಬೇಕು ಎಂದುಕೊಂಡರೆ, ಮಡದಿ ಯೋಚಿಸಿದ್ದು, ಗಂಡನಿಗೆ ಬೆಳಿಗ್ಗೆ ಎದ್ದಾಕ್ಷಣ ಶುಂಠಿ, ಏಲಕ್ಕಿ ಚಹಾಬೇಕು, ಅದೂ ಒಳ್ಳೆಯ ಬಿಸ್ಕತ್ತಿನ ಜೊತೆಗೆ, ಅವರು ಸರಿಯಾದ ಸಮಯಕ್ಕೆ ಉಪಹಾರ ಸೇವಿಸದಿದ್ದರೆ ತಲೆ ಸುತ್ತಿ ಬೀಳುತ್ತಾರೆ, ಅವರಿಗೆ ಸ್ನಾನದ ನಂತರ ತೊಡಲು ಬಟ್ಟೆಗಳು ಸರಿಯಾಗಿ ಸಿಗುವುದಿಲ್ಲ. ಮಧ್ಯಾಹ್ನದ ಊಟ, ವಿಶ್ರಾಂತಿ, ಸಂಜೆಯ ಚಹಾ, ತಿಂಡಿ ಎಲ್ಲವೂ ಸರಿಯಾಗಿರಬೇಕು. ಇಲ್ಲದಿದ್ದರೆ ಅವರ ದೈನಂದಿನ ಬದುಕಿನ ಕ್ರಮದಲ್ಲಿ ವ್ಯತ್ಯಯವಾಗುತ್ತದೆ. ಈಗ ನಾನು ಅದನ್ನೆಲ್ಲಾ ನೋಡಿಕೊಳ್ಳುತ್ತಿದ್ದೇನೆ. ಅಕಸ್ಮಾತ್ ಅವರಿಗಿಂತ ನಾನು ಬೇಗ ಸತ್ತು ಹೋದರೆ ಅವರ ಜೀವನದ ಗತಿ ಏನು? ಅವರಿಗೆ ಇದನ್ನೆಲ್ಲಾ ಕಲಿಸಬೇಕು ಎಂದು ಆಕೆ ಯೋಚನೆ ಮಾಡಿದಳು.

ಅವರವರ ಯೋಚನೆಯಂತೆ ಗಂಡ, ಹೆಂಡತಿಯನ್ನು ಕರೆದುಕೊಂಡು ಹೋಗಿ ಬ್ಯಾಂಕು, ಅಂಚೆ ಕಚೇರಿ, ಇತರೆ ಬಿಲ್ಲು ಕಟ್ಟುವುದು, ಬ್ಯಾಂಕಿನ ಎಟಿಎಂನಿಂದ ಹಣ ಪಡೆಯುವ ಬಗೆ, ಅದಕ್ಕೆ ಉಪಯೋಗಿಸುವ ಪಿನ್ ನಂಬರ್ ಎಲ್ಲವನ್ನೂ ಹೇಳಿಕೊಟ್ಟ, ಮಡದಿಗೆ ತನ್ನ ಸರದಿ ಬಂದಾಗ ಗಂಡನಿಗೆ ಹೇಗೆ ಅಡುಗೆ ಮಾಡಲು ಹೇಳುವುದು ಎಂಬ ಸಂದಿಗ್ಧ. ಅವಳು ಕಾಯಿಲೆಯ ಸುಳ್ಳು ನೆಪ ಹೇಳಿ ಮಲಗಿದಳು. ಗಂಡನಿಂದ ಚಹಾ ಮಾಡಿಸಿದಳು, ಅದನ್ನು ಕುಡಿದು ಚೆನ್ನಾಗಿದೆ ಎಂದಳು. ಬಳಿಕ ಬರಬರುತ್ತಾ ಕನಿಷ್ಠ ಬೇಕಾದ ಅಡುಗೆ ಮಾಡುವುದನ್ನು, ಹೇಳಿಕೊಟ್ಟಳು. ನಂತರ ಇಬ್ಬರೂ ಕಾಲ ಯಮನಿಗೆ ಹೇಳಿದರಂತೆ ಈಗ ನೀನು ಬಾ, ನಾವಿಬ್ಬರೂ ತಯಾರಾಗಿದ್ದೇವೆ ಎಂದು. ಅಂದರೆ ಜೀವನದ ಅಂತ್ಯಕ್ಕೆ ಇಬ್ಬರೂ ಹೀಗೆ ಸಿದ್ಧರಾದರು. ಅವರಿಬ್ಬರಿಗೂ ಶ್ರಮದ ಹಾಗೂ ಮತ್ತೊಬ್ಬರ ಕೆಲಸದ ವಿಧಿಗಳು ಅರಿವಾದವು. ನಂತರ ಬದುಕಿದ್ದಷ್ಟೂ ದಿನ ಇಬ್ಬರೂ ಅನ್ಯೋನ್ಯವಾಗಿದ್ದರು.

ಇಂತಹ ಮನೋಭಾವ ನಮಗೆ ಬೇಕಾಗಿರುವಂತಹದು. ಕೇವಲ ನಮ್ಮ ಸುಖ ಅದಾಗೇ ಬರಲಿ ಎಂಬುದಕ್ಕಿಂತ ಆ ಸುಖವನ್ನು ಅನುಭವಿಸುವುದು ಹೇಗೆ ಎಂಬುದನ್ನೂ ಕಂಡುಕೊಳ್ಳಬೇಕು. ಇಂದು ಆಧುನಿಕ ಯಂತ್ರೋಪಕರಣಗಳ ಬಳಕೆಗೆ ಒಂದು ಮಿತಿಯನ್ನು ಹಾಕಿಕೊಳ್ಳಬೇಕು. ಅವುಗಳ ಉಪಯೋಗವನ್ನು ಕನಿಷ್ಟ ಮಟ್ಟಕ್ಕೆ ತಂದುಕೊಳ್ಳಬೇಕು. ಅನಿವಾರ್ಯವಾದರೆ ಹೊರತು ಅವುಗಳ ಉಪಯೋಗ ಸಲ್ಲ ಎಂಬ ಮನೋಭಾವ ನಮ್ಮದಾಗಬೇಕು. ಹಿಂದಿನವರು ಮಾಡಿಟ್ಟ ಪದ್ಧತಿಗಳು ಯಾವುದೂ ಅರ್ಥವಿಲ್ಲದವಲ್ಲ. ನಾವು ಸಂತೋಷವಾಗಿ ಹಾಗೂ ಆರೋಗ್ಯವಾಗಿ ಬದುಕಬೇಕೆಂದರೆ ಶ್ರಮವನ್ನು ನಮ್ಮದಾಗಿಸಿಕೊಳ್ಳಬೇಕು. ಒಬ್ಬ ವಿದ್ಯಾರ್ಥಿ ಓದುವಾಗ ಹೇಗೆ ಸುಖ ಬಯಸಬಾರದೋ ಹಾಗೆ ಜೀವನ ಒಂದು ಹಂತ ತಲುಪುವವರೆಗೆ ಕಷ್ಟದ ವಿಧಾನ ಆರಿಸಿಕೊಳ್ಳಬೇಕು. ಇಂದು ಎಷ್ಟೇ ಶ್ರೀಮಂತರಾದರೂ ವೈದ್ಯರು ಅವರಿಗೆ ಹೇಳುವುದು ಒಂದಷ್ಟು ಶಾರೀರಿಕ ಶ್ರಮ ವಹಿಸಲೇಬೇಕು. ಕನಿಷ್ಠ ದಿನಕ್ಕೆ ಒಂದು ಗಂಟೆಯಾದರೂ ವಾಕಿಂಗ್ ಮಾಡಬೇಕು, ಹಾಗೆಯೇ ಸಿಕ್ಕಿದ್ದನ್ನೆಲ್ಲಾ ತಿನ್ನಬೇಡಿ, ಅವು ಆರೋಗ್ಯಕ್ಕೆ ಪೂರಕವಾಗಿರಲಿ ಎಂದೇ ಹೇಳುತ್ತಾರೆ. ಸುಖ ಬೇಕೆಂದರೆ ಅದರ ಹಿಂದೆ ಶ್ರಮವಿರಬೇಕು, ಕಷ್ಟವಿರಬೇಕು. ಕಷ್ಟದ ನಂತರವೇ ಸುಖವನ್ನು ಅನುಭವಿಸಲು ಸಾಧ್ಯ. ಇದನ್ನು ಅರ್ಥ ಮಾಡಿಕೊಳ್ಳಬೇಕು.

ಬೆಂಗಳೂರು ದರೋಡೆ ಪ್ರಕರಣದ ಆರೋಪಿಗಳ ಸುಳಿವು ಸಿಕ್ಕಿದೆ

ಬೆಂಗಳೂರು: ಬೆಂಗಳೂರಿನಲ್ಲಿ ಹಾಡ ಹಗಲೇ ನಡೆದ ದರೋಡೆ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿಗಳ ಸುಳಿವು ಸಿಕ್ಕಿದ್ದು, ಶೀಘ್ರದಲ್ಲೇ ಬಂಧನಕ್ಕೊಳಪಡಿಸಲಾಗುವುದು ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಹೇಳಿದ್ದಾರೆ.

ವಿಧಾನಸೌಧದಲ್ಲಿ ಮಾತನಾಡಿದ ಅವರು, ಎಟಿಎಂಗಳಲ್ಲಿ ಹಣ ಇಡುವ ಬಗ್ಗೆ ಆರೋಪಿಗಳಿಗೆ ಮಾಹಿತಿ ನೀಡಲಾಗಿದೆ. ಈ ಬಗ್ಗೆ ಮಾಹಿತಿ ನೀಡಿದ ವ್ಯಕ್ತಿಯನ್ನು ಗುರುತಿಸಲು ಪೊಲೀಸರು ಪ್ರಯತ್ನ ನಡೆಸುತ್ತಿದ್ದಾರೆ. ಎಟಿಎಂಗಳಿಗೆ ಹಣ ಹಾಕುವ ಮಾಹಿತಿಯನ್ನು ಆರೋಪಿಗಳಿಗೆ ಯಾರೋ ನೀಡಿದ್ದಾರೆ. ಮಾಹಿತಿ ಕೊಟ್ಟಿದ್ದು ಯಾರು, ಹಣ ಹಾಕುವವರಲ್ಲಿ ಯಾರಾದರೂ ಇದರ ಹಿಂದೆ ಇದ್ದಾರೆಯೇ ಎಂಬುದರ ಬಗ್ಗೆ ಈಗಷ್ಟೇ ಮಾಹಿತಿ ಸಿಕ್ಕಿದೆ. ಈ ಪ್ರಕರಣವನ್ನು ಗಂಭೀರವಾಗಿ ತೆಗೆದುಕೊಂಡಿದ್ದೇವೆ. ನಗರದಲ್ಲಿ ಹಗಲು ಹೊತ್ತಿನಲ್ಲಿ ಇಂತಹ ಘಟನೆ ನಡೆದಿರುವುದು ಇದೇ ಮೊದಲು. 7 ಕೋಟಿ ರೂಗೂ ಹೆಚ್ಚು ಮೊತ್ತದ ಹಣ ದರೋಡೆಯಾಗಿದೆ. ವಾಹನ ಸಂಖ್ಯೆ ಎಲ್ಲದರ ಮಾಹಿತಿ ಸಿಕ್ಕಿದೆ. ಕೃತ್ಯ ಎಸಗಿದವರು ಇಲ್ಲಿಯವರಾ? ಹೊರ ರಾಜ್ಯದವರಾ? ತನಿಖೆ ನಡೆಯುತ್ತಿದೆ ಎಂದರು.



ಧರ್ಮಸ್ಥಳ ಕೇಸ್: ಚಾರ್ಜ್‌ಶೀಟ್ ಸಲ್ಲಿಕೆ, ಕೋರ್ಟ್‌ಗೆ ಎಸ್‌ಐಟಿ ಮಹತ್ವದ ಮನವಿ

ಮಂಗಳೂರು, ನ.20– ಧರ್ಮಸ್ಥಳದ ನೂರಾರು ಶವಗಳನ್ನು ಹೂತಿಟ್ಟ ಪ್ರಕರಣ ಕೊನೆಗೂ ಕ್ಲೈಮ್ಯಾಕ್ಸ್ ಹಂತ ತಲುಪಿದೆ. 6 ತಿಂಗಳ ಹೈಡ್ರಾಮಾ, ನಾಲ್ಕು ತಿಂಗಳ ತನಿಖೆಗೆ ಸಂಬಂಧಿಸಿದಂತೆ ಗುರುವಾರ ತನಿಖಾಧಿಕಾರಿ ಜಿತೇಂದ್ರ ಕುಮಾರ್ ನೇತೃತ್ವದಲ್ಲಿ ಚಾರ್ಜ್‌ಶೀಟ್ ಹಾಗೂ ಸುಳ್ಳು ಸಾಕ್ಷ್ಯ ವರದಿಯನ್ನು ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ಕೋರ್ಟ್‌ಗೆ ಸಲ್ಲಿಸಲಾಗಿದೆ. ಸದ್ಯ ಎಸ್‌ಐಟಿ ತನಿಖೆಯ ವರದಿ ಹಲವರಲ್ಲಿ ನಡುಕ ಹುಟ್ಟಿಸಿದ್ದು, ಪ್ರಕರಣದ ಮುಂದಿನ ಬೆಳವಣಿಗೆ ಸಾಕಷ್ಟು ಕುತೂಹಲ ಮೂಡಿಸಿದೆ.

ತನಿಖಾಧಿಕಾರಿ ಜಿತೇಂದ್ರ ಕುಮಾರ್ ದಯಾಮ ನೇತೃತ್ವದ ತಂಡ 7 ಫೈಲ್‌ಗಳಲ್ಲಿ 3,932 ಪುಟಗಳ ಪ್ರಾಥಮಿಕ ಹಂತದ ದೋಷಾರೋಪ ಪಟ್ಟಿಯನ್ನು ಕೋರ್ಟ್‌ಗೆ ಸಲ್ಲಿಸಿದೆ. ಆರಂಭದಲ್ಲಿ ಚಿನ್ನಯ್ಯನ ಹೇಳಿಕೆ, ಮಹಜರು, 17 ಹೆಚ್ಚು ಜಾಗದಲ್ಲಿ ನಡೆದಿದ್ದ ಸಮಾಧಿ ಶೋಧ, ಆತನ ಸಂಪರ್ಕದಲ್ಲಿದ್ದ ಮಹೇಶ್ ಶೆಟ್ಟಿ ತಿಮರೋಡಿ, ಗಿರೀಶ್ ಮಟ್ಟಣ್ಣನವರ್, ಸುಜಾತಭಟ್, ವಿಠಲ್‌ಗೌಡ ಹೀಗೆ ಎಲ್ಲರ ಹೇಳಿಕೆಗಳನ್ನೂ ಎಸ್‌ಐಟಿ ತನ್ನ ವರದಿಯಲ್ಲಿ ಉಲ್ಲೇಖಿಸಿದೆ.

ಪ್ರಕರಣ ಸಂಬಂಧ ಮಹೇಶ್ ಶೆಟ್ಟಿ ತಿಮರೋಡಿ ವಿಚಾರಣೆ ಸೇರಿದಂತೆ ಇನ್ನುಳಿದವರ ವಿಚಾರಣೆಗೆ ಎಸ್‌ಐಟಿ ನೋಟಿಸ್ ಕೊಟ್ಟಿದ್ದು, ಸದ್ಯ ವಿಚಾರಣೆಗೆ ಕೋರ್ಟ್ ತಡೆ ಆದೇಶವನ್ನು ನೀಡಿದೆ. ಈ ನಡುವೆಯೂ ಎಸ್‌ಐಟಿ ತಮ್ಮ ವರದಿಯನ್ನು ಬೆಳ್ತಂಗಡಿ ಕೋರ್ಟ್‌ಗೆ ನೀಡಿದೆ. ಕೆಲ ಆರೋಪಿಗಳ ವಿಚಾರಣೆ ಇನ್ನೂ ಬಾಕಿ ಇದೆ. ಜೊತೆಗೆ ಲ್ಯಾಬ್ ರಿಪೋರ್ಟ್ ಕೂಡ ಇನ್ನು ಬಂದಿಲ್ಲ. ಆದ್ದರಿಂದ ತನಿಖೆ ಮುಂದುವರೆಸಲು ಇನ್ನೂ ಕಾಲಾವಕಾಶ ಬೇಕು ಎಂದು ಎಸ್‌ಐಟಿ ನ್ಯಾಯಾಧೀಶರಲ್ಲಿ ಕೇಳಿದೆ. ಸಂಪೂರ್ಣ ತನಿಖೆ ಬಳಿಕ ಪೂರ್ಣ ಪ್ರಮಾಣದ ಚಾರ್ಜ್‌ಶೀಟ್ ಸಲ್ಲಿಸುತ್ತೇವೆ ಎಂದು ಹೇಳಿದೆ.

ಎಸ್‌ಐಟಿ ಮಹತ್ವದ ಮನವಿ: ನ್ಯಾಯಾಲಯಕ್ಕೆ ಚಾರ್ಜ್‌ಶೀಟ್ ಸಲ್ಲಿಕೆ ಜೊತೆಗೆ ಮುಂದಿನ ತನಿಖೆಯ ಬಗ್ಗೆ ಮಾರ್ಗದರ್ಶನ ಕೋರಿ ವಾದ ಮಂಡಿಸಲಾಗಿದೆ. ಈವರೆಗಿನ ತನಿಖೆ ಕುರಿತ ಮಧ್ಯಂತರ ಚಾರ್ಜ್‌ಶೀಟ್ ಪರಿಗಣಿಸಿ ಮುಂದಿನ ತನಿಖೆಗೆ ಎಸ್‌ಐಟಿ ಅಧಿಕಾರಿಗಳು ನಿರ್ದೇಶನ ಕೋರಿದ್ದಾರೆ. ಎಸ್‌ಐಟಿ ಸಲ್ಲಿಸಿದ ಮನವಿ ಸ್ವೀಕರಿಸಿದ ಜಡ್ಜ್, ಎಸ್‌ಐಟಿ ಪರ ವಕೀಲರ ವಾದ ಆಲಿಸಿ ವಿಚಾರಣೆ ನಾಳೆಗೆ ಮುಂದೂಡಿದ್ದು, ನಾಳೆ ನಿರ್ದೇಶನ ನೀಡುವ ಸಾಧ್ಯತೆ ಇದೆ. ಬೆಳ್ತಂಗಡಿ ಕೋರ್ಟ್ ವರದಿ ಸಲ್ಲಿಕೆ ಬಳಿಕ ಡಿಜಿಪಿ ಎಸ್‌ಐಟಿ ಮುಖ್ಯಸ್ಥ ಪ್ರಣವ್ ಮೊಹಂತಿ ಸರ್ಕಾರಕ್ಕೂ ವರದಿ ನೀಡಲಿದ್ದಾರೆ. ಒಟ್ಟಿನಲ್ಲಿ ಇಡೀ ದೇಶದಲ್ಲಿ ಕುತೂಹಲ ಕೆರಳಿಸಿದ್ದ ಧರ್ಮಸ್ಥಳ ಕೇಸ್‌ನಲ್ಲಿ ಶವಗಳನ್ನು ಹೂತಿಟ್ಟ ಪ್ರಕರಣ ಕ್ಲೈಮ್ಯಾಕ್ಸ್ ಹಂತಕ್ಕೆ ತಲುಪಿದ್ದು, ಸದ್ಯ ಪ್ರಕರಣದ ಎ1 ಆರೋಪಿಯಾಗಿ ಚಿನ್ನಯ್ಯ ಮಾತ್ರ ಅಂದರ್ ಆಗಿದ್ದಾರೆ. ಇನ್ನುಳಿದವರನ್ನೂ ಎಸ್‌ಐಟಿ ವರದಿ ನಡುಕ ಹುಟ್ಟಿಸಿರುವುದಂತೂ ಸುಳ್ಳಲ್ಲ.

ಪ್ರತಿಭಾ ಕಾರಂಜಿ ಕಾರ್ಯಕ್ರಮ...



ಮೈಸೂರು ತಾಲೂಕು ಕೋಟೆಹುಂಡಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಡಿ.ಸಾಲುಂಡಿ ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿ ಕಾರ್ಯಕ್ರಮವನ್ನು ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಡಿ.ಮಾಲೇಗೌಡ ಉದ್ಘಾಟಿಸಿದರು. ಗೋಪಾಲಪುರ ಗ್ರಾಪಂ ಅಧ್ಯಕ್ಷ ದಳಪತಿ ಮಹದೇವು, ಧನಗಹಳ್ಳಿ ಗ್ರಾಪಂ ಸದಸ್ಯರಾದ ಕೋಟೆಹುಂಡಿ ಸುರೇಶ್, ಪಾಪಣ್ಣ, ಮಾಲಮ್ಮ, ಎಸ್‌ಡಿಎಂಸಿ ಅಧ್ಯಕ್ಷ ಬೀರಪ್ಪ, ಮಾಜಿ ಅಧ್ಯಕ್ಷ ರಾಜು, ಮುಖಂಡರಾದ ದಾಸೇಗೌಡ, ಬಿಆರ್‌ಸಿ ಗೀತಾ, ಶಿಕ್ಷಕರ ಸಂಘದ ಕಾರ್ಯದರ್ಶಿ ಸುಮತಿ, ಕ್ಲಸ್ಟರ್ ಸಂಪನ್ಮೂಲ ವ್ಯಕ್ತಿ ಜ್ಯೋತಿ, ಸಹಾಯಕ ಯೋಜನಾಧಿಕಾರಿ ಮಹದೇವಸ್ವಾಮಿ, ರಘು, ವೆಂಕಟೇಶ್, ಅಶೋಕ್, ವೆಂಕಟೇಶ್, ರೇಖಾ, ಮಂಜುನಾಥ್, ಅಂಬುಜಾ, ಗೀತಾ ಹಲವರು ಉಪಸ್ಥಿತರಿದ್ದರು.

ಹುಣಸೂರು ತಾಲೂಕು ವ್ಯಾಪ್ತಿ ಹಿರಿಕ್ಯಾತನಹಳ್ಳಿ–2 ಅಂಗನವಾಡಿ ಕೇಂದ್ರದ ನೇಮಕಾತಿ ಅಧಿಸೂಚನೆ ರದ್ದು

ಮೈಸೂರು,ನ.20–ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ ಹುಣಸೂರು ಶಿಶು ಅಭಿವೃದ್ಧಿ ಯೋಜನಾ ವ್ಯಾಪ್ತಿಯಲ್ಲಿ ಖಾಲಿ ಇರುವ ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರನ್ನು ಗೌರವಧನ ಆಧಾರದ ಮೇಲೆ ಆಯ್ಕೆ ಮಾಡಲು ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿತ್ತು. ಆದರೆ ಉಪನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮೈಸೂರು ಆಡಳಿತಾತ್ಮಕ ಕಾರಣದಿಂದ ಹಿರಿಕ್ಯಾತನಹಳ್ಳಿ–2 ಅಂಗನವಾಡಿ ಕಾರ್ಯಕರ್ತೆ ನೇಮಕಾತಿ ಅಧಿಸೂಚನೆಯನ್ನು ರದ್ದುಪಡಿಸಿರುವುದರಿಂದ ಸದರಿ ಅಂಗನವಾಡಿ ಕೇಂದ್ರವನ್ನು ನೇಮಕಾತಿ ಅಧಿಸೂಚನೆಯಿಂದ ಕೈಬಿಡಲಾಗಿದೆ. ಆದ್ದರಿಂದ ಹುಣಸೂರು ಶಿಶು ಅಭಿವೃದ್ಧಿ ಯೋಜನಾ ವ್ಯಾಪ್ತಿಯಲ್ಲಿ 12 ಅಂಗನವಾಡಿ ಕಾರ್ಯಕರ್ತೆ ಹುದ್ದೆಗಳು ಖಾಲಿ ಇದ್ದು, ವೆಬ್‌ಸೈಟ್ https://karnemakaone.kar.nic.in/abcd ಮೂಲಕ ಡಿ.8ರ ಸಂಜೆ 5.30 ರೊಳಗೆ ಅರ್ಜಿಯನ್ನು ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿ, ಹುಣಸೂರು ಹಳೇ ಬಸ್ ನಿಲ್ದಾಣದ ಮುಂಭಾಗ ಹುಣಸೂರು ಇವರನ್ನು ಸಂಪರ್ಕಿಸಬಹುದಾಗಿದೆ ಎಂದು ಹುಣಸೂರು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com


ಜನತಾದಳ (ಜಾತ್ಯತೀತ)
25
ವರ್ಷಗಳು
ರಜತ ಮಹೋತ್ಸವ
2025
SILVER JUBILEE
ರಜತ ಮಹೋತ್ಸವ ಸಂಭ್ರಮ
ದಿನಾಂಕ: 22.11.2025ನೇ ಶನಿವಾರ
ಸ್ಥಳ: ಪಕ್ಷದ ಕಚೇರಿ ಜೆ.ಪಿ ಭವನ, ಬೆಂಗಳೂರು
ಕರ್ನಾಟಕದ ಸಮಗ್ರ ಅಭಿವೃದ್ಧಿಗಾಗಿ
ಜೆಡಿಎಸ್ ಬೆಂಬಲಿಸಿ
ಸರ್ವರಿಗೂ ಸುಸ್ವಾಗತ
VISMAYA
ADVERTISERS
8050302424

ಸಂತಾನ ಹರಣ ಶಸ್ತ್ರ ಚಿಕಿತ್ಸೆ ವಿಫಲ, ಮತ್ತೆ ಗರ್ಭಿಣಿಯಾದ ಮಹಿಳೆ

ವೈದ್ಯಾಧಿಕಾರಿಗೆ ಬೆದರಿಕೆ ಹಾಕಿ ಹಣಕ್ಕೆ ಬೇಡಿಕೆ ಇಟ್ಟ ನಾಲ್ವರ ವಿರುದ್ಧ ಪ್ರಕರಣ ದಾಖಲು



ಕೊಡಗು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ಮನವಿ ಸಲ್ಲಿಸುತ್ತಿರುವ ವೈದ್ಯಾಧಿಕಾರಿ ಮತ್ತು ವೈದ್ಯರ ತಂಡ.

"ವೈದ್ಯರಿಂದ ದೌರ್ಜನ್ಯ ನಡೆದಿದ್ದಲ್ಲಿ ಆ ಕುರಿತು ಪೊಲೀಸರಿಗೆ ದೂರು ನೀಡಬಹುದು. ಈ ದೂರನ್ನು ಮೆಡಿಕಲ್ ಕಮಿಟಿಗೆ ಕಳುಹಿಸಿ ತನಿಖೆಗೆ ಶಿಫಾರಸು ಮಾಡಿ ಕಮಿಟಿ ನೀಡಿದ ವರದಿ ಆಧರಿಸಿ ವೈದ್ಯರು ತಪ್ಪೆಸಗಿದ್ದರೆ ಎಫ್‌ಐಆರ್ ಮಾಡಲು ಅವಕಾಶವಿದೆ. ಆದರೆ ಏಕಾಏಕಿ ವೈದ್ಯರ ವಿರುದ್ಧ ಲೈಂಗಿಕ ದೌರ್ಜನ್ಯ, ಜಾತಿ ನಿಂದನೆ, ಹಣಕ್ಕೆ ಬೇಡಿಕೆ ಇಟ್ಟಲ್ಲಿ ಅಂತಹ ವ್ಯಕ್ತಿಗಳ ವಿರುದ್ಧವೂ ತನಿಖೆ ನಡೆಸಿ ಸೂಕ್ತ ಕಾನೂನು ಕ್ರಮ ಜರುಗಿಸಲಾಗುತ್ತದೆ.

–ಕೆ.ರಾಮರಾಜನ್, ಕೊಡಗು ಎಸ್‌ಪಿ

ಮಡಿಕೇರಿ,ನ.20– ಮಹಿಳೆಯೋರ್ವರ ಸಂತಾನ ಹರಣ ಶಸ್ತ್ರ ಚಿಕಿತ್ಸೆ ವಿಫಲವಾಗಿರುವುದನ್ನು ನೆಪವಾಗಿರಿಸಿಕೊಂಡು ಸರಕಾರಿ ವೈದ್ಯಾಧಿಕಾರಿಗೆ ಬೆದರಿಕೆ ಮತ್ತು ಜಾತಿ ನಿಂದನೆ ಮೊಕದ್ದಮೆ ದಾಖಲಿಸುವ ಬೆದರಿಕೆ ಒಡ್ಡಿ 10 ಲಕ್ಷ ರೂ. ಬೇಡಿಕೆ ಇಟ್ಟ ಆರೋಪದ ಮೇರೆಗೆ ಕುಶಾಲನಗರ ಪೊಲೀಸ್ ಠಾಣೆಯಲ್ಲಿ ಮಹಿಳೆ ಸಹಿತ ಒಟ್ಟು 4 ಮಂದಿ ಮೇಲೆ ಪ್ರಕರಣ ದಾಖಲಿಸಲಾಗಿದೆ.

ಕುಶಾಲನಗರ ಸರಕಾರಿ ಆಸ್ಪತ್ರೆಯ ವೈದ್ಯಾಧಿಕಾರಿ ಡಾ.ಚೇತನ್ ಎಂಬುವರು ದೂರು ನೀಡಿದ್ದು, ಇದರ ಆಧಾರದಲ್ಲಿ ಪ್ರಖ್ಯಾತ್, ಕೂಡಿಗೆ ಚಿಕ್ಕ ಅಳುವಾರದ ರೇಣುಕ, ಸೋಮಶೇಖರ್ ಹಾಗೂ ಮತ್ತೋರ್ವರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಈ ಕುರಿತು ಡಾ. ಚೇತನ್ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಅವರಿಗೂ ದೂರು ನೀಡಿ ಕಿರುಕುಳ ಮತ್ತು ಹಣಕ್ಕೆ ಬೇಡಿಕೆ ಇಟ್ಟವರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಪ್ರಕರಣ ಹಿನ್ನೆಲೆ: ಡಾ.ಚೇತನ್ ಅವರು 2020ರ ಮಾರ್ಚ್ 3ರಂದು ಹೆಬ್ಬಾಲೆಯ ಸರಕಾರಿ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಕುಟುಂಬ ಕಲ್ಯಾಣ ಶಸ್ತ್ರ ಚಿಕಿತ್ಸೆ ಕ್ಯಾಂಪ್ ಮಾಡಿದ್ದು, ಇದರಲ್ಲಿ ಹಲವು ಮಂದಿ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡಿದ್ದರು. 2025ರ ನ.6ರಂದು ಪ್ರಖ್ಯಾತ್ ಎಂಬ ವ್ಯಕ್ತಿ ವೈದ್ಯರಿಗೆ ಕರೆ ಮಾಡಿ ನೀವು ರೇಣುಕ ಎಂಬವರಿಗೆ ಸಂತಾನ ಹರಣ ಶಸ್ತ್ರಚಿಕಿತ್ಸೆ ಮಾಡಿದ್ದು ಸರಿ ಇಲ್ಲ. ಅವರು ಇದೀಗ ಗರ್ಭವತಿಯಾಗಿದ್ದಾರೆ. ಆದ್ದರಿಂದ ನೀವು ಹಣ ನೀಡಬೇಕೆಂದು ಕೇಳಿದ್ದರು. ಇದಕ್ಕೆ ಪ್ರತಿಕ್ರಿಯಿಸಿದ ವೈದ್ಯರು ಕುಟುಂಬ ಕಲ್ಯಾಣ ಶಸ್ತ್ರ ಚಿಕಿತ್ಸೆ ಮಾಡಿದ ನಂತರ 0.5 ರಿಂದ ಶೇ.1ರವರೆಗೆ ಮತ್ತೆ ಗರ್ಭವತಿಯಾಗುವ ಸಾಧ್ಯತೆ ಇರುತ್ತದೆ. ಈ ರೀತಿ ಆಗಿರುವುದಕ್ಕೆ ಕುಟುಂಬ ಕಲ್ಯಾಣ ಯೋಜನೆ ಅಡಿಯಲ್ಲಿ ಸರಕಾರಕ್ಕೆ ಅರ್ಜಿ ಸಲ್ಲಿಸಿದರೆ ನಿಮಗೆ 60 ಸಾವಿರ ರೂ. ಪರಿಹಾರ ಸಿಗುತ್ತದೆ ಎಂದು ಮಾಹಿತಿ ನೀಡಿದ್ದರು. ಇದನ್ನು ನಿರಾಕರಿಸಿದ ಅವರುಗಳು ಒಟ್ಟು 10 ಲಕ್ಷ ರೂ. ನೀಡಬೇಕು. ಇಲ್ಲವಾದಲ್ಲಿ ನಿಮ್ಮ ಬಳಿ ಹಣವನ್ನು ಹೇಗೆ ವಸೂಲಿ ಮಾಡಬೇಕು ಎಂಬುದು ಗೊತ್ತು ಎಂಬುದಾಗಿ ಬೆದರಿಕೆ ಹಾಕಿದ್ದರು.

ಕುಶಾಲನಗರ ಆಸ್ಪತ್ರೆಯಲ್ಲಿ ನ.14 ರಂದು ಕರ್ತವ್ಯ ನಿರ್ವಹಿಸುವ ಸಂದರ್ಭ ಆಡಳಿತ ವೈದ್ಯಾಧಿಕಾರಿ ಡಾ.ಮಧುಸೂದನ್ ಅವರು ಅವರ ಕೊಠಡಿಗೆ ಡಾ. ಚೇತನ್ ಅವರನ್ನು ಕರೆಸಿದ್ದು, ಈ ವೇಳೆಯೂ ಇಬ್ಬರು ಹೆಂಗಸರು ಮತ್ತು ಇಬ್ಬರು ಪುರುಷರು ಕೊಠಡಿಯಲ್ಲಿದ್ದು, ಅಲ್ಲಿದ್ದ ಪ್ರಖ್ಯಾತ್ ಎಂಬಾತ ಮತ್ತೊಮ್ಮೆ 10 ಲಕ್ಷ ರೂ. ನೀಡಬೇಕೆಂದು ಒತ್ತಾಯಿಸಿದಲ್ಲದೇ, ಹಣ ನೀಡದಿದ್ದಲ್ಲಿ ಜಾತಿ ನಿಂದನೆ ಮೊಕದ್ದಮೆ ದಾಖಲಿಸಿ ಜೈಲಿಗೆ ಕಳುಹಿಸುತ್ತೇವೆ. ನಿಮ್ಮನ್ನು ಆಸ್ಪತ್ರೆಯಲ್ಲಿ ಕೆಲಸ ಮಾಡಲು ಬಿಡುವುದಿಲ್ಲ ಎಂದು ಬೆದರಿಕೆ ಒಡ್ಡಿದ್ದರು. ನ.15ರಂದು ಕುಶಾಲನಗರ ತಹಶೀಲ್ದಾರ್ ತಮ್ಮ ಕಚೇರಿಗೆ ಡಾ. ಚೇತನ್ ಅವರನ್ನು ಬರ ಹೇಳಿದ ಸಂದರ್ಭ ಇದೇ ವಿಚಾರವಾಗಿ ಪ್ರಖ್ಯಾತ್ ಮತ್ತು ಜೊತೆಗಾರರ ನಡುವೆ ಚರ್ಚೆ ನಡೆದು ಶಸ್ತ್ರ ಚಿಕಿತ್ಸೆಯ ವಿಚಾರವನ್ನು ಡಾ.ಚೇತನ್ ತಹಶೀಲ್ದಾರ್ ಅವರಿಗೂ ವಿವರಿಸಿದ್ದರು. ಈ ಬೆಳವಣಿಗೆಗಳ ನಡುವೆ ಡಾ. ಚೇತನ್ ಅವರು ಕುಶಾಲನಗರ ಗ್ರಾಮಾಂತರ ಠಾಣಾ ಪೊಲೀಸರು ಮತ್ತು ಜಿಲ್ಲಾ ಸರಕಾರಿ ವೈದ್ಯಾಧಿಕಾರಿಗಳ ಸಂಘ ಹಾಗೂ ಸರಕಾರಿ ನೌಕರರ ಸಂಘದ ಪ್ರಮುಖರ ಜೊತೆ ಜಿಲ್ಲಾಧಿಕಾರಿಗಳು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೂ ದೂರು ನೀಡಿ ಸೂಕ್ತ ಕಾನೂನು ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದರು. ಇದೀಗ 4 ಮಂದಿಯ ವಿರುದ್ಧ ಕುಶಾಲನಗರ ಠಾಣೆಯಲ್ಲಿ ಪ್ರಕರಣ ದಾಖಲಿಸಿ ತನಿಖೆ ಮಾಡಲಾಗುತ್ತಿದೆ.

ಕಾರ್ಯಾಗಾರ

ಮಡಿಕೇರಿ ನ.20– ಸರ್ಕಾರದ ಪಂಚ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಂಬಂಧ ಕೊಡಗು ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್.ಭೋಸರಾಜು ಅವರ ಅಧ್ಯಕ್ಷತೆಯಲ್ಲಿ ನ.22 ರಂದು ಬೆಳಗ್ಗೆ 10.30 ಗಂಟೆಗೆ ಕೊಡಗು ಜಿಲ್ಲಾ ಪಂಚಾಯತ್ ಮುಖ್ಯ ಸಭಾಂಗಣದಲ್ಲಿ ಒಂದು ದಿನದ ಕಾರ್ಯಾಗಾರ ಹಾಗೂ ಜಿಲ್ಲಾ ಮಟ್ಟದ ಪ್ರಗತಿ ಪರಿಶೀಲನಾ ಸಭೆ ನಡೆಯಲಿದೆ ಎಂದು ಜಿ.ಪಂ ಸಿಇಒ ಆನಂದ್ ಪ್ರಕಾಶ್ ಮೀನಾ ಅವರು ತಿಳಿಸಿದ್ದಾರೆ.

ಕೊಡವ ನ್ಯಾಷನಲ್ ಡೇಗೆ ಹಾರ್ವರ್ಡ್ ವಿವಿ ವಿದ್ವಾಂಸ ಡಾ.ಸಂಜೀವ್ ಚೋಪ್ರಾ ಮುಖ್ಯ ಅತಿಥಿ



ಡಾ.ಸಂಜೀವ್

ಮಡಿಕೇರಿ,ನ.20– ಕೊಡವ ನ್ಯಾಷನಲ್ ಕೌನ್ಸಿಲ್ ವತಿಯಿಂದ ನ.26 ರಂದು ನಡೆಯುವ 35 ನೇ ಕೊಡವ ನ್ಯಾಷನಲ್ ಡೇ ಮತ್ತು ಸಂವಿಧಾನ ದಿನಾಚರಣೆಯಲ್ಲಿ ನಿವೃತ್ತ ಐಎಎಸ್ ಅಧಿಕಾರಿ ಹಾಗೂ ಹಾರ್ವರ್ಡ್ ವಿಶ್ವವಿದ್ಯಾನಿಲಯದ ವಿದ್ವಾಂಸ ಡಾ.ಸಂಜೀವ್ ಚೋಪ್ರಾ ಅವರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ ಎಂದು ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ತಿಳಿಸಿದ್ದಾರೆ.

ಪತ್ರಿಕಾ ಹೇಳಿಕೆ ನೀಡಿರುವ ಅವರು ಡಾ.ಸಂಜೀವ್ ಚೋಪ್ರಾ ಅವರು ಖ್ಯಾತ ಹಾರ್ವರ್ಡ್ ವಿದ್ವಾಂಸ, ಇತಿಹಾಸಕಾರ ಮತ್ತು ನಿವೃತ್ತ ಐಎಎಸ್ ಅಧಿಕಾರಿಯಾಗಿದ್ದು, ಕೊಡವ ನ್ಯಾಷನಲ್ ಡೇಯಲ್ಲಿ ಭಾರತೀಯ ಸಂವಿಧಾನದ 5ನೇ ಶೆಡ್ಯೂಲ್ ಪಟ್ಟಿ ಅಡಿಯಲ್ಲಿ ಕೊಡವ ಲ್ಯಾಂಡ್ ಭೌಗೋಳಿಕ–ರಾಜಕೀಯ ಸ್ವಾಯತ್ತತೆಗಾಗಿ ಕೊಡವ ಅನ್ವೇಷಣೆಯ ಕುರಿತು ಭಾಷಣ ಮಾಡಲಿದ್ದಾರೆ ಎಂದು ಹೇಳಿದ್ದಾರೆ ಕೊಡವ ಲ್ಯಾಂಡ್ ಭೌಗೋಳಿಕ–ರಾಜಕೀಯ ಸ್ವಾಯತ್ತತೆ ಮತ್ತು ಸ್ವ–ಆಡಳಿತ, ಎಸ್‌ಟಿ ವರ್ಗೀಕರಣ, ಕೊಡವ ಸ್ಯಾಕ್ರಮೆಂಟಲ್ ಗನ್–ತೋಕ್ ಹಕ್ಕು ಸೇರಿದಂತೆ ಹಕ್ಕೊತ್ತಾಯಗಳನ್ನು ಕೊಡವ ಮಂಡಿಸಲಾಗುವುದು ಎಂದು ಎನ್.ಯು.ನಾಚಪ್ಪ ತಿಳಿಸಿದ್ದಾರೆ.

ಒಳಮೀಸಲಾತಿ ಪೂರ್ಣ ಪ್ರಮಾಣದಲ್ಲಿ ಜಾರಿ ಮಾಡುವಂತೆ ಸಿಎಂಗೆ ಮನವಿ



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸುತ್ತಿರುವ ಮುಖಂಡರು.

ಚಾಮರಾಜನಗರ, ನ.20– ಒಳ ಮೀಸಲಾತಿ ಸಮಗ್ರವಾಗಿ ಪೂರ್ಣ ಪ್ರಮಾಣದಲ್ಲಿ ಜಾರಿ ಮಾಡುವಂತೆ ಒತ್ತಾಯಿಸಿ ಮಾದಿಗ ಮೀಸಲಾತಿ ಹೋರಾಟ ಸಮಿತಿ ವತಿಯಿಂದ ನಗರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಲಾಯಿತು.

ಕರ್ನಾಟಕ ರಾಜ್ಯದಲ್ಲಿ ಪರಿಶಿಷ್ಟ ಜಾತಿಯಲ್ಲಿ ಮಾದಿಗ ಸಮುದಾಯವು ಹೆಚ್ಚಿನ ಸಂಖ್ಯೆಯಲ್ಲಿದ್ದು ಈ ಸಮುದಾಯವು ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ರಾಜಕೀಯವಾಗಿ, ಆರ್ಥಿಕವಾಗಿ ಎಲ್ಲಾ ರಂಗಗಳಲ್ಲೂ ತುಂಬಾ ಹಿಂದುಳಿದ್ದು, ಈ ಸಂಬಂಧ ಸುಮಾರು 35 ವರ್ಷಗಳಿಂದಲೂ ನಿರಂತರವಾಗಿ ಒಳಮೀಸಲಾತಿ ಹೋರಾಟವನ್ನು ಮಾಡಿಕೊಂಡು ಬಂದಿದ್ದೇವೆ. ನಮ್ಮ ಹೋರಾಟವನ್ನು ಮನಗಂಡ ಸುಪ್ರೀಂ ಕೋರ್ಟ್ ಆಗಸ್ಟ್ 2024ರಲ್ಲಿ ಕೊಡಬೇಕೆಂಬ ಒಳಗಾಗಿ ಎಲ್ಲಾ ರಂಗಗಳಲ್ಲೂ ಅನ್ಯಾಯವಾಗಿರುವ ಮಾದಿಗ ಸಮುದಾಯಕ್ಕೆ ಒಳಮೀಸಲಾತಿ ಜಾರಿ ಮಾಡಬೇಕೆಂದು ಸುಪ್ರೀಂಕೋರ್ಟ್ ಆದೇಶ ಮಾಡಿರುತ್ತದೆ.

ಪಕ್ಕದ ರಾಜ್ಯಗಳಾದ ತೆಲಂಗಾಣ ಮತ್ತು ಆಂಧ್ರಪ್ರದೇಶ ಈಗಾಗಲೇ ಬಡ್ತಿ, ಮುಂಬಡ್ತಿ ಶೈಕ್ಷಣಿಕವಾಗಿ, ರಾಜಕೀಯವಾಗಿ ಒಳಮೀಸಲಾತಿ ಜಾರಿ ಮಾಡಿರುತ್ತಾರೆ ಮಾದಿಗ ಸಮಾಜದ ಹೋರಾಟದ ಮನಗಂಡ ಸರ್ಕಾರ 2025 ಆ.19 ರಂದು ಒಳಮೀಸಲಾತಿ ಜಾರಿ ಮಾಡಲು ಕ್ಯಾಬಿನೆಟ್ ಸಭೆಯಲ್ಲಿ ಅನುಮೋದನೆಯಾಗಿರುತ್ತದೆ. ಆದರೆ ಈ ಸಮುದಾಯಕ್ಕೆ ಒಳಮೀಸಲಾತಿ ಜಾರಿಯಾಗದ್ದರಿಂದ ತುಂಬಾ ಅನ್ಯಾಯವಾಗಿರುತ್ತದೆ. ಬಡ್ತಿ ಮತ್ತು ಮುಂಬಡ್ತಿ, ಸರ್ಕಾರದಲ್ಲಿ ಒಳಗೊಳಗೆ ಈ ಸಮಾಜಕ್ಕೆ ಅನ್ಯಾಯವಾಗುತ್ತಿದೆ. ಎಲ್ಲಾ ಇಲಾಖೆಗಳಲ್ಲೂ ಪ್ರವರ್ಗ ಎ ಅಡಿಯಲ್ಲಿ ಬಡ್ತಿ ಮುಂಬಡ್ತಿ ಆದೇಶ ಜಾರಿ ಮಾಡಬೇಕು. ಶೈಕ್ಷಣಿಕವಾಗಿ ನಮ್ಮ ಸಮಾಜದ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಉನ್ನತ ವ್ಯಾಸಂಗಕ್ಕೆ ಅನುವು ಮಾಡಿಕೊಡಬೇಕು.

ಮೈಸೂರು ಯುನಿವರ್ಸಿಟಿಯಲ್ಲಿ ಆಂಧ್ರಪ್ರದೇಶ ಮಾಡಿದ್ದು ನಮ್ಮ ಸಮುದಾಯಕ್ಕೆ ಅನ್ಯಾಯವಾಗಿದೆ ಎಸ್.ಸಿ.ಪಿ. ಮತ್ತು ಟಿ.ಎಸ್.ಪಿ. ಅನುದಾನ ಎಲ್ಲಾ ಇಲಾಖೆಗಳಲ್ಲೂ ಮಾದಿಗ ಸಮುದಾಯದ ಫಲಾನುಭವಿಗಳಿಗೆ ಸಮರ್ಪಕವಾಗಿ ಸಿಗುವಂತಾಗಬೇಕು. ಆದಿಜಾಂಬವ ಅಭಿವೃದ್ಧಿ ನಿಗಮಕ್ಕೆ ಭೂಒಡೆತನ ನೇರ ಸಾಲ, ಕೊಳವೆಬಾವಿ ಯೋಜನೆ ಸಮೃದ್ಧಿ ಯೋಜನೆ ಹಲವಾರು ಯೋಜನೆಗಳಿಗೆ ಹಣ ಮಂಜೂರಾತಿ ಸಮರ್ಪಕವಾಗಿ ಬಳಕೆಯಾಗಬೇಕು. ಸ್ಥಳೀಯ ಸಂಸ್ಥೆಗಳಾದ ಗ್ರಾಮ ಪಂಚಾಯಿತಿ, ತಾಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ, ಪಟ್ಟಣ ಪಂಚಾಯಿತಿ, ಪುರಸಭೆ, ನಗರಸಭೆ, ಮಹಾನಗರಪಾಲಿಕೆಗಳಲ್ಲಿ ಈ ನಮ್ಮ ಹಳೆ ಮೈಸೂರು ಪ್ರಾಂತ್ಯದಲ್ಲಿ ಬರುವಂತೆ ಚುನಾಯಿತ ಪ್ರತಿನಿಧಿಗಳಿದ್ದು, ಜನಸಂಖ್ಯೆಗನುಗುಣವಾಗಿ ಇದುವರೆಗೂ ಸ್ಪರ್ಧೆ ಮಾಡಲು ಅವಕಾಶ ಇರುವುದಿಲ್ಲ ಯಾವುದೇ ಸರ್ಕಾರಿ ನಾಮನಿರ್ದೇಶಿತ ಸದಸ್ಯರುಗಳು ಇರುವುದಿಲ್ಲ. ಆದ್ದರಿಂದ ತಾವು ನ್ಯಾಯಮೂರ್ತಿಗಳಾದ ನಾಗಮೋಹನ್‌ದಾಸ್ ವರದಿಯನ್ನು ಯಥಾವತ್ತಾಗಿ ಜಾರಿಗೆ ತರುವ ಮುಖೇನ ಎ.ಕೆ, ಎ.ಡಿ, ಎ.ಎ ಈ ಗೊಂದಲವನ್ನು ಸರಿಪಡಿಸಿ ಸಮಗ್ರವಾಗಿ ಸಂಪೂರ್ಣ ಒಳಮೀಸಲಾತಿಯನ್ನು ಜಾರಿಗೆ ತರಬೇಕು ಎಂದು ಮುಖ್ಯಮಂತ್ರಿಗಳಿಗೆ ಸಲ್ಲಿಸಿರುವ ಮನವಿಯಲ್ಲಿ ಒತ್ತಾಯಿಸಿದ್ದಾರೆ.

ಈ ಸಂದರ್ಭದಲ್ಲಿ ಒಳಮೀಸಲಾತಿ ಹೋರಾಟ ಸಮಿತಿ ಜಿಲ್ಲಾಧ್ಯಕ್ಷ ಬಸವನಪುರ ರಾಜಶೇಖರ, ಪ್ರಧಾನ ಕಾರ್ಯದರ್ಶಿ ರಾಮಸಮುದ್ರ ಶಿವಕುಮಾರ್, ಉಪಾಧ್ಯಕ್ಷ ಬಸವರಾಜು ದ್ವಾರ್ಕಿ, ಮುತ್ತುರಾಜು, ಸಿದ್ದರಾಜು ಎಲ್‌ಐಸಿ, ಶಿವಮಲ್ಲು ಇತರರು ಹಾಜರಿದ್ದರು.

ಸಿದ್ದರಾಮಯ್ಯ ಇಲ್ಲಾಂದ್ರೆ ಕಾಂಗ್ರೆಸ್ ಇಲ್ಲ



ಚಾಮರಾಜನಗರ : ರಾಜ್ಯದಲ್ಲಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಎರಡೂವರೆ ವರ್ಷ ಪೂರೈಸಿದೆ. ಈ ನಡುವೆ ಸಿದ್ದರಾಮಯ್ಯ ಅವರು ಅಧಿಕಾರ ಹಂಚಿಕೆಗೆ ಸಂಬಂಧಿಸಿದಂತೆ ಸ್ಪಷ್ಟನೆ ನೀಡಿದ ಬೆನ್ನಲ್ಲೇ ಮಾಜಿ ಸಚಿವ ಕೆ.ಎನ್. ರಾಜಣ್ಣ ಅವರು ನೀಡಿರುವ ಹೇಳಿಕೆ ರಾಜಕೀಯದಲ್ಲಿ ಮತ್ತೊಂದು ಸಂಚಲನ ಮೂಡಿಸಿದೆ.

ಕಾರ್ಯಕ್ರಮದ ಬಳಿಕ ಮಾಧ್ಯಮದವರೊಂದಿಗೆ ರಾಜಣ್ಣ ಮಾತನಾಡಿ, ಸಿದ್ದರಾಮಯ್ಯ ಇಲ್ಲಾಂದ್ರೆ ಕಾಂಗ್ರೆಸ್ ಇಲ್ಲ ಎಂದು ಹೇಳಿದರು. ಬಿಜೆಪಿಗೆ ಯಡಿಯೂರಪ್ಪ ಹೇಗೆ ಮುಖ್ಯವೋ, ದೇವೇಗೌಡ ಹಾಗೂ ಮಕ್ಕಳು ಜೆಡಿಎಸ್‌ಗೆ ಹೇಗೆ ಮುಖ್ಯವೋ ಅದೇ ರೀತಿ ಕಾಂಗ್ರೆಸ್‌ಗೆ ಸಿದ್ದರಾಮಯ್ಯ ಅನಿವಾರ್ಯವಾಗಿದ್ದಾರೆ ಎಂದು ಹೇಳಿದರು.

ನಮ್ಮಲ್ಲಿ ಸಿಎಂ ಕುರ್ಚಿ ಖಾಲಿ ಇಲ್ಲ, ಈ ವೇಳೆ ಬದಲಾವಣೆ ಮಾತು ಹೇಗೆ ಬರಲಿದೆ, ನನಗೆ ಮಂತ್ರಿ ಸ್ಥಾನ ಸಿಗುವುದಕ್ಕಿಂತ, ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಿರುವುದು ನನಗೆ ಮುಖ್ಯ ಎನ್ನುವ ಮೂಲಕ ಅವರ ಬೆಂಬಲಕ್ಕೆ ನಿಂತಿದ್ದಾರೆ.

ಡಾ.ಆರ್.ವಿ.ನಾಡಗೌಡರಿಗೆ ಅಭಿನಂದನೆ

ಚಾಮರಾಜನಗರ: ಇತ್ತೀಚೆಗೆ ಕನ್ನಡ ರಾಜ್ಯೋತ್ಸವ ಪ್ರಶಸ್ತಿಗೆ ಆಯ್ಕೆಯಾದ ಯು ಆರ್ ರಾವ್ ಉಪಗ್ರಹ ಕೇಂದ್ರದ ಸಹ ನಿರ್ದೇಶಕ ಡಾ. ಅರ್ ವಿ ನಾಡಗೌಡ ಅವರನ್ನು ಗ್ರ್ಯಾವಿಟಿ ಸೈನ್ಸ್ ಫೌಂಡೇಶನ್ ಅಭಿನಂದಿಸಿದೆ.

ಕ್ರೀಡಾಂಗಣದಲ್ಲಿ ಪೊಲೀಸ್ ಸರ್ಪಗಾವಲು



ಚಾಮರಾಜನಗರ: 72ನೇ ಅಖಿಲ ಭಾರತ ಸಹಕಾರ ಸಪ್ತಾಹ ಸಮಾರೋಪ ಸಮಾರಂಭ ಹಿನ್ನೆಲೆಯಲ್ಲಿ ನಗರದ ಡಾ.ಬಿ.ಆರ್. ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣದಲ್ಲಿ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು.

ಸಮಾರಂಭಕ್ಕೆ ಸಿಎಂ ಸಿದ್ದರಾಮಯ್ಯ ಸೇರಿದಂತೆ ಸಚಿವರು, ಶಾಸಕರು ಸಹಕಾರ ಮಂಡಳಿಯ ಪದಾಧಿಕಾರಿಗಳು ಭಾಗವಹಿಸುವ ಹಿನ್ನೆಲೆಯಲ್ಲಿ ಸಮಾರಂಭಕ್ಕೆ ತೆರಳುವವರನ್ನು ಕ್ರೀಡಾಂಗಣದ ಗೇಟ್‌ನಲ್ಲಿ ತಪಾಸಣೆ ಮಾಡಿ ಬಿಡಲಾಗುತ್ತಿತ್ತು ಹೆಜ್ಜೆ ಹೆಜ್ಜೆಗೂ ಚಾಮರಾಜನಗರ ಜಿಲ್ಲೆ ಪೊಲೀಸ್ ಸಿಬ್ಬಂದಿ ನಿಯೋಜಿಸಿ ಬಂದೋಬಸ್ತ್ ಮಾಡಲಾಗಿತ್ತು ಮೈಸೂರು, ಮಂಡ್ಯ, ಚಾಮರಾಜನಗರದ ವಿವಿಧೆಡೆಗಳಿಂದ ವಾಹನಗಳ ಮೂಲಕ ಸಾವಿರಾರು ಜನರು ಆಗಮಿಸಿ ಸಮಾರಂಭದಲ್ಲಿ ಪಾಲ್ಗೊಂಡರು. ಟ್ರಾಫಿಕ್ ಜಾಮ್ ತಪ್ಪಿಸುವ ನಿಟ್ಟಿನಲ್ಲಿ ನಾಲ್ಕು ಚಕ್ರದ ವಾಹನಗಳು ಹಾಗೂ ದ್ವಿಚಕ್ರ ವಾಹನಗಳಿಗೆ ಪ್ರತ್ಯೇಕವಾಗಿ ಪಾರ್ಕಿಂಗ್ ವ್ಯವಸ್ಥೆ ಮಾಡಲಾಗಿತ್ತು.

ಜಿಲ್ಲೆಯ ವಿವಿಧೆಡೆಗಳಿಂದ ತಂಡೋಪ–ತಂಡವಾಗಿ ವಾಹನಗಳ ಮೂಲಕ ಜನರು ಆಗಮಿಸಿದರು.

ಮೇಕೆದಾಟು ಯೋಜನೆಗೆ ಮಂಡ್ಯ ಜಿಲ್ಲೆಯ 1079 ಹೆಕ್ಟೇರ್ ಪ್ರದೇಶ ಅಗತ್ಯ



ಅಧಿಕಾರಿಗಳ ಸಭೆ ನಡೆಸುತ್ತಿರುವ ಜಿಲ್ಲಾಧಿಕಾರಿ ಡಾ.ಕುಮಾರ.

ಮಂಡ್ಯ: ಕೆಆರ್‌ಎಸ್ ಡ್ಯಾಂ ಭರ್ತಿಯಾದಾಗ ಹೆಚ್ಚುವರಿ ನೀರನ್ನು ಉಳಿಸುವ ನಿಟ್ಟಿನಲ್ಲಿ ಪಕ್ಕದ ಕನಕಪುರ ತಾಲೂಕಿನ ಮೇಕೆದಾಟು ಬಳಿ ನೂತನ ಡ್ಯಾಂ ನಿರ್ಮಿಸಲು ಮಂಡ್ಯ ಜಿಲ್ಲೆಯ 1079 ಹೆಕ್ಟೇರ್ ಪ್ರದೇಶ ಬೇಕಾಗಿದೆ ಎಂದು ಡಿಸಿ ಡಾ.ಕುಮಾರ ಹೇಳಿದರು.

ಗುರುವಾರ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಮೇಕೆದಾಟು ಸಮತೋಲನ ಜಲಾಶಯ ಹಾಗೂ ಕುಡಿಯುವ ನೀರಿನ ಯೋಜನೆ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಚರ್ಚಿಸಲು ಆಯೋಜಿಸಲಾಗಿದ್ದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಮಳವಳ್ಳಿ ತಾಲೂಕಿನ 5 ಗ್ರಾಮಗಳಲ್ಲಿ 1079 ಹೆಕ್ಟೇರ್ ಅರಣ್ಯ ಪ್ರದೇಶ ಮುಳುಗಡೆಯಾಗುತ್ತದೆ ಅದಕ್ಕೆ ಬದಲಿಯಾಗಿ 1:2 ಅನುಪಾತದಲ್ಲಿ ಜಿಲ್ಲೆಯ 2204 ಹೆಕ್ಟೇರ್ ಜಾಗವನ್ನು ಅರಣ್ಯ ಇಲಾಖೆಗೆ ನೀಡಲು ಜಾಗ ಗುರುತಿಸಲಾಗಿತ್ತು. ಈ ಹಿಂದೆ ಗುರುತಿಸಲಾದ 2204 ಹೆಕ್ಟೇರ್ ಜಾಗವನ್ನು ತೆಗೆದುಕೊಳ್ಳಲಾಗುತ್ತಿಲ್ಲ ಎಂದು ತಿಳಿಸಿದರು.

ಅರಣ್ಯ ಇಲಾಖೆಗೆ 1:1 ಅನುಪಾತದಲ್ಲಿ 1079 ಹೆಕ್ಟೇರ್ ಅರಣ್ಯೇತರ ಜಾಗ, ಗೊಮಾಳ, ಸರ್ಕಾರಿ ಜಾಗಗಳನ್ನು ನೀಡಬೇಕು. ಈಗಾಗಲೇ ಪಾಂಡವಪುರ ಮತ್ತು ನಾಗಮಂಗಲದಲ್ಲಿ 307 ಹೆಕ್ಟೇರ್ ಪ್ರದೇಶವನ್ನು ಗುರುತಿಸಲಾಗಿದ್ದು ಅರಣ್ಯ ಇಲಾಖೆಯೂ ಸಹ ಸದರಿ ಜಾಗಕ್ಕೆ ಸೂಕ್ತತೆ ಪ್ರಮಾಣ ಪತ್ರ ನೀಡಿದೆ ಎಂದರು.


ಬಾಕಿ ಉಳಿದ 757 ಹೆಕ್ಟೇರ್ ಜಾಗವನ್ನು ಗುರುತಿಸಿ ಅರಣ್ಯ ಇಲಾಖೆಗೆ ನೀಡಬೇಕು. ಅಧಿಕಾರಿಗಳು ತಾಲೂಕುವಾರು ತಂಡ ರಚಿಸಿ ಉಳಿದ 757 ಹೆಕ್ಟೇರ್ ಜಾಗವನ್ನು ಗುರುತಿಸಿ 15 ದಿನಗಳೊಳಗಾಗಿ ಸೂಕ್ತತೆ ಪ್ರಮಾಣ ಪಡೆಯಬೇಕು. ಉಪ ಮುಖ್ಯಮಂತ್ರಿಗಳು ಪ್ರತಿ 15 ದಿನಗಳಿಗೊಮ್ಮೆ ಮೇಕೆದಾಟು ಯೋಜನೆ ಕುರಿತು ಸಭೆ ನಡೆಸುತ್ತೇನೆ ಎಂದು ತಿಳಿಸಿದ್ದಾರೆ.

ತಾಲೂಕು ಮಟ್ಟದಲ್ಲಿ ತಹಸೀಲ್ದಾರ್, ಎಸಿಎಫ್ ಎಡಿಎಲ್‌ಆರ್ ಮತ್ತು ಕಾವೇರಿ ನಿರಾವರಿ ನಿಗಮದ ಅಧಿಕಾರಿಗಳು ಜಂಟಿ ಸರ್ವೆ ನಡೆಸಿ ಸೂಕ್ತ ಪರ್ಯಾಯ ಜಾಗ ಗುರುತಿಸಬೇಕು. ಅರಣ್ಯೇತರ ಜಾಗವನ್ನು ಗುರುತಿಸುವಾಗ ಸದರಿ ಜಾಗದ ಕುರಿತು ಯಾವುದೇ ಅಕ್ರಮ ಸಕ್ರಮ ಇರಬಾರದು. ಅಧಿಕಾರಿಗಳು ಗುರುತಿಸಿರುವ ಜಾಗ ಸರ್ವೇ ಮತ್ತು ಸ್ಕೆಚ್ ಕಡ್ಡಾಯವಾಗಿ ಮಾಡಬೇಕು ಎಂದು ಹೇಳಿದರು.

ಸಭೆಯಲ್ಲಿ ಉಪವಿಭಾಗಾಧಿಕಾರಿ ಶಿವಮೂರ್ತಿ, ಕಾವೇರಿ ನೀರಾವರಿ ನಿಗಮದ ಅಭಿಯಂತರ ರಘುರಾಮನ್, ಅರಣ್ಯ ಇಲಾಖೆಯ ಡಿ.ಎಫ್.ಓ ರಘು ತಾಲೂಕು ಮಟ್ಟದ ಅರಣ್ಯಾಧಿಕಾರಿಗಳು ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಕೋಟೆ ಕಸಬಾ ಕೃಷಿ ಪತ್ತಿನ ಸಂಘ ಜೆಡಿಎಸ್ ತೆಕ್ಕೆಗೆ

ಅಧ್ಯಕ್ಷರಾಗಿ ಶಿವರಾಜು, ಉಪಾಧ್ಯಕ್ಷರಾಗಿ ಶುಭಮಂಗಳ ಆಯ್ಕೆ



ನೂತನ ಅಧ್ಯಕ್ಷ, ಉಪಾಧ್ಯಕ್ಷರನ್ನು ಗ್ರಾಮಸ್ಥರು ಮತ್ತು ಸಂಘದ ನಿರ್ದೇಶಕರು ಅಭಿನಂದಿಸಿದರು.

ಹೆಚ್.ಡಿ.ಕೋಟೆ: ಹೆಚ್.ಡಿ.ಕೋಟೆ ಕಸಬಾ ಕೃಷಿ ಪತ್ತಿನ ಸಹಕಾರ ಸಂಘದ ಜೆಡಿಎಸ್ ಬೆಂಬಲಿತ ಅಭ್ಯರ್ಥಿ ಬೆಳಗನಹಳ್ಳಿ ಶಿವರಾಜು ಅಧ್ಯಕ್ಷರಾಗಿ, ಶುಭಮಂಗಳ ಉಪಾಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಸಂಘದ ಆಭರಣದಲ್ಲಿ ನಡೆದ ಚುನಾವಣೆಯಲ್ಲಿ ಒಟ್ಟು 12 ನಿರ್ದೇಶಕರಿದ್ದು ಕಾಂಗ್ರೆಸ್‌ನ ಇಬ್ಬರು ನಿರ್ದೇಶಕರು ನಾಮಪತ್ರ ಸಲ್ಲಿಸದೆ ಚುನಾವಣೆಗೆ ಗೈರಾಗಿದ್ದರು. ಜೆಡಿಎಸ್ ಬೆಂಬಲಿತ ಉಳಿದ ಹತ್ತು ಮಂದಿಯಲ್ಲಿ ಅಧ್ಯಕ್ಷರ ಸ್ಥಾನಕ್ಕೆ ಶಿವರಾಜು, ಉಪಾಧ್ಯಕ್ಷರ ಸ್ಥಾನಕ್ಕೆ ಶುಭಮಂಗಳ ಇಬ್ಬರು ನಾಮಪತ್ರ ಸಲ್ಲಿಸಿದ್ದರು. ಈ ಹಿನ್ನೆಲೆಯಲ್ಲಿ ಇವರಿಬ್ಬರ ಅವಿರೋಧ ಆಯ್ಕೆಯನ್ನು ಘೋಷಿಸಲಾಯಿತು.

ಈ ಚುನಾವಣೆ ನ.4ರಂದು ನಡೆಯಲು ಚುನಾವಣಾಧಿಕಾರಿ ರೇಣುಕಾ ದಿನಾಂಕ ನಿಗದಿ ಪಡಿಸಿ ನಿರ್ದೇಶಕರುಗಳಿಗೆ ನೋಟಿಸ್ ನೀಡಿದ್ದರು, ಚುನಾವಣೆಗೆ ಎಲ್ಲಾ ನಿರ್ದೇಶಕರುಗಳು ಹಾಜರಿದ್ದರು ಆದರೆ ಚುನಾವಣಾ ಅಧಿಕಾರಿ ರೇಣುಕಾ ಅವರು ಯಾವುದೇ ಮಾಹಿತಿ ನೀಡದೆ ಗೈರಾಗಿದ್ದರು, ಇದನ್ನು ಪ್ರಶ್ನಿಸಿ ಶಿವರಾಜ್ ಹೈಕೋರ್ಟ್ ಮೆಟ್ಟಿಲೇರಿದ್ದರು. ಅಧಿಕಾರಿಗಳು ನ.20 ರಂದು ಚುನಾವಣೆ ನಡೆಸಲಾಗುವುದೆಂದು ಮಾಹಿತಿ ನೀಡಿದ ಹಿನ್ನೆಲೆಯಲ್ಲಿ ಈ ಚುನಾವಣೆ ನಡೆಯಿತು.

ಇದೇ ಸಂದರ್ಭದಲ್ಲಿ ನೂತನ ಅಧ್ಯಕ್ಷ ಬೆಳಗನಹಳ್ಳಿ ಶಿವರಾಜ್ ಮಾತನಾಡಿ ಶಾಸಕ ಅನಿಲ್ ಚಿಕ್ಕಮಾದು ಸೇರಿದಂತೆ ಇನ್ನು ಕೆಲ ಪ್ರಮುಖ ಪ್ರಭಾವಿಗಳು ನನ್ನನ್ನ ಅಧ್ಯಕ್ಷರನ್ನಾಗಿ ಮಾಡಬಾರದೆಂದು, ಸಾಕಷ್ಟು ಗೊಂದಲಗಳನ್ನು ಸೃಷ್ಟಿ ಮಾಡಿದ್ದರು. ಆದರೂ ನಮ್ಮ ನಿರ್ದೇಶಕರುಗಳು ಒಟ್ಟುಗೂಡಿ ನನ್ನನ್ನು ಅಧ್ಯಕ್ಷರಾಗಿ ಮಾಡಲು ಸಂಪೂರ್ಣ ಬೆಂಬಲ ನೀಡಿದರು, ಮುಂದಿನ ದಿನಗಳಲ್ಲಿ ಬ್ಯಾಂಕಿನ ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ರೈತರಿಗೆ ಉತ್ತಮ ಸಾಲ ದೊರಕುವ ನಿಟ್ಟಿನಲ್ಲಿ ಕೆಲಸ ನಿರ್ವಹಿಸುತ್ತೇನೆ ಎಂದರು.

ಇದೇ ಸಂದರ್ಭದಲ್ಲಿ ಜೆಡಿಎಸ್ ಪಕ್ಷದ ಕಾರ್ಯಕರ್ತರುಗಳು ಮುಖಂಡರುಗಳು ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಿಸಿ, ಅಧ್ಯಕ್ಷ ಉಪಾಧ್ಯಕ್ಷೆ ಹಾಗೂ ನಿರ್ದೇಶಕರುಗಳನ್ನು ಅಭಿನಂದಿಸಿದರು.

ಇದೇ ಸಂದರ್ಭದಲ್ಲಿ ಸಂಘದ ಶಂಭುಗೌಡ, ನಿರ್ದೇಶಕರುಗಳಾದ ಯಶವಂತ್, ದೇವನಾಯಕ, ಸಿ.ಕೆ.ನಾಗರಾಜು, ಬೈರೇಗೌಡ, ಬಿ.ಕೆ.ಪ್ರಕಾಶ್, ಬೀರಪ್ಪ, ಚಲುವರಾಜು, ಪ್ರೇಮ, ಮುಖಂಡರುಗಳಾದ ನರಸಿಮ್ಮೇಗೌಡ, ರಾಜೇಂದ್ರ, ಗೋಪಾಲಸ್ವಾಮಿ, ಒಕ್ಕಲಿಗ ಸಂಘದ ತಾಲೂಕು ಅಧ್ಯಕ್ಷ ಹರೀಶ್, ಜಿಟಿಡಿ ಅಭಿಮಾನಿ ಬಳಗದ ತಾಲೂಕು ಅಧ್ಯಕ್ಷ ಕಾಳಿಹುಂಡಿ ಸಿದ್ದೇಗೌಡ, ಗುಂಡತ್ತೂರು ಪ್ರಕಾಶ, ಮಳಲಿಶಾಂತ್, ಎಂ.ಪಿ.ಶಂಕರ್, ಸಿಂಡೆನಹಳ್ಳಿ ಯತೀಶ್ ಕುಮಾರ್, ಮಹೇಶ್, ಮಟಕೆರೆ ರಾಜೇಶ್, ಯೋಗ ನರಸಿಂಹೇಗೌಡ ಹಾಜರಿದ್ದರು.

ಗ್ರಾಮ ಠಾಣಾ ವ್ಯಾಪ್ತಿಯಲ್ಲಿ ಶೆಡ್ ನಿರ್ಮಾಣ

ತೆರವುಗೊಳಿಸಲು ಬಂದ ಗ್ರಾಪಂ ಅಧಿಕಾರಿಗಳ ಮುಂದೆ ಆತ್ಮಹತ್ಯೆಗೆ ಯತ್ನಿಸಿದ ಮಹಿಳೆ



ಚಿನಕುರಳಿ, ನ.20– ಚಿನಕುರಳಿ ಗ್ರಾಪಂ ವ್ಯಾಪ್ತಿಯ ಕೆ.ಮಂಚನಹಳ್ಳಿ ಗ್ರಾಮದಲ್ಲಿ ಪರಿಶಿಷ್ಟ ಕಾಲೋನಿಯಲ್ಲಿ ಮಹಿಳೆಯೊಬ್ಬರು ಗ್ರಾಮಾ ಠಾಣಾ ಜಾಗದಲ್ಲಿ ಹಾಕಿಕೊಂಡಿದ್ದ ಶೆಡ್ ಅನ್ನು ಗ್ರಾಪಂ ಅಧಿಕಾರಿಗಳು ತೆರವುಗೊಳಿಸಲು ಮುಂದಾದಾಗ ಮಹಿಳೆ ತೀವ್ರ ವಿರೋಧ ವ್ಯಕ್ತಪಡಿಸಿ ಆತ್ಮಹತ್ಯೆಗೆ ಯತ್ನಿಸಿದಾಗ ಕಾಲಾವಕಾಶ ನೀಡಿ ಶೆಡ್ ತೆರವುಗೊಳಿಸದೆ ವಾಪಸ್ಸಾದ ಘಟನೆ ಗುರುವಾರ ನಡೆಯಿತು.

ಕೆ.ಮಂಚನಹಳ್ಳಿ ಗ್ರಾಮದ ವರನಂದಮ್ಮ ಎಂಬ ಮಹಿಳೆಯೂ ಪರಿಶಿಷ್ಟ ಜಾತಿಯ ಕಾಲೋನಿಯಲ್ಲಿ ಇರುವ ಗ್ರಾಮಠಾಣ ಜಾಗದಲ್ಲಿ ಕಳೆದ ಒಂದುವರೆ ವರ್ಷದಿಂದಲೂ ಶೆಡ್ ನಿರ್ಮಿಸಿಕೊಂಡು ವಾಸಿಸುತ್ತಿದ್ದಾರೆ. ವರನಂದಮ್ಮ ಎಂಬುವರು ರಸ್ತೆಯಲ್ಲಿಯೇ ಶೆಡ್ ನಿರ್ಮಿಸಿಕೊಂಡಿದ್ದಾರೆ, ಇದರಿಂದ ತಿರುಗಾಡಲು ತೊಂದರೆಯಾಗುತ್ತಿದೆ ಎಂದು ಅದೇ ಗ್ರಾಮದ ಜಯಮ್ಮ ಸಣ್ಣಯ್ಯ ಎಂಬುವರು ಗ್ರಾಪಂಗೆ ದೂರು ಸಲ್ಲಿಸಿದರು.

ಈ ಸಂಬಂಧ ಪರಿಶೀಲಿಸಿದ ಗ್ರಾಪಂ ಅಧಿಕಾರಿಗಳು ಮೇಲಾಧಿಕಾರಿಯಾದ ತಾಪಂ ಇಓ ಅವರ ಗಮನಕ್ಕೆ ತಂದು ಕಾನೂನಿನ ರೀತಿ ವರನಂದಮ್ಮ ಎಂಬುವರಿಗೆ ತೆರವುಗೊಳಿಸುವಂತೆ ನೋಟಿಸ್ ನೀಡಿದರು. ಆದರೂ ಸಹ ತೆರವುಗೊಳಿಸದ ಹಿನ್ನೆಲೆಯಲ್ಲಿ ಗುರುವಾರ ಪೊಲೀಸ್ ಭದ್ರತೆಯೊಂದಿಗೆ ತಾಪಂ ಇಓ ವೀಣಾ, ಗ್ರಾಪಂ ಪಿಡಿಓ ಆರತಿ ಕುಮಾರಿ ಸೇರಿದಂತೆ ಹಲವು ಅಧಿಕಾರಿಗಳು ಸ್ಥಳಕ್ಕೆ ತೆರಳಿ ಶೆಡ್ ತೆರವುಗೊಳಿಸಲು ಮುಂದಾದರು. ಈ ವೇಳೆ ಶೆಡ್ ನಿರ್ಮಿಸಿಕೊಂಡಿರುವ ಮಹಿಳೆ ವರನಂದಮ್ಮ ಮತ್ತು ಕುಟುಂಬಸ್ಥರು ಸಾಕಷ್ಟು ವಿರೋಧ ವ್ಯಕ್ತಪಡಿಸಿ ಅಧಿಕಾರಿಗಳೊಂದಿಗೆ ವಾಗ್ವಾದ ನಡೆಸಿದರು. ನಮಗೆ ಇರಲು ಸ್ಥಳವಿಲ್ಲ. ನಾವು ಆರು ಮಂದಿ ಹೆಣ್ಣು ಮಕ್ಕಳಿದ್ದೇವೆ. ಕೂಲಿ ಕೆಲಸ ಮಾಡಿ ಜೀವನ ನಡೆಸುತ್ತಿದ್ದೇವೆ. ನಾವು ಹಲವಾರು ವರ್ಷಗಳಿಂದಲೂ ಇಲ್ಲೇ ಶೆಡ್ ನಿರ್ಮಿಸಿಕೊಂಡು ಬದುಕು ನಡೆಸುತ್ತಿದ್ದೇವೆ, ಈ ಹಿಂದೆ ಶಾಸಕರಾಗಿದ್ದ ಕೆ.ಎಸ್.ಪುಟ್ಟಣ್ಣಯ್ಯ ಅವರೇ ಖುದ್ದು ಸ್ಥಳಕ್ಕೆ ಆಗಮಿಸಿ ಪರಿಶೀಲಿಸಿ ನಮ್ಮ ಸಮಸ್ಯೆ ಕಂಡು ಮರುಗಿ ಇವರು ಇಲ್ಲೇ ಇರಲಿ ಶೆಡ್ ತೆರವುಗೊಳಿಸಬೇಡಿ ಎಂದು ಅಧಿಕಾರಿಗಳಿಗೆ ಸೂಚನೆ ನೀಡಿ ಹೋಗಿದ್ದರು.

ಅದರಂತೆಯೇ ನಮ್ಮ ಶೆಡ್ ಪಕ್ಕದವರೆಗೆ ರಸ್ತೆ ನಿರ್ಮಿಸಿ ಶೆಡ್ ಪಕ್ಕದಲ್ಲಿ ಚರಂಡಿ ನಿರ್ಮಿಸಿ ಇಲ್ಲಿಗೆಯೇ ರಸ್ತೆ ಮೊಟಕುಗೊಳಿಸಿದ್ದಾರೆ. ಇದೀಗ ಏಕಾಏಕಿ ಅಧಿಕಾರಿಗಳು ಬಂದು ಶೆಡ್ ತೆರವುಗೊಳಿಸಲು ಮುಂದಾಗಿದ್ದಾರೆ ಎಂದು ಕಿಡಿಕಾರಿದರು. ನಮಗೆ ದಾಖಲಾತಿ ಸರಿಪಡಿಸಿಕೊಳ್ಳಲು ಕಾಲಾವಕಾಶ ನೀಡಬೇಕು, ಇಲ್ಲವಾದರೆ ನಾವು ಸಾಮೂಹಿಕ ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಎಚ್ಚರಿಕೆ ನೀಡಿ ವರನಂದಮ್ಮ ಆತ್ಮಹತ್ಯೆ ಮಾಡಿಕೊಳ್ಳಲು ಮುಂದಾದಾಗ ಅಧಿಕಾರಿ ಕಾಲಾವಕಾಶ ನೀಡಿ ವಾಪಸ್ಸಾದರು.

ಇಓ ವೀಣಾ ಮಾತನಾಡಿ, ವರನಂದಮ್ಮ ಎಂಬ ಮಹಿಳೆ ಗ್ರಾಮಠಾಣ ಜಾಗದಲ್ಲಿ ಶೆಡ್ ನಿರ್ಮಿಸಿಕೊಂಡಿದ್ದಾರೆ ಎಂಬ ದೂರು ಬಂದ ಹಿನ್ನೆಲೆಯಲ್ಲಿ ಪರಿಶೀಲಿಸಿ ನೋಟಿಸ್ ನೀಡಿ ತೆರವುಗೊಳಿಸಲು ಮುಂದಾಗಿದ್ದೆವು. ಆದರೆ, ಆ ಮಹಿಳೆಯರು ನಮಗೆ ದಾಖಲೆಗಳನ್ನು ಸರಿಪಡಿಸಿಕೊಳ್ಳಲು ಕಾಲಾವಕಾಶ ನೀಡುವಂತೆ ಮನವಿ ಮಾಡಿದ ಹಿನ್ನೆಲೆಯಲ್ಲಿ ಒಂದು ತಿಂಗಳು ಕಾಲಾವಕಾಶ ನೀಡಿ ವಾಪಸ್ಸಾಗಿದ್ದೇವೆ ಎಂದು ತಿಳಿಸಿದರು.

ಮನೆ ಮುಂದೆ ನಿಲ್ಲಿಸಿದ್ದ ಎರಡು ಕಾರುಗಳಿಗೆ ಬೆಂಕಿ



ನಂಜನಗೂಡು: ಮನೆ ಮುಂದೆ ನಿಲಿಸಿದ್ದ ಎರಡು ಕಾರುಗಳಿಗೆ ಮಧ್ಯರಾತ್ರಿ ಸಮಯದಲ್ಲಿ ಕಿಡಿಗೇಡಿಗಳು ಬೆಂಕಿ ಹಚ್ಚಿದ್ದು ಇದರಿಂದಾಗಿ ಎರಡೂ ಕಾರುಗಳು ಸಂಪೂರ್ಣ ಸುಟ್ಟು ಕರಕಲಾಗಿರುವ ಘಟನೆ ನಗರದ ಆರ್.ಪಿ. ರಸ್ತೆ ಹಾಗೂ ಶ್ರೀರಾಂಪುರ ಬಡಾವಣೆಯಲ್ಲಿ ಬುಧವಾರ ರಾತ್ರಿ ನಡೆದಿದೆ.

ನಗರದ ಶ್ರೀರಾಂಪುರ ಬಡಾವಣೆ ನಿವಾಸಿ ಅಭಿ ನಾಗಭೂಷಣ್ ಎಂಬುವರ ಮನೆ ಮುಂದೆ ನಿಲ್ಲಿಸಿದ್ದ ಮಹೇಂದ್ರ ಎಕ್ಸ್ ಯುವಿ ವಾಹನ ಬುಧವಾರ ಮಧ್ಯರಾತ್ರಿ ಬೆಂಕಿಗಾಹುತಿಯಾಗಿದ್ದು ಮನೆಯವರು ಹೊರಬಂದು ನೋಡುವಷ್ಟರಲ್ಲಿ ಸಂಪೂರ್ಣ ಸುಟ್ಟುಕರಕಲಾಗಿದೆ. ತಕ್ಷಣ ಸ್ಥಳೀಯ ನೆರವಿನೊಂದಿಗೆ ಬೆಂಕಿ ನಂದಿಸಿ ಸುತ್ತಮುತ್ತಲಿನ ಪ್ರದೇಶಕ್ಕೆ ಬೆಂಕಿ ವ್ಯಾಪಿಸುವುದನ್ನು ತಪ್ಪಿಸಿದ್ದಾರೆ. ಇನ್ನು ಇದೇ ವೇಳೆ ಆರ್.ಪಿ.ರಸ್ತೆ 5ನೇ ತಿರುವಿನ ನಿವಾಸಿ ಪ್ರಶಾಂತ್ ಎಂಬುವರಿಗೆ ಸೇರಿದ ನ್ಯಾನೋ ಕಾರಿಗೂ ಕಿಡಿಗೇಡಿಗಳು ಬೆಂಕಿ ಹಚ್ಚಿದ್ದು ಮನೆಯವರು ಹೊರ ಬಂದು ನೋಡುವಷ್ಟರಲ್ಲಿಯೇ ಕಾರು ಸಂಪೂರ್ಣ ಬೆಂಕಿಗಾಹುತಿಯಾಗಿದೆ.

ಮಾಹಿತಿ ಪಡೆದು ಡಿವೈಎಸ್‌ಪಿ ರಘು ನೇತೃತ್ವದ ಅಧಿಕಾರಿಗಳ ತಂಡ ಸ್ಥಳಕ್ಕಾಗಮಿಸಿ ಮಹಜರು ನಡೆಸಿ ಘಟನೆ ಕುರಿತು ಸ್ಥಳೀಯರಿಂದ ಮಾಹಿತಿ ಪಡೆದುಕೊಂಡಿದ್ದಾರೆ.

ಇನ್ನು ಕಳೆದ ವಾರವಷ್ಟೇ ನಗರದ ಶಿರಡಿ ಮಂದಿರದ ಸಮೀಪದ ಮನೆಯೊಂದಕ್ಕೆ ಹಾಡುಹಗಲಿನಲ್ಲೇ ನುಗ್ಗಿದ್ದ ಇಬ್ಬರು ಅಪರಿಚಿತರು ಮನೆ ಬಾಡಿಗೆ ಕೇಳುವ ನೆಪದಲ್ಲಿ ವಯೋವೃದ್ಧ ಮಹಿಳೆಗೆ ಥಳಿಸಿ ಚಿನ್ನಾಭರಣ ದೋಚಿ ಪರಾರಿಯಾಗಿದ್ದು ನಂತರ ಮೂರ್ನಾಲ್ಕು ದಿನಗಳ ಅವಧಿಯಲ್ಲಿ ಕೆಎಚ್‌ಬಿ ಕಾಲೋನಿ ಸಮೀಪದ ಬಡಾವಣೆಯೊಂದರ ಮನೆಗೆ ಕಳ್ಳತನಕ್ಕೆಂದು ನುಗ್ಗಿದ್ದ ಅಪರಿಚಿತ ವ್ಯಕ್ತಿಯನ್ನು ಸ್ಥಳೀಯರೇ ಕರೆತಂದು ಪೊಲೀಸರ ವಶಕ್ಕೆ ಒಪ್ಪಿಸಿದ್ದರು ಇದೀಗ ದುಷ್ಕರ್ಮಿಗಳು ಮನೆಯ ಮುಂಭಾಗದಲ್ಲಿ ನಿಂತಿದ್ದ ಕಾರಿಗೆ ಬೆಂಕಿ ಹಚ್ಚಿದ್ದಾರೆ. ನಂಜನಗೂಡು ಪಟ್ಟಣ ವ್ಯಾಪ್ತಿಯಲ್ಲಿ ಪೊಲೀಸರು ರಾತ್ರಿ ಗಸ್ತು ಸಂಚಾರ ಮಾಡುತ್ತಿಲ್ಲ ಹೀಗಾಗಿ ಹೆಚ್ಚಿನ ಅಪರಾಧ ಪ್ರಕರಣಗಳು ಕಂಡುಬರುತ್ತಿವೆ ಎಂದು ಸ್ಥಳೀಯರು ದೂರಿದ್ದಾರೆ.


ವಿಜೃಂಭಣೆಯ ಶ್ರೀ ಬಿಳಿಕೆರೆ ಮಾದೇಶ್ವರ ತೆಪ್ಪೋತ್ಸವ



ಸುತ್ತೂರು: ನಂಜನಗೂಡು ತಾಲೂಕು ಹದಿನಾರು ಗ್ರಾಮದ ಶ್ರೀ ಬಿಳಿಕೆರೆ ಮಹಾದೇಶ್ವರ ದೇವಸ್ಥಾನದ ಅವರಣದಲ್ಲಿ ನೂತನವಾಗಿ ನಿರ್ಮಿಸಿರುವ ಕಲ್ಯಾಣಿಯಲ್ಲಿ ರಾತ್ರಿ ವಿಜೃಂಭಣೆಯಿಂದ ಮಹದೇಶ್ವರ ತೆಪ್ಪೋತ್ಸವ ನಡೆಯಿತು.

ಈ ಕಾರ್ಯಕ್ರಮದಲ್ಲಿ ಹದಿನಾರು ಹಾಗೂ ಸುತ್ತಮುತ್ತ ಗ್ರಾಮಗಳ ಭಕ್ತಾದಿಗಳು ಅಪಾರ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ತೆಪ್ಪೋತ್ಸವಕ್ಕೆ ಸಮೀಪದ ಆಯರಹಳ್ಳಿ ಜವನಪ್ಪ ಅವರು ತೆಪ್ಪವನ್ನು ಕೊಡುಗೆಯಾಗಿ ದೇವಸ್ಥಾನಕ್ಕೆ ಅರ್ಪಿಸಿ ತೆಪ್ಪೋತ್ಸವ ನಡೆಯಲು ಸಹಕಾರ ನೀಡಿದರು. ಈ ಸಂದರ್ಭದಲ್ಲಿ ತೆಪ್ಪ ಕೊಡುಗೆಯಾಗಿ ನೀಡಿದ ಜವನಪ್ಪ ಅವರನ್ನು, ದೇವಸ್ಥಾನ ಸಮಿತಿಯಿಂದ ಗೌರವಿಸಲಾಯಿತು. ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ನಂಜಪ್ಪ ಗ್ರಾಮದ ಗೌಡರಾದ ಶಿವಣ್ಣ, ಶಿವಕುಮಾರ್, ಗ್ರಾಪಂ ಮಾಜಿ ಅಧ್ಯಕ್ಷ ಬಸವಣ್ಣ, ಗುರುಮಲ್ಲಪ್ಪ, ದೇವಸ್ಥಾನದ ಅರ್ಚಕ ಶಿವಕುಮಾರ್, ಗ್ರಾಮದ ಯುವಕ ಸಂಘ–ಸಂಸ್ಥೆಗಳ ಯುವಕರು ಭಾಗವಹಿಸಿ ತೆಪ್ಪೋತ್ಸವ ವಿಜೃಂಭಣೆಯಿಂದ ನಡೆಯಲು ಸಹಕರಿಸಿದರು.

130 ಅಡಿ ಬೃಹತ್ ಸ್ಕ್ರೀನ್‌ನಲ್ಲಿ 'ವಾರಣಾಸಿ' ಟೈಟಲ್ ಲಾಂಚ್





ಎಸ್.ಎಸ್.ರಾಜಮೌಳಿ–ಮಹೇಶ್ ಬಾಬು ಕಾಂಬಿನೇಶನ್‌ನ ಹೊಸ ಚಿತ್ರ ವಾರಣಾಸಿ. ಈ ಚಿತ್ರದ ಟೈಟಲ್ ಅನಾವರಣ ಸಮಾರಂಭ ಹೈದರಾಬಾದ್‌ನ ರಾಮೋಜಿ ಫಿಲಂ ಸಿಟಿಯ ಬೃಹತ್ ವೇದಿಕೆಯಲ್ಲಿ 50 ಸಾವಿರ ಅಭಿಮಾನಿಗಳ ಸಮ್ಮುಖದಲ್ಲಿ ನೆರವೇರಿತು.

110ಅಡಿ ಅಗಲ ಹಾಗೂ 130ಅಡಿ ಎತ್ತರದ ಬೃಹತ್ ಎಲ್‌ಇಡಿ ಪರದೆಯಲ್ಲಿ ವಾರಣಾಸಿ ಚಿತ್ರದ ಟೈಟಲ್ ಲಾಂಚ್ ಆಗಿದ್ದು ವಿಶೇಷವಾಗಿತ್ತು. ವಾರಣಾಸಿಯ ಮಣಿಕರ್ಣಿಕಾ ಘಾಟ್ ಅನ್ನು ಪ್ರತಿನಿಧಿಸುವ ಸೆಟ್‌ಗಳ ನಡುವೆ ಈ ಸ್ಕ್ರೀನ್ ಅಳವಡಿಸಲಾಗಿತ್ತು.

ವಾರಣಾಸಿ ಪೌರಾಣಿಕ ಹಿನ್ನೆಲೆಯ ಫ್ಯಾಂಟಸಿ ಚಿತ್ರವಾಗಿದ್ದು, ಕೆ.ಎಲ್.ನಾರಾಯಣ ಮತ್ತು ಎಸ್.ಎಸ್.ಕಾರ್ತಿಕೇಯ ಜೊತೆಯಾಗಿ ನೂರಾರು ಕೋಟಿ ಬಜೆಟ್‌ನಲ್ಲಿ ಈ ಚಿತ್ರವನ್ನು ನಿರ್ಮಿಸುತ್ತಿದಾರೆ. ರಾಜಮೌಳಿ ಅವರ ತಂದೆ ವಿಜಯಪ್ರಸಾದ್ ಕಥೆ-ಚಿತ್ರಕಥೆ ರಚಿಸಿದ್ದು, ಎಂ.ಎಂ.ಕೀರವಾಣಿ ಸಂಗೀತ ಸಂಯೋಜಿಸುತ್ತಿದ್ದಾರೆ. ಈ ಚಿತ್ರದಲ್ಲಿ ಮಹೇಶ್‌ಬಾಬು, ರುದ್ರನಾಗಿ, ನಟಿ ಪ್ರಿಯಾಂಕಾ ಚೋಪ್ರಾ ಮಂದಾಕಿನಿಯ ಪಾತ್ರದಲ್ಲಿ, ನಟ ಪೃಥ್ವಿರಾಜ್ ಸುಕುಮಾರನ್ ಕುಂಭನ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ.

ವೇದಿಕೆಯಲ್ಲಿ ಮಾತನಾಡಿದ ರಾಜಮೌಳಿ, ನನಗೆ ಬಾಲ್ಯದಿಂದಲೂ ರಾಮಾಯಣ ಮತ್ತು ಮಹಾಭಾರತವೆಂದರೆ ಬಹಳ ಇಷ್ಟ, ಇದು ನನ್ನ ಡ್ರೀಮ್ ಪ್ರಾಜೆಕ್ಟ್, ರಾಮಾಯಣದ ಪ್ರಮುಖ ಪ್ರಸಂಗವೊಂದನ್ನು ಆಧರಿಸಿ ಈ ಚಿತ್ರ ಮಾಡುತ್ತಿದ್ದೇನೆ. ಶ್ರೀರಾಮನ ಪಾತ್ರಕ್ಕೆ ಮಹೇಶ್ ಸೂಟ್ ಆಗುತ್ತಾರಾ ಎಂಬ ಪ್ರಶ್ನೆ ಇತ್ತು. ಮೊದಲ ದಿನ ಅವರನ್ನು ರಾಮನ ವೇಷದಲ್ಲಿ ನೋಡಿ ರೋಮಾಂಚನವಾಯಿತು. ಇದುವರೆಗೂ 60ದಿನಗಳ ಕಾಲ ಚಿತ್ರೀಕರಣ ಮಾಡಿದ್ದೇವೆ ಎಂದರು.

ನಮ್ಮ ತಂದೆ (ದಿ.ಕೃಷ್ಣ) ನನಗೆ ಪೌರಾಣಿಕ ಪಾತ್ರದಲ್ಲಿ ನಟಿಸು ಎಂದು ಯಾವಾಗಲೂ ಹೇಳುತ್ತಿದ್ದರು ಎಂದ ಮಹೇಶ್ ಬಾಬು, ಅವರಿದ್ದಾಗ ಅದು ಸಾಧ್ಯವಾಗಿರಲಿಲ್ಲ. ಈಗದು ಆಗುತ್ತಿದೆ. ಜೀವನದಲ್ಲಿ ಒಮ್ಮೆ ಮಾತ್ರ ಸಿಗುವಂತಹ ಒಂದು ಅಪರೂಪದ ಅವಕಾಶವಿದು. ಅದಕ್ಕಾಗಿ ಎಷ್ಟು ಬೇಕಾದರೂ ಕಷ್ಟಪಡಲು ನಾನು ಸಿದ್ಧ. ಎಲ್ಲರೂ ಹೆಮ್ಮೆಪಡುವಂಥ ಚಿತ್ರವನ್ನು ಮಾಡುತ್ತಿದ್ದೇವೆ. ಈ ಸಿನಿಮಾ ರಿಲೀಸಾದ ಮೇಲೆ ಇಡೀ ದೇಶವೇ ನಮ್ಮ ಬಗ್ಗೆ ಹೆಮ್ಮೆಪಡುತ್ತದೆ ಎಂದು ಹೆಮ್ಮೆಯಿಂದಲೇ ಹೇಳಿಕೊಂಡರು. ನಿರ್ಮಾಪಕ ಕೆ.ಎಲ್. ನಾರಾಯಣ, ಕಥೆಗಾರ ವಿಜಯೇಂದ್ರ ಪ್ರಸಾದ್, ಸಂಗೀತ ನಿರ್ದೇಶಕ ಎಂ.ಎಂ. ಕೀರವಾಣಿ, ಪ್ರಿಯಾಂಕಾ ಚೋಪ್ರಾ, ಪೃಥ್ವಿರಾಜ್ ಸುಕುಮಾರನ್ ಎಲ್ಲರೂ ಚಿತ್ರದ ಬಗ್ಗೆ ಮಾತನಾಡಿದರು.

'ರುಧ' ನೈಜ ಘಟನೆಯಿಂದ ಪ್ರೇರಿತ



ಮಹಿಳಾ ಪ್ರಧಾನ ಸಸ್ಪೆನ್ಸ್ ಥ್ರಿಲ್ಲರ್ ಜಾನರ್ ಕಥಾಹಂದರ ಒಳಗೊಂಡ ರುಧ ಚಿತ್ರದ ಮುಹೂರ್ತ ಸಮಾರಂಭ ಇತ್ತೀಚೆಗೆ ನಡೆಯಿತು. ರಾಯರ ಸನ್ನಿಧಿಯಲ್ಲಿ ನಡೆದ ಈ ಚಿತ್ರದ ಮುಹೂರ್ತ ದೃಶ್ಯಕ್ಕೆ ನಟಿ ಅನು ಪ್ರಭಾಕರ್, ರಘು ಮುಖರ್ಜಿ ಕ್ಲಾಪ್ ಮಾಡಿದರು. ಕನಕಪುರದ ಪುಟ್ಟರಾಜು ಇದೇ ಮೊದಲ ಬಾರಿಗೆ ಈ ಚಿತ್ರವನ್ನು ನಿರ್ಮಿಸುತ್ತಿದ್ದಾರೆ. ಹಲವು ನಿರ್ದೇಶಕರ ಜತೆ ಕೆಲಸ ಮಾಡಿ ಅನುಭವ ಹೊಂದಿರುವ ಶರತ್ ಶಿಡ್ಲಘಟ್ಟ ಈ ಚಿತ್ರಕ್ಕೆ ಆಕ್ಷನ್ ಕಟ್ ಹೇಳುತ್ತಿದ್ದಾರೆ.

ಈ ಸಂದರ್ಭದಲ್ಲಿ ಮಾತನಾಡಿದ ನಿರ್ದೇಶಕ ಶರತ್ ಶಿಡ್ಲಘಟ್ಟ, 2012ರಲ್ಲಿ ಕೇರಳದಲ್ಲಿ ನಡೆದ ಸತ್ಯ ಘಟನೆಯೊಂದನ್ನು ಇಟ್ಟುಕೊಂಡು ಒಂದು ಮಹಿಳಾ ಪ್ರಧಾನ ಕಥೆ ಬರೆದು ಚಿತ್ರಕಥೆ ಹೆಣೆದಿದ್ದೇನೆ. ಪ್ರಮೋದ್ ಮರವಂತೆ ಅವರ ಸಾಹಿತ್ಯದ ಮೂರು ಹಾಡುಗಳು ಚಿತ್ರದಲ್ಲಿದ್ದು, ಸಂಗೀತ ಸಂಯೋಜಕರು ಸದ್ಯದಲ್ಲೆ ಆಯ್ಕೆಯಾಗಲಿದ್ದಾರೆ. ಮಡಿಕೇರಿಯ ಸುಂದರ ತಾಣಗಳಲ್ಲಿ ಒಂದೇ ಹಂತದಲ್ಲಿ ಚಿತ್ರದ ಚಿತ್ರೀಕರಣ ನಡೆಸಲು ಯೋಜನೆ ಹಾಕಿಕೊಳ್ಳಲಾಗಿದೆ ಎಂದು ಮಾಹಿತಿ ನೀಡಿದರು.

ಈ ಚಿತ್ರದ ಮುಖ್ಯ ಪಾತ್ರದಲ್ಲಿ ಪೇದೆಯಾಗಿ ವರಲಕ್ಷ್ಮಿ ಅಲ್ಲದೆ ಮಾನಸಗೌಡ, ಮಧ್ಯಮ ವರ್ಗದ ಹುಡುಗ ಹಾಗೂ ಫೋಟೋ ಸ್ಟುಡಿಯೋ ಮಾಲೀಕನಾಗಿ ರಥರ್ವ್ ಇವರೆಲ್ಲ ತಂತಮ್ಮ ಪಾತ್ರ ಪರಿಚಯ ಮಾಡಿಕೊಂಡರು. ಚಿತ್ರಕ್ಕೆ ರಾಜು ಹೆಮ್ಮಿಗೆಪುರ ಅವರ ಕ್ಯಾಮೆರಾ ವರ್ಕ್ ಇದ್ದು, ಚಿತ್ರದ ಕ್ರಿಯೇಟೀವ್ ಹೆಡ್ ಆಗಿ ಆರ್.ವಿಜಯ್, ಕಾರ್ಯಕಾರಿ ನಿರ್ಮಾಪಕರಾಗಿ ತಿರುಪತಿ ರೆಡ್ಡಿ ಕೆಲಸ ಮಾಡುತ್ತಿದ್ದಾರೆ, ನವೆಂಬರ್ ಕೊನೆ ವಾರದಿಂದ ರುಧ ಚಿತ್ರದ ಚಿತ್ರೀಕರಣ ಶುರುವಾಗಲಿದೆ.

'ಚಿತ್ರಲಹರಿ' ಎರಡು ಕಥೆಗಳಿಗೆ ಒಂದೇ ಕ್ಲೈಮ್ಯಾಕ್ಸ್



ಚಿತ್ರ ಹಾಗೂ ಲಹರಿ ಎಂಬ ಇಬ್ಬರು ಯುವತಿಯರ ಸುತ್ತ ನಡೆಯುವ ಲವ್, ಸಸ್ಪೆನ್ಸ್ ಥ್ರಿಲ್ಲರ್ ಕಥಾಹಂದರ ಇಟ್ಟುಕೊಂಡು ಕೆ.ಆರ್. ಸುರೇಶ್ ಮೊದಲ ಬಾರಿಗೆ ಆಕ್ಷನ್ ಕಟ್ ಹೇಳಿರುವ ಚಿತ್ರ 'ಚಿತ್ರಲಹರಿ'. ಈಹಿಂದೆ ವಿಕ್ಕಿ ಚಿತ್ರವನ್ನು ನಿರ್ಮಿಸಿದ್ದ ಕೇಸರಿ ನಂದನ ಸಿನಿ ಕ್ರಿಯೇಶನ್ಸ್‌ನ ನವನೀತ ಲಕ್ಷ್ಮಿ ಅವರು ಈ ಚಿತ್ರವನ್ನು ನಿರ್ಮಿಸಿದ್ದಾರೆ. ಈ ಚಿತ್ರದ ಟೀಸರ್ ಬಿಡುಗಡೆ ಕಾರ್ಯಕ್ರಮ ಇತ್ತೀಚೆಗೆ ನೆರವೇರಿತು. ನಿರ್ಮಾಪಕ ಕೃಷ್ಣೇಗೌಡ, ನಿರ್ದೇಶಕ ಪುರುಷೋತ್ತಮ್ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು.

ವರುಣ್ ದೇವಯ್ಯ, ಗಾನವಿ, ಶ್ರೀಕಾಂತ್, ಹರ್ಷಿತಾ ಗೌಡ ಹಾಗೂ ಸಾಯಿತೇಜಾ ಪ್ರಮುಖ ಪಾತ್ರಗಳಲ್ಲಿ ನಟಿಸಿರುವ ಈ ಚಿತ್ರಕ್ಕೆ ನಿರ್ದೇಶಕರೇ ಕಥೆ, ಚಿತ್ರಕಥೆ ಬರೆದು ಆಕ್ಷನ್‌ಕಟ್ ಹೇಳಿದ್ದಾರೆ. ಅವರ ಪತ್ನಿ ನವನೀತ ಲಕ್ಷ್ಮಿ ಬಂಡವಾಳ ಹೂಡಿದ್ದಾರೆ. ಸೆಂಥಿಲ್‌ಕುಮಾರ್ ಅವರ ಛಾಯಾಗ್ರಹಣ, ಸತೀಶ್‌ಬಾಬು ಅವರ ಸಂಗೀತ ಸಂಯೋಜನೆ ಈ ಚಿತ್ರಕ್ಕಿದೆ,

ವೇದಿಕೆಯಲ್ಲಿ ನಿರ್ದೇಶಕ ಸುರೇಶ್ ಮಾತನಾಡುತ್ತಾ, ನಮ್ಮ ಚಿತ್ರದಲ್ಲಿ ಚಿತ್ರ ಹಾಗೂ ಲಹರಿ ಇಬ್ಬರ ಕಥೆಗಳು ಪ್ಯಾರಲಲ್ ಆಗಿಯೇ ಸಾಗಿದರೂ, ಎರಡಕ್ಕೂ ಒಂದೇ ಕ್ಲೈಮ್ಯಾಕ್ಸ್ ಇರುತ್ತದೆ. ಅದು ಹೇಗೆಂದು ಚಿತ್ರದಲ್ಲೇ ನೋಡಬೇಕು. ನ.28ಕ್ಕೆ ನಮ್ಮ ಸಿನಿಮಾ ರಿಲೀಸಾಗುತ್ತಿದೆ. ದಿ.ಸತೀಶ್‌ಬಾಬು ಅವರು ಅದ್ಭುತವಾದ ಮೂರು ಹಾಡುಗಳನ್ನು ಮಾಡಿಕೊಟ್ಟಿದ್ದಾರೆ. ತೇಜಸ್ವಿನಿ, ವರ್ಷಾ, ಗಾಯತ್ರಿ ಸೇರಿ 4 ಜನ ಯುವತಿಯರು ಚಿತ್ರ ಕಥೆಗೆ ತಿರುವು ನೀಡುವ ಪಾತ್ರಗಳಲ್ಲಿದ್ದಾರೆ. ಉಳಿದಂತೆ ಕಿಲ್ಲರ್ ವೆಂಕಟೇಶ್, ಶಶಿರೇಖಾ ನಟಿಸಿದ್ದಾರೆ ಎಂದು ಹೇಳಿದರು. ನಿರ್ಮಾಪಕಿ ನವನೀತ ಲಕ್ಷ್ಮಿ ಮಾತನಾಡುತ್ತಾ, ವಿಕ್ಕಿ ನಂತರ ಇದು ನಮ್ಮ ಸಂಸ್ಥೆಯ ಎರಡನೇ ಚಿತ್ರ, ಈ ಚಿತ್ರದ ಸ್ಟೋರಿಲೈನ್ ತುಂಬಾ ಚೆನ್ನಾಗಿದೆ, ಅಲ್ಲದೆ ನನ್ನ ಪತಿಯೇ ನಿರ್ದೇಶನ ಮಾಡಿದ್ದಾರೆ ಎಂದು ಹೇಳಿದರು.

ನಾಯಕ ವರುಣ್ ದೇವಯ್ಯ ಮಾತನಾಡುತ್ತಾ, ಸುರೇಶ್ ಅವರು ಕಥೆ ಹೇಳುವಾಗಲೇ ಥ್ರಿಲ್ಲಿಂಗ್ ಅನಿಸಿತು. ನನ್ನ ಹಾಗೂ ಜಾನವಿ ಇಬ್ಬರ ಕಾಂಬಿನೇಶನ್ ವಿಭಿನ್ನವಾಗಿದೆ ಎಂದರು.

ಮಾರುತ ಚಿತ್ರದ ಪ್ರೀರಿಲೀಸ್ ಇವೆಂಟ್



ಡಾ.ಎಸ್.ನಾರಾಯಣ್ ನಿರ್ದೇಶನದ, ದುನಿಯಾ ವಿಜಯ್, ಶ್ರೇಯಸ್ ಮಂಜು ಪ್ರಮುಖ ಪಾತ್ರದಲ್ಲಿ ನಟಿಸಿರುವ ಹಾಗೂ ಕೆ.ಮಂಜು, ರಮೇಶ್ ಯಾದವ್ ನಿರ್ಮಿಸಿರುವ 'ಮಾರುತ' ಚಿತ್ರವು ಇಂದು ರಾಜ್ಯಾದ್ಯಂತ ಅದ್ದೂರಿಯಾಗಿ ತೆರೆಕಾಣುತ್ತಿದೆ. ಇತ್ತೀಚೆಗೆ ಈ ಚಿತ್ರದ ಪ್ರೀರಿಲೀಸ್ ಕಾರ್ಯಕ್ರಮ ನಡೆಯಿತು.


ವೇದಿಕೆಯಲ್ಲಿ ನಿರ್ದೇಶಕ ಎಸ್.ನಾರಾಯಣ್ ಮಾತನಾಡುತ್ತಾ, ಮಾರುತ ನನ್ನ ನಿರ್ದೇಶನದ 51ನೇ ಚಿತ್ರ, ಕೆ.ಮಂಜು ಹಾಗೂ ರಮೇಶ್ ಯಾದವ್ ಯಾವುದಕ್ಕೂ ಕೊರತೆಯಾಗದಂತೆ ನೋಡಿಕೊಂಡು ಈ ಚಿತ್ರ ನಿರ್ಮಿಸಿದ್ದಾರೆ. ಶ್ರೇಯಸ್ ಮಂಜು, ಬೃಂದಾ ಆಚಾರ್ಯ ಅಲ್ಲದೆ ಪ್ರಮುಖ ಪಾತ್ರವೊಂದರಲ್ಲಿ ದುನಿಯಾ ವಿಜಯ್ ಕೂಡ ಚಿತ್ರದಲ್ಲಿದ್ದಾರೆ. ಶರತ್ ಲೋಹಿತಾಶ್ವ, ರಂಗಾಯಣ ರಘು, ಸಾಧುಕೋಕಿಲ, ತಾರಾ, ಪ್ರಮೋದ್ ಶೆಟ್ಟಿ, ಸುಜಯ್ ಶಾಸ್ತ್ರಿ ಹೀಗೆ ದೊಡ್ಡ ತಾರಾಬಳಗವೇ ಚಿತ್ರದಲ್ಲಿದೆ. ವಿಶೇಷ ಪಾತ್ರದಲ್ಲಿ ರವಿಚಂದ್ರನ್ ನಟಿಸಿದ್ದಾರೆ. ಈಗಿನ ಮೊಬೈಲ್ ಯುಗದಲ್ಲಿ ನಾವು ನಮ್ಮ ಮಕ್ಕಳ ಬಗ್ಗೆ ಎಷ್ಟು ಗಮನ ಕೊಟ್ಟರೂ ಕಡಿಮೆಯೇ. ಅದರಲ್ಲೂ ಹೆಣ್ಣುಮಕ್ಕಳ ಮೇಲಂತೂ ವಿಶೇಷ ಗಮನ ನೀಡಬೇಕು. ತಂದೆ, ತಾಯಿ ಮಕ್ಕಳ ಜೊತೆಗೆ ಸ್ವಲ್ಪ ಸಮಯ ಕೊಡಬೇಕು. ಇಲ್ಲದಿದ್ದರೆ ಏನೆಲ್ಲಾ ಆಗುತ್ತದೆ ಎಂಬುದನ್ನು ಈ ಚಿತ್ರದಲ್ಲಿ ತೋರಿಸಿದ್ದೇವೆ. ಸಮಾಜಕ್ಕೆ ಒಂದೊಳ್ಳೆ ಸಂದೇಶ ಚಿತ್ರದಲ್ಲಿದೆ, ಮಾರುತ ಬರೀ ಟ್ರೈಲರ್ ಇದ್ದ ಹಾಗೆ. ಮಾರುತ 2 ಕೂಡ ಬರಲಿದೆ. ಅದರಲ್ಲಿ ದುನಿಯಾ ವಿಜಯ್ ಲೀಡ್ ಆಗಿ ಕಾಣಿಸಿಕೊಳ್ಳಲಿದ್ದಾರೆ. ಸ್ಕ್ರಿಪ್ಟ್‌ವರ್ಕ್ ನಡೆಯುತ್ತಿದೆ ಎಂದು ಹೇಳಿದರು.

ದುನಿಯಾ ವಿಜಯ್ ಮಾತನಾಡಿ, ಮನುಷ್ಯನಿಗೆ ಎಲ್ಲದಕ್ಕಿಂತ ಶಿಸ್ತು ಹಾಗೂ ಸಮಯ ಪರಿಪಾಲನೆ ಮುಖ್ಯ, ಅದನ್ನು ನಾನು ಕಲಿತದ್ದೇ ಎಸ್.ನಾರಾಯಣ್‌ರಿಂದ. ಚಿತ್ರದ ಕಾನ್ಸೆಪ್ಟ್ ತುಂಬಾ ಚೆನ್ನಾಗಿದೆ ಎಂದರು. ನಿರ್ಮಾಪಕ ಕೆ.ಮಂಜು ಮಾತನಾಡಿ, ಎಸ್.ನಾರಾಯಣ್ ಅವರು ಒಂದೊಳ್ಳೆ ಸಂದೇಶ ಇಟ್ಟುಕೊಂಡು ಈ ಚಿತ್ರ ಮಾಡಿದ್ದಾರೆ. ಇದು ನನ್ನ ನಿರ್ಮಾಣದ 51ನೇ ಚಿತ್ರವೂ ಹೌದು, ನವೆಂಬರ್ ನಮಗೆ ಲಕ್ಕಿ. ಏಕೆಂದರೆ, ನನ್ನ ನಿರ್ಮಾಣದ ರಾಜಾಹುಲಿ ಹಾಗೂ ರಮೇಶ್ ಯಾದವ್ ನಿರ್ಮಾಣದ ದಾಸ ಇದೇ ತಿಂಗಳು ರಿಲೀಸಾಗಿ ಹಿಟ್ ಆಗಿದ್ದವು. ಈಗ ಮಾರುತ ಕೂಡ ಯಶಸ್ವಿಯಾಗುವ ಭರವಸೆಯಿದೆ ಎಂದರು. ನಾಯಕನಟ ಶ್ರೇಯಸ್ ಮಾತನಾಡಿ ಎಸ್.ನಾರಾಯಣ್ ಅವರಂಥ ಅನುಭವಿ ನಿರ್ದೇಶಕರ ಜತೆ ಕೆಲಸಮಾಡಿ ಸಾಕಷ್ಟು ಕಲಿತಿದ್ದೇನೆ. ಎಲ್ಲಾ ಅನುಭವಿ ಕಲಾವಿದರೇ ಈ ಚಿತ್ರದಲ್ಲಿ ಅಭಿನಯಿಸಿದ್ದಾರೆ ಎಂದರು,

ಸಿನಿಪದಬಂಧ-603



ಉಮ್ಮತ್ತೂರು ಇಂದುಶೇಖರ್
ಮೊ.9880820462



ಹೆಸರು ______

ವಿಳಾಸ ______

ದೂರವಾಣಿ ಸಂಖ್ಯೆ ______

ಎಡದಿಂದ ಬಲಕ್ಕೆ

1. ರಮೇಶ್ – ಸುಧಾರಾಣಿಯ ರಾಜಶುಕ 4
3. ಕದನ ಚಿತ್ರದ ನಾಯಕಿ 5
6. _ _ ಸಂಗ್ರಾಮ 2
8. ಮುರಳಿ – ಭವ್ಯ ಅಭಿನಯದ ಪ್ರೀತಿಯ ಹಬ್ಬ 4
10. ಇಲ್ಲೇ ಮೇಲಿನಿಂದ ಕೆಳಕ್ಕೆ 4 ರಲ್ಲಿರುವ ಚಿತ್ರದ ಹತ್ತಿರದಲ್ಲೇ ವಿಷ್ಣುವರ್ಧನ್ ಇದ್ದಾನೆ 7
11. ಬಿ.ಆರ್.ಪಂತುಲು ಅವರ ತಾಯಿ 2
14. ಮೈ ಆಟೋಗ್ರಾಫ್ ಚಿತ್ರ ಹಾಡೊಂದರ ಆರಂಭ ಚಿತ್ರವೂ ಹೌದು ! 7
16. ಅಂಬರೀಷ್ ಅಭಿನಯದಲ್ಲಿ ಬೆಳ್ಳಂಬೆಳಿಗ್ಗೆ ಸುರಿದ ಹಿಮ 6
18. ಗೆಲುವಿನಲ್ಲಿ ಯಾತ್ರಾ ಸ್ಥಳವನ್ನು ಕಂಡ ನಟ 5

ಮೇಲಿನಿಂದ ಕೆಳಕ್ಕೆ

2. ಬೆಟ್ಟದಲ್ಲಿ ಅರಳಿದ ಪುಷ್ಪ 5
4. ರಾಜ್‌ಕುಮಾರ್ ಬೇರೆಯವರಿಗೆ ಸಹಾಯ ಮಾಡಿದ್ದಾನೆ 5
5. ರಾಕಿಂಗ್ ಸ್ಟಾರ್‌ನ ಲವ್ ಸ್ಪಿನ್ 2
7. 'ಹೋಗದಿರಿ ಸೋದರರೇ', ಗೀತೆಯ ಚಿತ್ರ 4
8. ಪ್ರೀತಿಯೊಂದಿಗೆ ಹಾಡಿನ ಆರಂಭವಿದೆ 5
9. ರಾಜಕುಮಾರ್ ಅಭಿನಯದಲ್ಲಿ ಬಂದ ಚಾಲುಕ್ಯರ ದೊರೆ 7
12. ಶ್ರೀನಗರ ಕಿಟ್ಟಿ – ರಚನಾ ಅಭಿನಯದ ಚಿತ್ರ 5
13. ಶ್ವಾನವನ್ನು ಹಿಂಬಾಲಿಸಿದ ಛಾಯೆ 5
14. ರಾಜಕುಮಾರ್ ಅಭಿನಯಕ್ಕೆ ಚದುರಂಗ ನಿರ್ದೇಶಕ 5
15. ಸಹೋದರರ ಸವಾಲ್ ಚಿತ್ರದ ಸಂಗೀತ ನಿರ್ದೇಶಕ 2
17. ಆಟೋರಾಜ ಚಿತ್ರದ ನಾಯಕಿ 3

ಸಿನಿ ಪದಬಂಧ 602ರ ಉತ್ತರ

ಮು	ರಿ	ಯ	ದ	ಮ	ನೆ		ವೀ	ರ	ಧೀ	ರ
ತ್ತಿ			ವ					ತಿ		ಣಾಂ
ನ	ಗು	ವ	ನ	ಯ	ನ		ಲೋ			ಗ
ಹಾ				ಮ		ಮ	ಹಿ	ರಾ	ವ	ಣ
ರ	ಜ	ನಿ		ಕಿಂ			ತಾ			
				ಕ		ವಿ	ಶ್ವ	ರೂ	ಪ	
ಪ್ರೇ	ಮ	ಮ	ತ್ಸ	ರ		ಜ				ಚಾ
ಮಾ		ಹಾ			ನ್ಯಾ	ಯ	ವೇ	ದೇ	ವ	ರು
ಗ್ನಿ		ಲ		ಸಂ		ಲ		ವ		ಹಾ
	ಲ	ಕ್ಷ್ಮಿ	ಮ	ಹಾ	ಲ	ಕ್ಷ್ಮಿ				ಸ
				ರ				ಸು	ಮ	ನ್

ವಿಜೇತರು: ಗೋಪಾಲಕೃಷ್ಣ ಅಡಿಗ, ದೀಪಾ ಜೆರಾಕ್ಸ್, ಬಿಎಂ ರಸ್ತೆ, ಪಿರಿಯಾಪಟ್ಟಣ-571107

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015

ನೆನಪುಗಳ ಮಾತು ಮಧುರ ಟ್ರೈಲರ್



ಪತ್ರಕರ್ತ ಅಫ್ಜಲ್ ನಿರ್ದೇಶನದ ವಿಭಿನ್ನ ಕಥಾಹಂದರ ಒಳಗೊಂಡ ಚಿತ್ರ ನೆನಪುಗಳ ಮಾತು ಮಧುರ. ರೆಡ್ ಅಂಡ್ ವೈಟ್ ಸೆವೆನ್‌ರಾಜ್ ಈ ಚಿತ್ರದ ನಾಯಕ ಕಮ್ ನಿರ್ಮಾಪಕನಾಗಿದ್ದು, ಇತ್ತೀಚೆಗೆ ಈ ಸಿನಿಮಾದ ಟ್ರೈಲರ್ ಬಿಡುಗಡೆ ಕಾರ್ಯಕ್ರಮ ನಡೆಯಿತು. ನಿರ್ಮಾಪಕರ ಸಂಘದ ಅಧ್ಯಕ್ಷ ಉಮೇಶ್ ಬಣಕಾರ್ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಈಗಿನ ಸಮಾಜದಲ್ಲಿ ನಡೆಯುತ್ತಿರುವ ಘಟನೆಗಳನ್ನೇ ಚಿತ್ರದ ಮೂಲಕ ಹೇಳಲು ಪ್ರಯತ್ನಿಸಿದ್ದು, 4 ವಿಚಿತ್ರ ಘಟನೆಗಳನ್ನು ತೆರೆಮೇಲೆ ತಂದಿದ್ದೇನೆ. ಚಿತ್ರವೀಗ ಬಿಡುಗಡೆಗೆ ಸಿದ್ದವಿದ್ದು, ಮುಂದಿನ ತಿಂಗಳು ರಿಲೀಸ್ ಮಾಡುವ ಪ್ಲಾನಿದೆ ಎಂದು ನಿರ್ದೇಶಕ ಅಫ್ಜಲ್ ಹೇಳಿದರು. ಇದು ಅವರ ನಿರ್ದೇಶನದ ಮೂರನೇ ಚಿತ್ರ.

ವೇದಿಕೆಯಲ್ಲಿ ಸೆವೆನ್‌ರಾಜ್ ಮಾತನಾಡುತ್ತಾ, ನನಗೂ ಚಿತ್ರರಂಗಕ್ಕೂ 35 ವರ್ಷಗಳ ನಂಟಿದೆ. ಈ ಹಿಂದೆ ಚಡ್ಡಿ ದೋಸ್ತ್ ಕಡ್ಡಿ ಅಲ್ಲಾಡುಸ್ಬುಟ್ಟ, ಅಥಿ ಐ ಲವ್‌ಯು ಎಂಬ ಎರಡು ಚಿತ್ರಗಳನ್ನು ನಿರ್ಮಿಸಿದ್ದೆ. ನೆನಪುಗಳ ಮಾತು ಮಧುರ ನಮ್ಮ ಬ್ಯಾನರ್‌ನ ಮೂರನೇ ಚಿತ್ರ. ಕುಬೇರಪ್ಪ ಎಂಬ ಪಾತ್ರದಲ್ಲಿ ನಾನು ಅಭಿನಯಿಸಿದ್ದೇನೆ. ಆರಂಭದಲ್ಲಿ ನೆಗೆಟಿವ್ ನಂತರ ಹೇಗೆ ಒಳ್ಳೆಯವನಾಗುತ್ತಾನೆ ಎನ್ನುವುದೇ ಚಿತ್ರದ ಕಥೆ. ನನ್ನ ಹುಟ್ಟುಹಬ್ಬದ ದಿನವೇ ಟ್ರೇಲರ್ ಬಿಡುಗಡೆಯಾಗಿದ್ದು ಖುಷಿಯಾಗಿದೆ. ಈ ಚಿತ್ರದ ನಂತರ ನನ್ನ ಜೀವನ ಚರಿತ್ರೆಯನ್ನೇ ಇಟ್ಟುಕೊಂಡು ಸಿನಿಮಾ ಮಾಡುತ್ತಿದ್ದೇನೆ. ಆ ಚಿತ್ರಕ್ಕೆ 7ರಿಂದ 77 ಎಂದು ಹೆಸರಿಟ್ಟಿದ್ದೇನೆ ಎಂದು ಹೇಳಿದರು,



ನಿರ್ದೇಶಕ ಅಫ್ಜಲ್ ಮಾತನಾಡುತ್ತಾ, ನೆನಪುಗಳ ಮಾತು ಮಧುರ ನಾಲ್ಕು ಕಥೆಗಳ ಸಂಗಮ. ಒಂದು ಕಥೆ ಇಪ್ಪತ್ತೈದು ನಿಮಿಷಗಳ ಅವಧಿ ಇದ್ದು, ನಾಲ್ಕು ಕಥೆಗಳು ಬೇರೆಯದೇ ಆಯಾಮದಲ್ಲಿ ಸಾಗುತ್ತವೆ. ಸದ್ಯ, ನಾವು ಎದುರಿಸುತ್ತಿರುವ ಹಾಗೂ ಕಣ್ಣಮುಂದೆ ನೋಡುತ್ತಿರುವ ಕೆಲವು ವಿಷಯಗಳೆ ಈ ಚಿತ್ರದ ಕಥೆಗೆ ಸ್ಫೂರ್ತಿ. ಇದು ನನ್ನ ನಿರ್ದೇಶನದ ಮೂರನೇ ಚಿತ್ರವಾಗಿದ್ದು. ನಾನು ಪ್ರಮುಖ ಪಾತ್ರದಲ್ಲೂ ಅಭಿನಯಿಸಿದ್ದೇನೆ. ಸದ್ಯದಲ್ಲೇ ಚಿತ್ರವನ್ನು ರಿಲೀಸ್ ಮಾಡುವ ಪ್ಲಾನಿದೆ. ಈಗಾಗಲೇ ತಮಿಳು ರೈಟ್ಸ್ ಮಾರಾಟವಾಗಿದೆ ಎಂದರು. ರಾಜು ಎಮ್ಮಿಗನೂರು ಅವರ ಸಂಗೀತ ಸಂಯೋಜನೆ ಈ ಚಿತ್ರಕ್ಕಿದೆ.

ಮೈಸೂರು ಮಿತ್ರ

ಬೀದಿ ನಾಯಿ ದಾಳಿಯಿಂದ ಮೃತಪಟ್ಟವರಿಗೆ 5 ಲಕ್ಷ ರೂ ಪರಿಹಾರ

ರಾಜ್ಯ ಸರ್ಕಾರ ಘೋಷಣೆ



ಬೆಂಗಳೂರು, ನ.20– ಬೀದಿ ನಾಯಿಗಳ ದಾಳಿಗೆ ತುತ್ತಾಗಿ ಗಾಯಗೊಂಡವರಿಗೆ ಐದು ಸಾವಿರ ರೂ. ಹಾಗೂ ಮೃತಪಟ್ಟವರಿಗೆ 5 ಲಕ್ಷ ರೂ. ಪರಿಹಾರ ನೀಡಲಾಗುವುದು ಎಂದು ರಾಜ್ಯ ಸರಕಾರವು ಆದೇಶ ಹೊರಡಿಸಿದೆ.

ಬೀದಿ ನಾಯಿಗಳ ದಾಳಿಗೆ ತುತ್ತಾಗಿ ಗಾಯಗೊಂಡವರಿಗೆ ನೀಡುವ ಪರಿಹಾರ ಹಣದಲ್ಲಿ ಚಿಕಿತ್ಸೆ ವೆಚ್ಚವಾಗಿ 1,500 ರೂ. ಹಾಗೂ ಗಾಯಗೊಂಡ ಸಂತ್ರಸ್ತರಿಗೆ 3,500 ರೂ. ಪಾವತಿಯಾಗಲಿದೆ. ಬೀದಿ ನಾಯಿಗಳ ದಾಳಿಯಿಂದ ಮೃತಪಟ್ಟವರಿಗೆ ಅಥವಾ ರೇಬೀಸ್‌ನಿಂದ ಮೃತಪಟ್ಟವರಿಗೆ 5 ಲಕ್ಷ ರೂ. ಪರಿಹಾರ ನೀಡಲಾಗುತ್ತದೆ.

ಇನ್ನು ಗ್ರೇಟರ್ ಬೆಂಗಳೂರು ಪ್ರಾಧಿಕಾರ ವ್ಯಾಪ್ತಿಯಲ್ಲಿ ಬೀದಿ ನಾಯಿಗಳ ಕಡಿತಕ್ಕೆ ಒಳಗಾಗುವ ನಾಗರಿಕರಿಗೆ ಸಂಬಂಧಿಸಿದಂತೆ, ಪರಿಶೀಲನಾ ಮತ್ತು ಪರಿಹಾರಧನ ವಿತರಿಸುವ ಸಮಿತಿಯನ್ನು ರಚಿಸಲಾಗುತ್ತದೆ ಎಂದು ಆದೇಶದಲ್ಲಿ ಸ್ಪಷ್ಟಪಡಿಸಿದೆ.

ಕೆಲವು ಸಾರ್ವಜನಿಕ ಸ್ಥಳಗಳನ್ನು ಹೊರತುಪಡಿಸಿ, ಲಸಿಕೆ ಹಾಕಿದ ನಾಯಿ ಗಳನ್ನು ಮತ್ತೆ ಅವುಗಳ ವಾಸಸ್ಥಾನಗಳಿಗೆ ಬಿಡಲು ಸುಪ್ರೀಂಕೋರ್ಟ್ ನಿರ್ದೇಶಿಸಿದೆ.

ಈ ಕ್ರಮಗಳನ್ನು ಬೀದಿ ಬಳಕೆದಾರರ, ವಿಶೇಷವಾಗಿ ಮಕ್ಕಳು, ಮಹಿಳೆಯರು ಮತ್ತು ಹಿರಿಯ ನಾಗರಿಕರ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಲು ಮಾಡಲಾಗಿದೆ ಎಂದು ಚಿದಂಬರಂ ಹೇಳಿದ್ದಾರೆ. ಚಿದಂಬರಂ ಅವರ ಹೇಳಿಕೆಗಳು ಸುಪ್ರೀಂಕೋರ್ಟ್‌ನ ಆದೇಶದ ನಂತರ ಬಂದಿದ್ದು, ನಾಯಿ ಕಡಿತದ ಘಟನೆಗಳ ಆತಂಕಕಾರಿ ಹೆಚ್ಚಳವನ್ನು ಪರಿಗಣಿಸಿ, ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು (ಯುಟಿಗಳು) ಪ್ರತಿಯೊಂದು ಶಿಕ್ಷಣ ಸಂಸ್ಥೆ, ಆಸ್ಪತ್ರೆ, ಸಾರ್ವಜನಿಕ ಕ್ರೀಡಾ ಸಂಕೀರ್ಣಗಳು, ಬಸ್ ನಿಲ್ದಾಣಗಳು, ರೈಲ್ವೆ ನಿಲ್ದಾಣಗಳು ಇತ್ಯಾದಿಗಳಿಂದ ಎಲ್ಲಾ ಬೀದಿ ನಾಯಿಗಳನ್ನು ಹೊರ ಹಾಕಬೇಕೆಂದು ಆದೇಶಿಸಿದೆ.

ಆದರೆ ಸಂತಾನಹರಣ ಶಸ್ತ್ರಚಿಕಿತ್ಸೆಯ ನಂತರ ನಾಯಿಗಳು ತಮ್ಮ ಪ್ರದೇಶಗಳಿಗೆ ಹಿಂತಿರುಗುವುದಿಲ್ಲ. ನ್ಯಾಯಮೂರ್ತಿಗಳಾದ ವಿಕ್ರಮ್ ನಾಥ್, ಸಂದೀಪ್ ಮೆಹ್ತಾ ಮತ್ತು ಎನ್.ವಿ. ಅಂಜಾರಿಯಾ ಅವರ ಪೀಠವು ಬೀದಿ ನಾಯಿಗಳ ಪ್ರವೇಶವನ್ನು ತಡೆಯಲು ಈ ಎಲ್ಲಾ ಸಂಸ್ಥೆಗಳು ಮತ್ತು ಸ್ಥಳಗಳಿಗೆ ಸರಿಯಾಗಿ ಬೇಲಿ ಹಾಕಬೇಕು ಎಂದು ಹೇಳಿದೆ.

ಬೆಂಗಳೂರಲ್ಲಿ 7.11 ಕೋಟಿ ದರೋಡೆ ಪ್ರಕರಣ

ಕೃತ್ಯಕ್ಕೆ ಬಳಸಿದ ಇನ್ನೋವಾ ತಿರುಪತಿ ಬಳಿ ಪತ್ತೆ

● ಖದೀಮರಿಗೆ ಪೋಲೀಸಪ್ಪನ ತಯಾರಿ ● ಬೆಂಗಳೂರು ಗ್ಯಾಂಗ್‌ನಿಂದಲೇ ದರೋಡೆ ಶಂಕೆ

ಬೆಂಗಳೂರು, ನ.20–ಬೆಂಗಳೂರಿನಲ್ಲಿ ಬುಧವಾರ ಹಾಡ ಹಗಲೇ ಎಟಿಎಂ ವಾಹನ ಹೈಜಾಕ್ ಮಾಡಿ 7.11 ಕೋಟಿ ರೂ. ದರೋಡೆ ಮಾಡಿದ ಪ್ರಕರಣದ ತನಿಖೆಯಲ್ಲಿ ಪೊಲೀಸ್ ತಂಡಗಳು ತಕ್ಕಮಟ್ಟಿಗೆ ಯಶಸ್ಸು ಕಾಣುತ್ತಿದ್ದು, ಬೆಚ್ಚಿ ಬೀಳಿಸುವಂತಹ ವಿಷಯಗಳು ಬಯಲಾಗುತ್ತಿವೆ.



ದರೋಡೆ ನಡೆದ ಎಟಿಎಂ ವಾಹನವನ್ನು ಪೊಲೀಸರು ಪರಿಶೀಲಿಸುತ್ತಿರುವುದು

ಎಟಿಎಂ ಹಣ ದರೋಡೆ ಮಾಡಲು ಬಳಸಿದ ಇನ್ನೋವಾ ಕಾರು ತಿರುಪತಿ ಬಳಿ ಪತ್ತೆಯಾಗಿದ್ದು, ಆಂಧ್ರಪ್ರದೇಶದ ಚಿತ್ತೂರು ಪೊಲೀಸರ ಸಹಕಾರದೊಂದಿಗೆ ಬೆಂಗಳೂರು ನಗರ ಪೊಲೀಸರು ಇಬ್ಬರು ಆರೋಪಿಗಳನ್ನು ಬಂಧಿಸಿದ್ದಾರೆ. ಈ ದರೋಡೆಯನ್ನು ಬೆಂಗಳೂರಿನ ಗ್ಯಾಂಗ್ ನಡೆಸಿದೆ ಎಂಬುದು ದೃಢಪಟ್ಟಿದ್ದು, ಪೊಲೀಸ್ ಕಾನ್‌ಸ್ಟೇಬಲ್ ಓರ್ವ ಕಿಂಗ್‌ಪಿನ್ ಆಗಿ ಕಾರ್ಯ ನಿರ್ವಹಿಸಿದ್ದಾನೆ ಎಂಬ ಆಘಾತಕಾರಿ ಮಾಹಿತಿ ಲಭ್ಯವಾಗಿದೆ.

ಗೋವಿಂದಪುರ ಠಾಣೆಯ ಕಾನ್‌ಸ್ಟೇಬಲ್ ಅಣ್ಣಪ್ಪ ನಾಯಕ ಎಂಬಾತನೇ ದರೋಡೆ ಗ್ಯಾಂಗ್‌ನ ಕಿಂಗ್‌ಪಿನ್ ಆಗಿದ್ದು, ಆತನನ್ನು ವಶಕ್ಕೆ ಪಡೆದಿರುವ ಬೆಂಗಳೂರು ದಕ್ಷಿಣ ವಿಭಾಗದ ಪೊಲೀಸರು, ವಿಚಾರಣೆ ನಡೆಸುತ್ತಿದ್ದಾರೆ.

ಇದಕ್ಕೂ ಮುನ್ನ ಬಾಣಸವಾಡಿಯ ಕಲ್ಯಾಣನಗರದ ಇಬ್ಬರನ್ನು ವಶಕ್ಕೆ ತೆಗೆದುಕೊಂಡಿದ್ದ ಪೊಲೀಸರು, ವಿಚಾರಣೆಗೊಳಪಡಿಸಿದ ವೇಳೆ ಪೊಲೀಸಪ್ಪನ ಪಾತ್ರ ಬಯಲಾಗಿದೆ. ಕಾನ್‌ಸ್ಟೇಬಲ್ ಅಣ್ಣಪ್ಪ ನಾಯಕ ಬಾಣಸವಾಡಿಯ ಕಲ್ಯಾಣನಗರ ಮತ್ತು ಕಮ್ಮನಹಳ್ಳಿಯ ಹುಡುಗರ ತಂಡವನ್ನು ಸಂಘಟಿಸಿ, ಎಟಿಎಂ ವಾಹನವನ್ನು ಹ್ಯಾಗೆ ದರೋಡೆ ಮಾಡಬೇಕು? ನಂತರ ತಪ್ಪಿಸಿಕೊಳ್ಳುವುದು ಹೇಗೆ ಎಂಬುದರ ಬಗ್ಗೆ ಪ್ಲಾನ್ ರೆಡಿ ಮಾಡಿಕೊಟ್ಟಿದ್ದ. ಜೊತೆಗೆ ಅವರಿಗೆ ತರಬೇತಿಯನ್ನೂ ನೀಡಿದ್ದ ಎಂಬ ಮಾಹಿತಿ ಲಭ್ಯವಾಗುತ್ತಿದ್ದಂತೆಯೇ ಅಣ್ಣಪ್ಪ ನಾಯಕನನ್ನು ಪೊಲೀಸರು ವಶಕ್ಕೆ ತೆಗೆದುಕೊಂಡರು.

ತಾಂತ್ರಿಕ ತಂಡ ಸಿಸಿ ಕ್ಯಾಮರಾ ದೃಶ್ಯಾವಳಿಗಳನ್ನು ಪರಿಶೀಲಿಸಿದ ವೇಳೆ ಒಂದು ದಿನ ಮುಂಚಿತವಾಗಿಯೇ ದರೋಡೆಕೋರರು ಬ್ಯಾಂಕ್ ಮುಂದೆ ಪರಿಶೀಲನೆ ನಡೆಸಿದ್ದರು. ಬುಧವಾರ ಬ್ಯಾಂಕ್‌ನಿಂದ ಹಣ ಹೊತ್ತ ಸಿಎಂಎಸ್ ಸೆಕ್ಯೂರಿಟಿ ಏಜೆನ್ಸಿ ವಾಹನ ಹೊರಡುತ್ತಿದ್ದಂತೆಯೇ ಬೈಕ್‌ಗಳಲ್ಲಿ ಕೆಲವರು ಅದನ್ನು ಹಿಂಬಾಲಿಸಿದರು. ನಂತರವಷ್ಟೇ ಇನ್ನೋವಾ ಕಾರು ಆ ರಸ್ತೆಯನ್ನು ಪ್ರವೇಶಿಸಿ ಅಶೋಕ ಪಿಲ್ಲರ್‌ನಿಂದ ಲಾಲ್‌ಬಾಗ್ ಕಾಂಪೌಂಡ್ ರಸ್ತೆಯಲ್ಲಿ ಹಣ ಹೊತ್ತ ವಾಹನ ತೆರಳುತ್ತಿದ್ದಾಗ ಅದನ್ನು ತಡೆದಿದ್ದಾರೆ.

ಆ ಸ್ಥಳದಲ್ಲಿ ಸಿಎಂಎಸ್ ಸೆಕ್ಯೂರಿಟಿ ಏಜೆನ್ಸಿಯ ಹ್ಯಾಂಡ್ಲರ್ (ಎಟಿಎಂಗೆ ಹಣ ತುಂಬುವವನು)ನನ್ನು ಇಳಿಸಿ ಇನ್ನೋವಾದಲ್ಲಿ ಗನ್‌ಮ್ಯಾನ್‌ಗಳನ್ನು ಕೂರಿಸಿಕೊಂಡು ಚಾಲಕನೊಂದಿಗೆ ಕೆಲವರು ಹಣವಿದ್ದ ವಾಹನದಲ್ಲೇ ತೆರಳಿದ್ದಾರೆ. ಡೈರಿ ಸರ್ಕಲ್ ಸಂಪರ್ಕಿಸುವ ಫ್ಲೈ ಓವರ್‌ನಲ್ಲಿ ವಾಹನವನ್ನು ನಿಲ್ಲಿಸಿ, ಅದರಲ್ಲಿದ್ದ ಹಣವನ್ನು ಇನ್ನೋವಾ ಕಾರಿಗೆ ತುಂಬಿದ್ದಾರೆ. ಅದೇ ವೇಳೆ ಮತ್ತೆರಡು ಕಾರುಗಳಲ್ಲಿ ಸ್ಥಳಕ್ಕೆ ಬಂದ ದರೋಡೆಕೋರರು ಗನ್‌ಮ್ಯಾನ್ ಗಳು ಮತ್ತು ಚಾಲಕನ ಮೊಬೈಲ್‌ಗಳನ್ನು ಕಸಿದುಕೊಂಡು ಅಲ್ಲೇ ನಿಲ್ಲಿಸಿಕೊಂಡಿದ್ದಾರೆ. ಇನ್ನೋವಾ ಕಾರು ಸುರಕ್ಷಿತ ಸ್ಥಳಕ್ಕೆ ತಲುಪಿದೆ ಎಂಬ ಮಾಹಿತಿ ಬಂದ ನಂತರ ಇವರನ್ನು ಬಿಟ್ಟು ಹೋಗಿದ್ದಾರೆ. ಆ ಕಾರಣದಿಂದಲೇ ದರೋಡೆ ನಡೆದು ಸುಮಾರು ಒಂದೂವರೆ ಗಂಟೆಯ ನಂತರ ಸಿಎಂಎಸ್ ಸೆಕ್ಯೂರಿಟಿ ಏಜೆನ್ಸಿಯ ವ್ಯಕ್ತಿಗಳಿಂದ ಪೊಲೀಸರಿಗೆ ಮಾಹಿತಿ ದೊರೆತಿದೆ ಎಂದು ಹೇಳಲಾಗಿದೆ.

ಎಟಿಎಂ ವಾಹನವನ್ನು ಹಿಂಬಾಲಿಸಿದ ಬೈಕ್ ಮಾಲೀಕನನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಡೇವಿಡ್ ಎಂಬ ಈತ ಅಂದು ತನ್ನ ಬೈಕ್ ಅನ್ನು ಸ್ನೇಹಿತ ವಿಜಯ್ ಎಂಬಾತನಿಗೆ ನೀಡಿದ್ದ. ಆತ ಮತ್ತೋರ್ವ ವಿಜಯ್ ಎಂಬಾತನಿಗೆ ಈ ಬೈಕ್ ಅನ್ನು ಕೊಟ್ಟಿದ್ದ ಎಂಬುದು ತನಿಖೆಯಿಂದ ತಿಳಿದು ಬಂದಿದ್ದು, ಅಂತಿಮವಾಗಿ ಬೈಕ್ ಪಡೆದಿದ್ದ ವಿಜಯ್‌ಗಾಗಿ ಪೊಲೀಸರು ಹುಡುಕಾಟ ನಡೆಸುತ್ತಿದ್ದಾರೆ.

ಬೆಂಗಳೂರಿನಲ್ಲಿ ಇಷ್ಟೆಲ್ಲಾ ವಿದ್ಯಮಾನಗಳು ನಡೆಯುತ್ತಿದ್ದರೆ, ಅದಕ್ಕೂ ಮುನ್ನವೇ ಇಂದು ಬೆಳಗ್ಗೆ ತಿರುಪತಿ ಬಳಿ ಇನ್ನೋವಾ ಕಾರು ಪತ್ತೆಯಾಗಿದೆ. ದರೋಡೆಕೋರರು ಈ ಕಾರನ್ನು ಬಿಟ್ಟು ಪರಾರಿಯಾಗಿದ್ದಾರೆ. ಅದೇ ವೇಳೆ ಬೆಂಗಳೂರು ಪೊಲೀಸರಿಗೆ ದೊರೆತ ಖಚಿತ ಮಾಹಿತಿ ಮೇರೆಗೆ ಚಿತ್ತೂರು ಪೊಲೀಸರ ಸಹಕಾರದೊಂದಿಗೆ ಇಬ್ಬರನ್ನು ಬಂಧಿಸಿ ಕರೆತಂದಿದ್ದಾರೆ.

ಎಟಿಎಂ ವಾಹನದಿಂದ ಇನ್ನೋವಾಗೆ ಹಣವನ್ನು ತುಂಬಿಕೊಂಡ ನಂತರ ಬೇರೆ ಬೇರೆ ಕಾರುಗಳಿಗೆ ಅದನ್ನು ಸ್ಥಳಾಂತರಿಸಿ ನಂತರ ಸಾಗಿಸ ಲಾಗಿದೆ ಎಂಬ ಮಾಹಿತಿ ಪೊಲೀಸರಿಗೆ ತಿಳಿದು ಬಂದಿದ್ದು, ದರೋಡೆಯಾದ ಹಣ ಬೆಂಗಳೂರಿನಲ್ಲೇ ಇದೆ ಎಂಬುದೂ ಕೂಡ ವಿಚಾರಣೆ ವೇಳೆ ಗೊತ್ತಾಗಿದೆ. ಆದರೆ ಆ ಹಣವನ್ನು ಕೊಂಡೊಯ್ದ ವ್ಯಕ್ತಿಗಳು ಸಿಕ್ಕಿದ ನಂತರವಷ್ಟೇ ಅದು ಎಲ್ಲಿದೆ ಎಂಬುದು ಗೊತ್ತಾಗಲಿದೆ ಎಂದು ಮೂಲಗಳು ತಿಳಿಸಿವೆ. ಈ ಪ್ರಕರಣದಲ್ಲಿ ಸಿಎಂಎಸ್ ಸೆಕ್ಯೂರಿಟಿ ಏಜೆನ್ಸಿಯ ಕೆಲ ಮಾಜಿ ಉದ್ಯೋಗಿಗಳು ಸೇರಿರಬಹುದು ಎಂಬ ಸಂಶಯ ವ್ಯಕ್ತವಾಗಿದ್ದು, ಆ ಬಗ್ಗೆಯೂ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಬಿಹಾರದ ಮುಖ್ಯಮಂತ್ರಿಯಾಗಿ 10ನೇ ಬಾರಿಗೆ ನಿತೀಶ್‌ಕುಮಾರ್ ಪ್ರಮಾಣ ವಚನ ಸ್ವೀಕಾರ

ಪಾಟ್ನಾ, ನ.20– ಬಿಹಾರದ ಮುಖ್ಯಮಂತ್ರಿಯಾಗಿ ನಿತೀಶ್ ಕುಮಾರ್ 10ನೇ ಬಾರಿಗೆ ಪ್ರಮಾಣ ವಚನ ಸ್ವೀಕರಿಸುವ ಮೂಲಕ ದಾಖಲೆ ಸೃಷ್ಟಿಸಿದ್ದಾರೆ.



ಪಾಟ್ನಾದ ಗಾಂಧಿ ಮೈದಾನದಲ್ಲಿ ನಡೆದ ಪ್ರಮಾಣ ವಚನ ಸ್ವೀಕಾರ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ, ಜೆ.ಪಿ ನಡ್ಡಾ ಸೇರಿದಂತೆ ಹಲವು ಪ್ರಮುಖ ಎನ್‌ಡಿಎ ನಾಯಕರ ಸಮ್ಮುಖದಲ್ಲಿ ನಿತೀಶ್ ಕುಮಾರ್ 10ನೇ ಬಾರಿಗೆ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕಾರ ಮಡಿದ್ದಾರೆ.

ರಾಜ್ಯಪಾಲ ಆರಿಫ್ ಮೊಹಮ್ಮದ್ ಖಾನ್ ಅವರು ಪ್ರಮಾಣ ವಚನ ಬೋಧಿಸಿದ್ದು, ನಿತೀಶ್ ಕುಮಾರ್ ಜೊತೆಗೆ 26 ಕ್ಯಾಬಿನೆಟ್ ಸಚಿವರು ಪ್ರಮಾಣ ವಚನ ಸ್ವೀಕರಿಸಿದ್ದಾರೆ. ಅವರಲ್ಲಿ 14 ಮಂದಿ ಬಿಜೆಪಿಯವರು, ಎಂಟು ಮಂದಿ ಜೆಡಿ(ಯು), ಇಬ್ಬರು ಎಲ್‌ಜೆಪಿ (ಆರ್‌ವಿ) ಮತ್ತು ತಲಾ ಒಬ್ಬರು ಹೆಚ್‌ಎಎಂ (ಎಸ್) ಮತ್ತು ಆರ್‌ಎಲ್‌ಎಂ ಪಕ್ಷದಿಂದ ಸಚಿವರಾಗಿ ಪ್ರಮಾಣ ವಚನ ಮಾಡಿದ್ದಾರೆ.

ಟ್ವೀಟ್ ಮಾಡಿ ಮೋದಿ ಅಭಿನಂದನೆ: ಪ್ರಮಾಣ ವಚನ ಸ್ವೀಕಾರವಾದ ಕೆಲ ಹೊತ್ತಿನಲ್ಲೆ ಟ್ವೀಟ್ ಮಾಡಿರುವ ಪ್ರಧಾನಿ ನರೇಂದ್ರ ಮೋದಿ, ಬಿಹಾರ ಸರ್ಕಾರದಲ್ಲಿ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದ ಎಲ್ಲಾ ಸಹೋದ್ಯೋಗಿಗಳಿಗೆ ನನ್ನ ಹೃತ್ಪೂರ್ವಕ ಅಭಿನಂದನೆಗಳು. ಇದು ಸಮರ್ಪಿತ ನಾಯಕರ ಅದ್ಭುತ ತಂಡ, ಇದು ಬಿಹಾರವನ್ನು ಹೊಸ ಎತ್ತರಕ್ಕೆ ಕೊಂಡೊಯ್ಯುತ್ತದೆ. ಅವರೆಲ್ಲರಿಗೂ ನನ್ನ ಶುಭಾಶಯಗಳು ಎಂದು ಬರೆದುಕೊಂಡು, ಅಭಿನಂದನೆ ತಿಳಿಸಿದ್ದಾರೆ.

ಪ್ರಿಯಾಂಕಾ ಗಾಂಧಿ ಪತಿ ರಾಬರ್ಟ್ ವಾದ್ರಾಗೆ ಮನಿ ಲಾಂಡರಿಂಗ್ ಸಂಕಷ್ಟ, ಇಡಿ ಚಾರ್ಜ್‌ಶೀಟ್ ಸಲ್ಲಿಕೆ

ನವದೆಹಲಿ, ನ.20– ಸಂಸದೆ ಪ್ರಿಯಾಂಕಾ ಗಾಂಧಿ ಪತಿ ರಾಬರ್ಟ್ ವಾದ್ರಾ ವಿರುದ್ಧ ಇಡಿ ಅಧಿಕಾರಿಗಳು ಚಾರ್ಜ್‌ಶೀಟ್ ಸಲ್ಲಿಕೆ ಮಾಡಿದ್ದಾರೆ. ಮನಿ ಲಾಂಡರಿಂಗ್ ಪ್ರಕರಣ ಸಂಬಂಧ ರಾಬರ್ಟ್ ವಾದ್ರ 9ನೇ ಆರೋಪಿಯಾಗಿ ಚಾರ್ಜ್‌ಶೀಟ್‌ನಲ್ಲಿ ಉಲ್ಲೇಖಿಸಿದ್ದಾರೆ.



ಯುಕೆ ಮೂಲದ ಡಿಫೆನ್ಸ್ ಡೀಲರ್ ಸಂಜಯ್ ಬಂಡಾರಿಗೆ ಲಿಂಕ್ ಆಗಿರುವ ಮನಿ ಲಾಂಡರಿಂಗ್ ಪ್ರಕರಣದಲ್ಲಿ ರಾಬರ್ಟ್ ವಾದ್ರಾ 9ನೇ ಆರೋಪಿ. ಈ ಪ್ರಕರಣದಲ್ಲಿನ ಇತರ ಪ್ರಮುಖ ಆರೋಪಿಗಳೆಂದರೆ, ಸಂಜಯ್ ಬಂಡಾರಿ, ಸುಮಿತ್ ಚಾಧಾ, ಸಂಜೀವ್ ಕಪೂರ್, ಅನಿರುದ್ಧ ವಾದ್ವಾ, ಸ್ಯಾಂಟೆಕ್ ಇಂಟರ್ನ್ಯಾಶನಲ್ FZC, ಆಫ್‌ಸೆಟ್ ಇಂಡಿಯಾ ಸಲ್ಯೂಷನ್ ಸೇರಿದಂತೆ ಇತರ ಕೆಲ ಪ್ರಮುಖರು ಈ ಪ್ರಕರಣದ ಆರೋಪಿಗಳಾಗಿದ್ದಾರೆ.

ಇದೇ ಮೊದಲ ಬಾರಿಗೆ ರಾಬರ್ಟ್ ವಾದ್ರ ಅವರನ್ನು ಆರೋಪಿಯಾಗಿ ಉಲ್ಲೇಖಿಸಲಾಗಿದೆ. ಇಡಿ ಅಧಿಕಾರಿಗಳು ಕೋರ್ಟ್‌ಗೆ ಸಲ್ಲಿಸಿದ ಚಾರ್ಜ್ ಶೀಟ್‌ನಲ್ಲಿ ಮನಿ ಲಾಂಡರಿಂಗ್ ಪ್ರಕರಣದಲ್ಲಿ 9ನೇ ಆರೋಪಿ ಎಂದು ಸ್ಪಷ್ಟವಾಗಿ ಉಲ್ಲೇಖಿಸಿ ದ್ದಾರೆ. ಜುಲೈ ತಿಂಗಳಲ್ಲಿ ರಾಬರ್ಟ್ ವಾದ್ರ ಅವರಿಂದ ಇಡಿ ಅಧಿಕಾರಿಗಳು ಪ್ರಿವೆನ್ಶನ್ ಆಫ್ ಮನಿ ಲಾಂಡರಿಂಗ್ ಆ್ಯಕ್ಟ್ ಅಡಿಯಲ್ಲಿ ಹೇಳಿಕೆ ದಾಖಲಿಸಿ ಕೊಳ್ಳಲಾಗಿತ್ತು. ಇದೀಗ ಅಕ್ಟೋಬರ್ ತಿಂಗಳಲ್ಲಿ ಎರಡು ಬಾರಿ ಇಡಿ ಅಧಿಕಾರಿಗಳು ವಿಚಾರಣೆಗೆ ಹಾಜರಾಗುವಂತೆ ರಾಬರ್ಟ್ ವಾದ್ರಗೆ ಸೂಚನೆ ನೀಡಿದ್ದರು. ಆದರೆ ಮೊದಲ ಸಮನ್ಸ್‌ಗೆ ಆರೋಗ್ಯದ ಕಾರಣ ನೀಡಿ ಗೈರಾಗಿದ್ದರೆ, ಎರಡನೇ ಸೂಚನೆ ವೇಳೆ ಕೋರ್ಟ್‌ನಿಂದ ಅನುಮತಿ ಪಡೆದು ವಿದೇಶಕ್ಕೆ ತೆರಳಿದ್ದರು.

ರಾಬರ್ಟ್ ವಾದ್ರ ವಿರುದ್ಧ ಮೂರು ಮನಿ ಲಾಂಡರಿಂಗ್ ಪ್ರಕರಣಗಳಿವೆ. ಈ ಪೈಕಿ ಎರಡು ಪ್ರಕರಣಗಳು ಜಮೀನು ಡೀಲಿಂಗ್‌ನಲ್ಲಿ ನಡೆದಿದೆ ಎನ್ನಲಾದ ಅಕ್ರಮ ಹಣದ ವ್ಯವಹಾರ. ಹರ್ಯಾಣ ಮತ್ತು ರಾಜಸ್ಥಾನದಲ್ಲಿ ಭೂ ಪ್ರಕರಣಗಳು ಇದಾಗಿದೆ. ಸದ್ಯ ಚಾರ್ಜ್‌ಶೀಟ್ ಸಲ್ಲಿಕೆಯಾಗಿರುವ ಪ್ರಕರಣ ಮೂರನೇಯದ್ದು. ಇದು ಸಂಜಯ್ ಭಂಡಾರಿಗೆ ನೇರವಾಗಿ ಲಿಂಕ್ ಆಗಿರುವ ಮನಿ ಲಾಂಡರಿಂಗ್ ಪ್ರಕರಣ. 2023ರಲ್ಲಿ ಈ ಪ್ರಕರಣ ಬೆಳಕಿಗೆ ಬಂದಿತ್ತು. 2009ರಲ್ಲಿ ಸಂಜಯ್ ಬಂಡಾರ್ ಲಂಡನ್‌ನ ಬ್ರೈನ್‌ಸ್ಟನ್‌ನಲ್ಲಿ ಆಸ್ತಿ ಖರೀದಿಸಿದ್ದರು. ಇದನ್ನು ರಾಬರ್ಟ್ ವಾದ್ರ ಸೂಚನೆ ಮೇರೆಗೆ ನವೀಕರಣ ಮಾಡಲಾಗಿತ್ತು. ನವೀಕರಣಕ್ಕೆ ರಾಬರ್ಟ್ ವಾದ್ರಾ ಹಣ ನೀಡಿದ್ದರು. ಆದರೆ ವಿಚಾರಣೆಯಲ್ಲಿ ತನಗೂ ಸಂಜಯ್ ಭಂಡಾರಿ ಖರೀದಿಸಿದ ಆಸ್ತಿಗೂ ಯಾವುದೇ ಸಂಬಂಧವಿಲ್ಲ ಎಂದು ವಾದ್ರಾ ಹೇಳಿದ್ದರು.

ಐದನೇ ಪುಟದಿಂದ

ಇಂಜಿನಿಯರಿಂಗ್ ವಿದ್ಯಾರ್ಥಿಗಳ ಬಂಧನ

ಮೈಸೂರು ಕಡೆಗೆ ಸಂಚರಿಸುವ ಕಾರುಗಳಲ್ಲಿ ಪ್ರಯಾಣಿಸುತ್ತಾರೆ. ಸಾರಿಗೆ ಬಸ್ ಪ್ರಯಾಣ ದರದಷ್ಟೇ ಹಣವನ್ನು ಕಾರು ಚಾಲಕನಿಗೆ ನೀಡುವುದು ಸಹಜವಾಗಿದೆ. ಇದನ್ನೇ ಈ ಇಂಜಿನಿಯರಿಂಗ್ ದರೋಡೆಕೋರರು ಬಂಡವಾಳ ಮಾಡಿಕೊಂಡು, ಹೊರ ರಾಜ್ಯದ ಕಾರಿನೊಂದಿಗೆ ಹೆದ್ದಾರಿಗೆ ಇಳಿದಿದ್ದಾರೆ. ಯಾವುದೇ ಅನುಮಾನ ಬಾರದಂತೆ ಪ್ಲಾನ್ ಮಾಡಿದ್ದಾರೆ. ಓರ್ವ ಕಾರನ್ನು ಪ್ರಯಾಣಿಕರ ಬಳಿ ನಿಲ್ಲಿಸಿಕೊಂಡು ಎಲ್ಲಿಗೆ ಹೋಗಬೇಕು ಕೇಳಿ ಹತ್ತಿಸಿಕೊಳ್ಳುತ್ತಿದ್ದಂತೆ, ಅಲ್ಲಿಯೇ ಪ್ರಯಾಣಿಕರ ಸೋಗಿನಲ್ಲಿ ನಿಲ್ಲುತ್ತಿದ್ದ ಮತ್ತಿಬ್ಬರು, ತಾವೂ ಅದೇ ಊರಿಗೆ ಹೋಗಬೇಕೆಂದು ಕಾರು ಹತ್ತುತ್ತಿದ್ದರು.

ಮಾರ್ಗಮಧ್ಯೆ ದುಷ್ಕೃತ್ಯ: ಕೆಂಗೇರಿಯಿಂದ ಬಿಡದಿ, ರಾಮನಗರ ಮೂಲಕ ಎಕ್ಸ್‌ಪ್ರೆಸ್‌ವೇನಲ್ಲಿ ಸಾಗುತ್ತಿದ್ದ ಕಾರು, ಮಂಡ್ಯದ ತೂಬಿನಕೆರೆ–ಕರಿಘಟ್ಟ ಬಳಿ ಎಕ್ಸಿಟ್ ಪಡೆಯುತ್ತಿತ್ತು. ಈ ಬಗ್ಗೆ ಪ್ರಯಾಣಿಕರ ಸೋಗಿನಲ್ಲಿದ್ದ ಖದೀಮರೇ ಚಾಲಕನನ್ನು ಪ್ರಶ್ನಿಸುತ್ತಿದ್ದರು. ಅದಕ್ಕೆ ಟೋಲ್ ತಪ್ಪಿಸಿಕೊಳ್ಳಲು ಈ ಮಾರ್ಗದಲ್ಲಿ ಹೋಗುತ್ತಿರುವುದಾಗಿ ಖದೀಮ ಚಾಲಕ ತಿಳಿಸುತ್ತಿದ್ದ. ಕಾರು ನಿರ್ಜನ ಪ್ರದೇಶಕ್ಕೆ ಬರುತ್ತಿದ್ದಂತೆ ಅಮಾಯಕ ಪ್ರಯಾಣಿಕರ ಕತ್ತಿಗೆ ಹಗ್ಗ ಹಾಕಿ ಬೆದರಿಸಿ, ಮೊಬೈಲ್, ಹಣ, ಚಿನ್ನಾಭರಣ ಸೇರಿದಂತೆ ಬೆಲೆ ಬಾಳುವ ವಸ್ತುಗಳನ್ನು ಕಿತ್ತುಕೊಂಡು, ಫೋನ್‌ಪೇ ಮೂಲಕ ಬೆಟ್ಟಿಂಗ್ ಆಪ್‌ಗೂ ಹಣ ವರ್ಗಾವಣೆ ಮಾಡಿಸಿಕೊಂಡ ನಂತರ ಅವರನ್ನು ಕಾರಿನಿಂದ ಇಳಿಸಿ, ಪರಾರಿಯಾಗುತ್ತಿದ್ದರು.

ಹಳದಿ ಬೋರ್ಡ್ ಕಾರು: ವಿರಾಜಪೇಟೆಯ ಅಬ್ದುಲ್ ಜಲೀಲ್ ಅವರು ನ.4ರಂದು ಕೆಂಗೇರಿ ಬಳಿ ಬಸ್‌ಗಾಗಿ ಕಾಯುತ್ತಿದ್ದಾಗ ಅಲ್ಲಿಗೆ ಹಳದಿ ಬೋರ್ಡ್‌ನ ಕಾರು ಬಂದು ನಿಂತಿತ್ತು. ಅದರ ಚಾಲಕ, ಎಲ್ಲಿಗೆ ಹೋಗುತ್ತಿದ್ದೀರಿ ಎಂದು ಕೇಳಿದಾಗ ವಿರಾಜಪೇಟೆಗೆ ಎಂದಿದ್ದಾರೆ. ಆಗ ನಾವು ಅಲ್ಲಿಗೆ ಹೋಗುತ್ತಿರುವುದಾಗಿ ಹೇಳಿ, ಅಬ್ದುಲ್ ಅವರನ್ನು ಕಾರಿಗೆ ಹತ್ತಿಸಿಕೊಂಡಿದ್ದಾರೆ. ಎಕ್ಸ್‌ಪ್ರೆಸ್‌ವೇನಲ್ಲಿ ಸಾಗುತ್ತಿದ್ದ ಕಾರು, ತೂಬಿನಕೆರೆ ಬಳಿ ಎಕ್ಸಿಟ್ ಪಡೆದಿದೆ. ಈ ಬಗ್ಗೆ ಅಬ್ದುಲ್ ಪ್ರಶ್ನಿಸಿದಾಗ, ಟೋಲ್ ತಪ್ಪಿಸಿಕೊಳ್ಳಲು ಹೀಗೆ ಮಾಡಿದ್ದಾಗಿ ಹೇಳಿದ್ದಾರೆ. ಆದರೆ ನಿರ್ಜನ ಪ್ರದೇಶದಲ್ಲಿ ಅಬ್ದುಲ್ ಅವರ ಕುತ್ತಿಗೆಗೆ ಹಗ್ಗ ಹಾಕಿ ಬೆದರಿಸಿ, ಫೋನ್ ಪೇ ಮೂಲಕ ಐಪಿಎಲ್ ವಿನ್ ಬೆಟ್ಟಿಂಗ್ ಆಪ್‌ಗೆ ಹಣ ವರ್ಗಾವಣೆ ಮಾಡಿಸಿಕೊಂಡು, ನಂತರ ಜೇಬಿನಲ್ಲಿದ್ದ 4 ಸಾವಿರ ಹಣ ಹಾಗೂ ಮೊಬೈಲ್ ಕಿತ್ತುಕೊಂಡು, ಅವರನ್ನು ಕಾರಿನಿಂದ ಇಳಿಸಿ ಪರಾರಿಯಾಗಿದ್ದರು. ಈ ಬಗ್ಗೆ ಅಬ್ದುಲ್ ಅವರು ಮಂಡ್ಯ ಗ್ರಾಮಾಂತರ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ನಂತರ ಇದೇ ರೀತಿ ಮೈಸೂರಿನ ಯತೀಂದ್ರ ಅವರನ್ನು ದೋಚಿರುವ ಬಗ್ಗೆ ಮಾಹಿತಿ ಲಭ್ಯವಾಗಿತ್ತು. ಹೀಗೆ ವ್ಯವಸ್ಥಿತವಾಗಿ ಅಮಾಯಕರ ದೋಚುತ್ತಿದ್ದ ಖತರ್ನಾಕ್‌ಗಳ ಬಂಧನಕ್ಕೆ ಡಿವೈಎಸ್ಪಿ ಲಕ್ಷ್ಮಿನಾರಾಯಣ ನೇತೃತ್ವದಲ್ಲಿ ಮಂಡ್ಯ ಗ್ರಾಮಾಂತರ ಠಾಣೆಯ ಶಿವಪ್ರಸಾದ್, ಪ್ರಕಾಶ್, ಪಶ್ಚಿಮ ಠಾಣೆಯ ಶೇಷಾದ್ರಿ ಹಾಗೂ ಸಿಬ್ಬಂದಿಯನ್ನೊಳಗೊಂಡ ಮೂರು ತಂಡಗಳನ್ನು ರಚಿಸಲಾಗಿತ್ತು.

ಕೊಟ್ಟ ಮಾತು ತಪ್ಪುವವರಲ್ಲ...!!

ದೊರೆತೆ ದೊರೆಯುತ್ತದೆ ಎಂದಿದ್ದಾರೆ. ನಾಯಕತ್ವ, ಸಂಪುಟ ಪುನರ್ ರಚನೆ ಸೇರಿದಂತೆ ಪಕ್ಷದ ವರಿಷ್ಠರು ನೀಡುವ ಮಾರ್ಗದರ್ಶನದಂತೆ ಸಿದ್ದರಾಮಯ್ಯ, ಶಿವಕುಮಾರ್ ಎಲ್ಲರೂ ನಡೆದುಕೊಳ್ಳಬೇಕು.

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಎರಡೂವರೆ ವರ್ಷ ಪೂರೈಸುತ್ತಿರುವ ಬೆನ್ನಲ್ಲೇ ತುರ್ತು ಪತ್ರಿಕಾಗೋಷ್ಠಿ ನಡೆಸಿದ ಸುರೇಶ್, ಮುಖ್ಯಮಂತ್ರಿ ಅವರಿಗೆ ಅಧಿಕಾರ ಹಸ್ತಾಂತರದ ಬಗ್ಗೆ ಪರೋಕ್ಷವಾಗಿ ನೆನಪು ಮಾಡಿಕೊಟ್ಟಿದ್ದಾರೆ. ಶಿವಕುಮಾರ್ ಪಕ್ಷವನ್ನು ಅಧಿಕಾರಕ್ಕೆ ತರಲು ಹಗಲು–ರಾತ್ರಿ ಶ್ರಮಿಸಿದ ಪ್ರತಿಫಲವಾಗಿ ಪಕ್ಷ ಮತ್ತೆ ಆಡಳಿತದ ಚುಕ್ಕಾಣಿ ಹಿಡಿಯಿತು.

ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಳ್ಳುವ ವೇಳೆ ಪಕ್ಷ ಅಧೋಗತಿಯಲ್ಲಿತ್ತು. ಅದನ್ನು ಕಟ್ಟಿ ಬೆಳೆಸಿ, ಸಂಘಟಿಸಿ ಕಾರ್ಯಕರ್ತರಲ್ಲಿ ಹುಮ್ಮಸ್ಸು ಮೂಡಿಸಿ ರಾಜ್ಯದ ಆಡಳಿತದ ಚುಕ್ಕಾಣಿ ಹಿಡಿಯುವಂತೆ ಮಾಡಿದ್ದಾರೆ ಎಂದರು.

ದೆಹಲಿಗೆ ಹೋದ ಸಂದರ್ಭದಲ್ಲಿ ಪಕ್ಷದ ನಾಯಕರನ್ನು ಭೇಟಿ ಮಾಡುವುದು ಸಹಜ. ಅದರಂತೆ ಈ ಬಾರಿಯೂ ಭೇಟಿ ಮಾಡಿದ್ದೇನೆ. ಅದರಲ್ಲಿ ಯಾವುದೇ ರಾಜಕೀಯ ಇಲ್ಲ ಎಂದು ಸ್ಪಷ್ಟಪಡಿಸಿದರು.

ಮುಖ್ಯಮಂತ್ರಿ ಅವರನ್ನೂ ದೆಹಲಿಯಲ್ಲಿ ಭೇಟಿ ಮಾಡಿದ್ದೆ. ಅವರು ನಮ್ಮ ನಾಯಕರು, ನಮ್ಮ ಮುಖ್ಯಮಂತ್ರಿ. ಭೇಟಿ ಸಂದರ್ಭದಲ್ಲಿ ಯಾವುದೇ ರಾಜಕೀಯ ವಿಷಯ ಪ್ರಸ್ತಾಪವಾಗಿಲ್ಲ.

ನನ್ನ ಸಹೋದರ ಶಿವಕುಮಾರ್ ಮುಖ್ಯಮಂತ್ರಿ ಆಗಬೇಕೆನ್ನುವುದು ನನ್ನ ಹಾಗೂ ಅಭಿಮಾನಿಗಳ ಆಸೆ. ಅವರ ಹಣೆಯಲ್ಲಿ ಬರೆದಿದ್ದರೆ ಆಗೇ ಆಗುತ್ತಾರೆ ಎಂದರು. ಪತ್ರಿಕಾಗೋಷ್ಠಿ ಉದ್ದಕ್ಕೂ ನೇರವಾಗಿ ಅಧಿಕಾರ ಹಸ್ತಾಂತರ ವಿಷಯ ಪ್ರಸ್ತಾಪಿಸದೆ ಅವಕಾಶ ಸಿಕ್ಕ ಸಂದರ್ಭದಲ್ಲೆಲ್ಲಾ ಪರೋಕ್ಷವಾಗಿ, ನಿಮ್ಮ ಅಧಿಕಾರಾವಧಿ ಮುಗಿದಿದೆ ಕೊಟ್ಟ ಮಾತಿನಂತೆ ನಡೆದುಕೊಳ್ಳಿ ಎಂದು ಸಂಬಂಧಪಟ್ಟವರಿಗೆ ಅರ್ಥವಾಗುವಂತೆ ಬಿಡಿಸಿ.. ಬಿಡಿಸಿ.. ಹೇಳಿದರು.

ಚಾಮರಾಜನಗರಕ್ಕೆ ಬಂದಷ್ಟು ನನ್ನ ಕುರ್ಚಿ ಗಟ್ಟಿ

ಅಂದಿದ್ದೆ, ಆ ವಿಚಾರದ ಬಗ್ಗೆ ಸಾಕಷ್ಟು ಚರ್ಚೆ ಆಗುತ್ತಿದೆ. ಅದಕ್ಕೆ ಎಲ್ಲರೂ ಕ್ರಾಂತಿ ಅಂತ ತಿಳಿದು ಕೊಂಡಿದ್ದರು. ಆದರೆ, ಯಾವ ಕ್ರಾಂತಿಯೂ ಇಲ್ಲ, ಭ್ರಾಂತಿಯೂ ಇಲ್ಲ. ಎಲ್ಲಿಯತನಕ ಜನರ ಆಶೀರ್ವಾದ ಇರುತ್ತೆ, ಅಲ್ಲಿ ತನಕ ನಾನೇ ಸಿಎಂ ಆಗಿರುತ್ತೇನೆ. ಮತ್ತೆ ರಾಜ್ಯದಲ್ಲಿ ನಾವೇ ಅಧಿಕಾರಕ್ಕೆ ಬರುತ್ತೇವೆ. 2028ರ ಚುನಾವಣೆಯಲ್ಲಿ ಯಾರ ನೇತೃತ್ವದಲ್ಲಿ ಚುನಾವಣೆ ಎದುರಿಸಬೇಕು ಎಂಬ ವಿಚಾರವನ್ನು ಮುಂದಿನ ದಿನಗಳಲ್ಲಿ ತೀರ್ಮಾನ ಮಾಡೋಣ. ಜನರು ಎಲ್ಲಿವರೆಗೆ ಅಪೇಕ್ಷಿಸುವರೋ, ಅಲ್ಲಿಯವೆಗೆ ನಾನೇ ಬಜೆಟ್ ಮಂಡಿಸುತ್ತೇನೆ ಎಂದು ತಿಳಿಸಿದರು.

ಸದ್ಯಕ್ಕೆ ಸಂಪುಟ ಪುನರ್‌ರಚನೆ ಇಲ್ಲ: ಐದು ವರ್ಷವೂ ಸಿದ್ದರಾಮಯ್ಯನವರೇ ಮುಖ್ಯಮಂತ್ರಿ ಯಾಗಿ ಮುಂದುವರಿಕೆ ಬಗ್ಗೆ ನಡೆಯುತ್ತಿರುವ ಚರ್ಚೆಗೆ ಉತ್ತರಿಸಿ, ಇದು ಅನಾವಶ್ಯಕ ಚರ್ಚೆ. ಎರಡೂವರೆ ವರ್ಷದ ನಂತರ ಸಂಪುಟ ಪುನರ್ ರಚನೆ ಮಾಡಬಹುದು ಎಂದು ತಿಳಿಸಿದ ನಂತರವಷ್ಟೇ, ಮುಖ್ಯಮಂತ್ರಿ ಬದಲಾವಣೆಯ ವಿಷಯ ಮುನ್ನಲೆಗೆ ಬಂದಿರುವುದು.

ಸದ್ಯಕ್ಕೆ ಸಂಪುಟ ಪುನರ್ ರಚನೆ ಮಾಡುವುದಿಲ್ಲ. ಈ ಬಗ್ಗೆ ಪಕ್ಷದ ವರಿಷ್ಠರು ತೀರ್ಮಾನ ತೆಗೆದುಕೊಳ್ಳಲಿದ್ದಾರೆ ಎಂದರು. ಒಟ್ಟು 34 ಸಚಿವರ ಸ್ಥಾನವಿದ್ದು, ಅದರಲ್ಲಿ ಎರಡು ಸ್ಥಾನಗಳು ಖಾಲಿಯಿವೆ. ಸಂಪುಟ ಪುನರ್‌ರಚನೆ ಸಂದರ್ಭದಲ್ಲಿ ಈ ಖಾಲಿ ಸಚಿವ ಸ್ಥಾನಗಳನ್ನು ಭರ್ತಿ ಮಾಡಲಾಗುವುದು ಎಂದರು.

ಬ್ಯಾಂಕ್ ದರೋಡೆಕೋರರ ಬಂಧನಕ್ಕೆ ಕ್ರಮ: ಬೆಂಗಳೂರಿನಲ್ಲಿ ನಡೆದ ಬ್ಯಾಂಕ್ ದರೋಡೆ ಬಗ್ಗೆ ಮಾತನಾಡಿ, ಕಳುವಿನ ಬಗ್ಗೆ ಸುಳಿವು ಸಿಕ್ಕಿದ್ದು, ಘಟನೆಗೆ ಬಳಸಿದ ಕಾರು ಪೊಲೀಸರಿಗೆ ದೊರಕಿದೆ. ಬ್ಯಾಂಕ್ ದರೋಡೆಯ ಅಪರಾಧಿಗಳನ್ನು ಶೀಘ್ರದಲ್ಲಿ ಬಂಧಿಸಲಾಗುವುದು ಎಂದರು.

ಪ್ರಧಾನಿ ಮೋದಿ ಭೇಟಿ: ಪ್ರಧಾನಿ ಮೋದಿ ಅವರೊಂದಿಗೆ ಹಲವು ವಿಚಾರ ಚರ್ಚೆ ಮಾಡಲಾಗಿದೆ. ರಾಜ್ಯದಲ್ಲಿ ಅಧಿಕ ಮಳೆಯುಂಟಾಗಿದ್ದು, ಅದರಿಂದ ಹಾನಿಗೆ ಪರಿಹಾರ ಕೇಳಲಾಗಿದೆ. ಕಬ್ಬು ಬೆಳೆಗಾರರ ಸಮಸ್ಯೆ ಹಾಗೂ ರೈತರು, ಕಾರ್ಖಾನೆ ಮಾಲೀಕರೊಂದಿಗೆ ನಡೆಸಿದ ಚರ್ಚೆಗಳ ಬಗ್ಗೆ ವಿವರಿಸಲಾಯಿತು. 11.25 ಇಳುವರಿಯಿರುವ ಕಬ್ಬು ಬೆಳೆಯ ಒಂದು ಟನ್‌ಗೆ (ಕಟಾವು ಮತ್ತು ಸಾಗಣೆ ವೆಚ್ಚ ಹೊರತುಪಡಿಸಿ) 3,300ರೂ. ನೀಡುವ ತೀರ್ಮಾನಕ್ಕೆ ರೈತರು ಹಾಗೂ ಕಾರ್ಖಾನೆಯವರು ಸಮ್ಮತಿಸಿದ್ದಾರೆ ಎಂದರು.

ವಿಷಯ ಓದಿದವರಿಗೆ ನೇಮಕಾತಿಯಲ್ಲಿ ಆದ್ಯತೆ

ಇವರ ಈ ದೂರದೃಷ್ಟಿಯ ಕಾರಣಕ್ಕೆ ದೇಶದಲ್ಲಿ ಸಹಕಾರ ಚಳವಳಿ ಗಟ್ಟಿಯಾಯಿತು ಎಂದರು. ನೆಹರೂ ಅವರ ಈ ದೂರದೃಷ್ಟಿ ಕಾರಣಕ್ಕೆ ಅವರ ಜನ್ಮ ದಿನದಂದೇ ಪ್ರತೀ ವರ್ಷ ಸಹಕಾರ ಸಪ್ತಾಹ ಉದ್ಘಾಟನೆಯಾಗುತ್ತದೆ ಎಂದರು. ಇಂದು ರಾಜ್ಯದಲ್ಲಿ ಕೃಷಿ, ಹೈನುಗಾರಿಕೆ, ಕೈಗಾರಿಕೆ, ಬ್ಯಾಂಕಿಂಗ್ ಸೇರಿ ಹಲವಾರು ಕ್ಷೇತ್ರಗಳಲ್ಲಿ ಸಹಕಾರಿ ಚಳವಳಿ, ಸಹಕಾರಿ ಸಂಘಗಳು ಬೆಳೆಯುತ್ತಲೇ ಇವೆ. ಇದು ಆರೋಗ್ಯಕಾರಿ ಬೆಳವಣಿಗೆ ಎಂದರು.

ನಾನು ಪಶು ಸಂಗೋಪನಾ ಸಚಿವನಾಗಿದ್ದಾಗ ಹಾಲು ಉತ್ಪಾದಕರ ಸಹಕಾರ ಸಂಘಗಳ ಸ್ವಾಯತ್ತತೆ ಮತ್ತು ಸ್ವಾವಲಂಭನೆಗೆ ಪೂರ್ಣ ಸಹಕಾರ ನೀಡಿದ್ದೆ. ಈಗ ಒಂದು ದಿನಕ್ಕೆ ಒಂದು ಕೋಟಿ ಲೀಟರ್ ಹಾಲು ಉತ್ಪಾದನೆಯಾಗುತ್ತಿದೆ. ನಾನು ಹಾಲು ಉತ್ಪಾದಕರ ಅನುಕೂಲಕ್ಕಾಗಿ ಲೀಟರ್ ಗೆ 5ರೂ ನಂತೆ ಒಂದು ದಿನಕ್ಕೆ 5 ಕೋಟಿ ರೂಪಾಯಿ ಸಹಾಯ ಧನವನ್ನು ರೈತರಿಗೆ ನಮ್ಮ ಸರ್ಕಾರದಿಂದ ನೀಡಲಾಗುತ್ತಿದೆ ಎಂದರು. ನಾವು ಎರಡು ಬಾರಿ ಹಾಲಿನ ದರವನ್ನು ಹೆಚ್ಚಿಸಿದರೂ ಆ ಹೆಚ್ಚುವರಿ ಹಣ ಹಾಲು ಉತ್ಪಾದಕರಿಗೇ ಹೋಗಬೇಕು ಎಂದು ಸ್ಪಷ್ಟ ಸೂಚನೆ ನೀಡಿದ್ದೇನೆ ಎಂದರು.

ನಾನು ಮುಖ್ಯಮಂತ್ರಿ ಆದಾಗಿನಿಂದ ಎಲ್ಲಾ ಜಾತಿ, ಎಲ್ಲಾ ಧರ್ಮದ ಜನರ ಕಲ್ಯಾಣಕ್ಕಾಗಿ ಕಾರ್ಯಕ್ರಮಗಳನ್ನು ರೂಪಿಸಿ ಜಾರಿ ಮಾಡುತ್ತಿದ್ದೇವೆ. ಚಾಮರಾಜನಗರ ಜಿಲ್ಲೆಯ ಎಲ್ಲಾ ಜಾತಿಯ, ಎಲ್ಲಾ ಧರ್ಮದವರೂ ನನಗೆ ಸಹಕಾರ ಕೊಟ್ಟಿದ್ದಾರೆ. ಹೀಗಾಗಿ ಚಾಮರಾಜನಗರ ಜಿಲ್ಲೆಯನ್ನು ನಾನು ಯಾವತ್ತೂ ಮರೆಯುವುದಿಲ್ಲ ಎಂದರು.

ಚಾಮರಾಜನಗರಕ್ಕೆ ಅನೇಕ ಸಾರಿ ಬಂದಿದ್ದೀನಿ. ಈ ಜಿಲ್ಲೆಗೆ ಬಂದರೆ ಮಂತ್ರಿ ಸ್ಥಾನ ಹೋಗುತ್ತೆ ಅನ್ನೋ ಕೆಟ್ಟ ಮೌಢ್ಯ ಇದೆ. ಆದರೆ ಇಲ್ಲಿಗೆ ಬಂದು ಹೋದಷ್ಟೂ ನನ್ನ ಸ್ಥಾನ ಮಾತ್ರವಲ್ಲ, ನಮ್ಮ ಪಕ್ಷದ ಅಧಿಕಾರವೂ ಮತ್ತೆ ಮತ್ತೆ ಗಟ್ಟಿ ಆಗಿದೆ ಎಂದರು.

ಜಿ.ಟಿ.ದೇವೇಗೌಡರು ನಮ್ಮ ಜೊತೆಗೇ ಇದ್ದಾರೆ!: ನಾನು ಜೆಡಿಎಸ್‌ನಲ್ಲೇ ಇದ್ದಿದ್ದರೆ ಮುಖ್ಯಮಂತ್ರಿ ಆಗುತ್ತಿರಲಿಲ್ಲ. ದೇವೇಗೌಡರು ಮತ್ತು ಅವರ ಮಕ್ಕಳು ನನ್ನನ್ನು ಮುಖ್ಯಮಂತ್ರಿ ಮಾಡಲು ಬಿಡುತ್ತಿರಲಿಲ್ಲ ಎಂದರು.

ಸಹಕಾರಿ ಚಳವಳಿಯಲ್ಲಿದ್ದ ಜಿ.ಟಿ. ದೇವೇಗೌಡರು ಈಗಲೂ ಜೆಡಿಎಸ್‌ನಲ್ಲೇ ಇದ್ದಾರೆ. ಆದರೆ ನನ್ನ ಪರವಾಗಿ ಇದ್ದಾರೆ. ಜಿ.ಟಿ.ದೇವೇಗೌಡರು 2006ರವರೆಗೂ ನನ್ನ ಜೊತೆಗೇ ಇದ್ದರು. ಜೆಡಿಎಸ್‌ನಿಂದ ನನ್ನನ್ನು ಉಚ್ಚಾಟಿಸಿದ ಮೇಲೆ ಅವರು ಅಲ್ಲೇ ಉಳಿದು ಬಿಟ್ಟರು. ಈಗ ಮತ್ತೆ ಒಂದು ರೀತಿಯಲ್ಲಿ ನಮ್ಮ ಜೊತೆಗೇ ಇದ್ದಾರೆ ಎಂದರು. ಕಾರ್ಯಕ್ರಮದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್, ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಚ್.ಸಿ.ಮಹದೇವಪ್ಪ, ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳಿಯ ಅಧ್ಯಕ್ಷ ಜಿ.ಟಿ.ದೇವೇಗೌಡ, ಸಂಸದ ಸುನೀಲ್ ಬೋಸ್, ಶಾಸಕರಾದ ಸಿ.ಪುಟ್ಟರಂಗಶೆಟ್ಟಿ, ಎ.ಆರ್.ಕೃಷ್ಣಮೂರ್ತಿ, ಎಚ್.ಎಂ. ಗಣೇಶ ಪ್ರಸಾದ್, ದರ್ಶನ್ ಧ್ರುವನಾರಾಯಣ್, ಡಾ. ತಿಮ್ಮಯ್ಯ, ಮಾಜಿ ಸಚಿವರಾದ ಕೆ.ಎನ್. ರಾಜಣ್ಣ ಚಾಮುಲ್ ಅಧ್ಯಕ್ಷರಾದ ಎಂ.ನಂಜುಂಡಸ್ವಾಮಿ ಸೇರಿದಂತೆ ಇತರರು ಇದ್ದರು.

ಶೋಕಿಲಾಲ್‌ಗಳು!

10 ಸಾವಿರ ಹಣವನ್ನು ಅದೇ ಬೆಟ್ಟಿಂಗ್ ಆಪ್‌ಗೆ ವರ್ಗಾಯಿಸಿಕೊಂಡು ಐಫೋನ್ ಕಿತ್ತುಕೊಂಡಿದ್ದರು ಎಂಬುದು ತಿಳಿದು ಬಂದಿದೆ ಎಂದಿದ್ದಾರೆ. ಈ ಮೂವರು ಆರೋಪಿಗಳು ಆನ್‌ಲೈನ್ ಕ್ಯಾಟರಿಂಗ್ ಸರ್ವೀಸ್ ನಡೆಸುತ್ತಿದ್ದರು. ಈ ವ್ಯವಹಾರದಲ್ಲಿ ನಷ್ಟವಾಗಿದ್ದರಿಂದ ಇಂತಹ ದುಷ್ಕೃತ್ಯಕ್ಕೆ ಕೈಹಾಕಿರುವುದಾಗಿ ಹೇಳಿದ್ದಾರೆ. ಇಬ್ಬರು ಕೋಲಾರದವರಾಗಿದ್ದು ತಾವು ಪಿಜಿಯಲ್ಲಿ ಇರುವುದಾಗಿ ಪೋಷಕರಿಗೆ ತಿಳಿಸಿ, ಬೆಂಗಳೂರಲ್ಲಿ ಅಪಾರ್ಟ್‌ಮೆಂಟ್‌ನಲ್ಲಿ ವಾಸಿಸುತ್ತಿದ್ದರು. ಆರ್ಥಿಕವಾಗಿ ಸ್ಥಿತಿವಂತ ಕುಟುಂಬದವರಾದರೂ ಐಶಾರಾಮಿ ಜೀವನ ಹಾಗೂ ದುಶ್ಚಟಗಳಿಗಾಗಿ ಕೆಟ್ಟ ದಾರಿ ಹಿಡಿದಿದ್ದರು ಎಂಬ ಮಾಹಿತಿ ಇದೆ ಎಂದು ತಿಳಿಸಿದ್ದಾರೆ.

ಅಂತಾರಾಷ್ಟ್ರೀಯ ಜಿಮ್ನಾಸ್ಟಿಕ್ಸ್ ತರಬೇತುದಾರ ಅರುಣ್‌ಕುಮಾರ್ ಹೆಚ್.ಪಾಟೀಲ್ ನಿಧನ

ಮೈಸೂರು, ನ.20– ಭಾರತೀಯ ಕ್ರೀಡಾ ಪ್ರಾಧಿಕಾರದ ನಿವೃತ್ತ ಸಹಾಯಕ ನಿರ್ದೇಶಕ ಹಾಗೂ ಮೈಸೂರು ನಗರದ ಬೋಗಾದಿ 2ನೇ ಹಂತದ ನಿವಾಸಿ ಅರುಣ್‌ಕುಮಾರ್ ಹೆಚ್.ಪಾಟೀಲ್ (69) ಅನಾರೋಗ್ಯದಿಂದ ಗುರುವಾರ ನಿಧನರಾದರು.



ಅಂತಾರಾಷ್ಟ್ರೀಯ ಜಿಮ್ನಾಸ್ಟಿಕ್ಸ್ ತರಬೇತುದಾರರಾದ ಇವರು, ಕ್ರೀಡಾ ಪ್ರಾಧಿಕಾರದಿಂದ ನಿವೃತ್ತಿಯಾದ ಬಳಿಕ ಮೈಸೂರಿನಲ್ಲಿ ನೆಲೆಸಿದ್ದರು. ಮೃತರು ಪತ್ನಿ, ಪುತ್ರಿ, ಪುತ್ರ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆಯು ನಾಳೆ (ನ.21ರ ಶುಕ್ರವಾರ) ಬೆಳಗ್ಗೆ 10ಕ್ಕೆ ಚಾಮುಂಡಿಬೆಟ್ಟದ ತಪ್ಪಲಿನ ಸ್ಮಶಾನದಲ್ಲಿ ನೆರವೇರಲಿದೆ ಎಂದು ಮೃತರ ಕುಟುಂಬದ ಮೂಲಗಳು ತಿಳಿಸಿವೆ.

ಮುಡಾ ಮಾಜಿ ಅಧಿಕಾರಿ ದಿನೇಶ್‌ಕುಮಾರ್ ವಿರುದ್ಧ ಪ್ರಾಸಿಕ್ಯೂಷನ್ ದೂರು ದಾಖಲು

ಬೆಂಗಳೂರು, ನ.20– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ನಿವೇಶನಗಳನ್ನು ಅಕ್ರಮವಾಗಿ ಹಂಚಿಕೆ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಮುಡಾ ಮಾಜಿ ಆಯುಕ್ತರಾಗಿದ್ದ ಜಿ.ಟಿ. ದಿನೇಶ್ ಕುಮಾರ್ ವಿರುದ್ಧ ಜಾರಿ ನಿರ್ದೇಶನಾಲಯವು ಪ್ರಾಸಿಕ್ಯೂಷನ್ ದೂರು ದಾಖಲಿಸಿದೆ.



ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದಲ್ಲಿ ದೂರು ದಾಖಲಿಸಿರುವ ಜಾರಿ ನಿರ್ದೇಶನಾಲಯವು (ಇ.ಡಿ), ದಿನೇಶ್ ಕುಮಾರ್ ಅವರು ತಮ್ಮ ಅಧಿಕಾರವನ್ನು ದುರುಪಯೋಗ ಮಾಡಿಕೊಂಡು, ಅಕ್ರಮವಾಗಿ ನೂರಾರು ನಿವೇಶನಗಳನ್ನು ಹಂಚಿಕೆ ಮಾಡಿದ್ದಾರೆ ಎಂದು ವಿವರಿಸಿದೆ.

ಮುಡಾ ನಿವೇಶನಗಳ ಹಂಚಿಕೆಯಲ್ಲಿ ಕಾನೂನು, ಸರ್ಕಾರಿ ಆದೇಶಗಳು ಮತ್ತು ಮಾರ್ಗಸೂಚಿಗಳ ಉಲ್ಲಂಘನೆಯಾಗಿರುವುದು ತನಿಖೆಯಿಂದ ತಿಳಿದುಬಂದಿದೆ ಎಂದು ತಿಳಿಸಿದೆ. ಅಕ್ರಮ ಹಂಚಿಕೆಗಳಿಗೆ ಬದಲಾಗಿ ದಿನೇಶ್ ಅವರು, ನಗದು, ಬ್ಯಾಂಕ್ ವರ್ಗಾವಣೆ ಮತ್ತು ಚರ ಮತ್ತು ಸ್ಥಿರ ಆಸ್ತಿಗಳ ರೂಪದಲ್ಲಿ ಲಂಚ ಸ್ವೀಕರಿಸಿರುವ, ಆ ಲಂಚವನ್ನು ಸಂಬಂಧಿಕರು, ಸಹಚರರ ಬ್ಯಾಂಕ್ ಖಾತೆ ಮೂಲಕ ವರ್ಗಾಯಿಸಿರುವ ಕುರಿತು ಪುರಾವೆಗಳೂ ಇವೆ ಎಂದು ತಿಳಿಸಿದೆ.

ಮುಡಾ ಹಗರಣ ಪ್ರಕರಣಕ್ಕೆ ಸಂಬಂಧಿಸಿದಂತೆ ದಿನೇಶ್ ಕುಮಾರ್ ಅವರನ್ನು ಸೆಪ್ಟೆಂಬರ್ 16, 2025 ರಂದು ಬಂಧಿಸಲಾಯಿತು. ದಿನೇಶ್ ಅವರು ಇನ್ನೂ ನ್ಯಾಯಾಂಗ ಬಂಧನದಲ್ಲಿದ್ದಾರೆ. ಪ್ರಕರಣ ಸಂಬಂಧ ಇಡಿ ಅಧಿಕಾರಿಗಳು ಇದೂವರೆಗೆ ಅಕ್ರಮವಾಗಿ ಹಂಚಿಕೆಯಾದ 283 ಮುಡಾ ನಿವೇಶನಗಳು ಮತ್ತು 450 ಕೋಟಿ ರೂ. ಮೌಲ್ಯದ ಮೂರು ಸ್ಥಿರ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಂಡಿದೆ.

ಶುದ್ಧಗಾಳಿ ಹೊಂದಿದ ನಗರಗಳ ಪಟ್ಟಿಯಲ್ಲಿ ಮೈಸೂರಿಗೆ 3ನೇ ಸ್ಥಾನ

ಮೈಸೂರು, ನ.20 (ವಿವಿಹೆಚ್)– ವಾಯು ಗುಣಮಟ್ಟ ಸೂಚ್ಯಂಕ (ಏರ್ ಕ್ವಾಲಿಟಿ ಇಂಡೆಕ್ಸ್) ಪಟ್ಟಿಯಲ್ಲಿ ಸಾಂಸ್ಕೃತಿಕ ನಗರಿ ಮೈಸೂರಿಗೆ ಶುದ್ಧ ಗಾಳಿ ಹೊಂದಿದ ನಗರಗಳ ಪಟ್ಟಿಯಲ್ಲಿ ರಾಜ್ಯಕ್ಕೆ ಮೊದಲ ಸ್ಥಾನ ಹಾಗೂ ದೇಶದಲ್ಲೇ ಮೂರನೇ ಸ್ಥಾನ ಪಡೆದಿದೆ. ಆ ಮೂಲಕ ಮತ್ತೊಂದು ಹಿರಿಮೆಗೆ ಮೈಸೂರು ಪಾತ್ರವಾಗಿದೆ.



ಕೇಂದ್ರ ವಾಯು ಮಾಲಿನ್ಯ ನಿಯಂತ್ರಣ ಮಂಡಳಿ ಭಾರತದ 10 ಅತ್ಯಂತ ಕಲುಷಿತ ಮತ್ತು ಸ್ವಚ್ಛ ನಗರಗಳ ಪಟ್ಟಿಯ ಅಕ್ಟೋಬರ್ ವರದಿ ಬಿಡುಗಡೆ ಮಾಡಿದ್ದು, ಸ್ವಚ್ಛ ನಗರಗಳ ಪಟ್ಟಿಯಲ್ಲಿ ಸಾಂಸ್ಕೃತಿಕ ರಾಜಧಾನಿ ಮೈಸೂರು 3ನೇ ಸ್ಥಾನ ಅಲಂಕರಿಸಿದೆ. ಇತ್ತ ಹರಿಯಾಣದ ಧರುಹೆರಾ ಅತ್ಯಂತ ಕಲುಷಿತ ನಗರ ಪಟ್ಟಿಯಲ್ಲಿ ಮೊದಲ ಸ್ಥಾನ ಪಡೆದುಕೊಂಡಿದೆ.

ಇದರೊಂದಿಗೆ ಕರ್ನಾಟಕದ ಮೂರು ನಗರಗಳು ಸ್ವಚ್ಛ ನಗರಗಳ ಪಟ್ಟಿಯಲ್ಲಿ ಸ್ಥಾನ ಪಡೆದಿವೆ. ಇಂಧನ ಮತ್ತು ಸ್ವಚ್ಛ ಗಾಳಿ ಸಂಶೋಧನಾ ಕೇಂದ್ರದ ಮಾಸಿಕ ವಾಯು ಗುಣಮಟ್ಟದ ವರದಿಯ ಪ್ರಕಾರ, ಮೇಘಾಲಯದ ಶಿಲ್ಲಾಂಗ್ ದೇಶದ ಅತ್ಯಂತ ಸ್ವಚ್ಛ ನಗರವಾಗಿ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದೆ. ಮೈಸೂರು 3 ನೇ ಸ್ಥಾನವನ್ನು ಪಡೆದುಕೊಂಡರೆ, ಕೊಪ್ಪಳ ಮತ್ತು ಯಾದಗಿರಿ ಕ್ರಮವಾಗಿ 6 ಮತ್ತು 8 ನೇ ಸ್ಥಾನದಲ್ಲಿವೆ.

ಮೊದಲ ಹತ್ತು ಸ್ವಚ್ಛ ನಗರಗಳಲ್ಲಿ, ಕರ್ನಾಟಕವು ನಾಲ್ಕು ಸ್ಥಾನಗಳನ್ನು ಪಡೆದಿದ್ದರೆ, ನಂತರ ತಮಿಳುನಾಡಿನಿಂದ ಮೂರು ಮತ್ತು ಮೇಘಾಲಯ, ಸಿಕ್ಕಿಂ ಮತ್ತು ಛತ್ತೀಸ್‌ಗಢ ತಲಾ ಒಂದು ಸ್ಥಾನ ಪಡೆದಿವೆ. ಏತನ್ಮಧ್ಯೆ, ಹರಿಯಾಣದ ಧರುಹೆರಾ ಅಕ್ಟೋಬರ್‌ನಲ್ಲಿ ಭಾರತದ ಅತ್ಯಂತ ಕಲುಷಿತ ನಗರವಾಗಿ ಸ್ಥಾನ ಪಡೆದಿದೆ. ಧರುಹೆರಾ ನಂತರ ರೋಹ್ಟಕ್, ಗಾಜಿಯಾಬಾದ್, ನೋಯ್ಡಾ, ಬಲ್ಲಭಗಢ, ದೆಹಲಿ, ಭಿವಾಡಿ, ಗ್ರೇಟರ್ ನೋಯ್ಡಾ, ಹಾಪುರ್ ಮತ್ತು ಗುರುಗ್ರಾಮ್‌ಗಳು ಅತ್ಯಂತ ಕಲುಷಿತ ನಗರಗಳ ಪಟ್ಟಿಯಲ್ಲಿ ಸ್ಥಾನ ಪಡೆದುಕೊಂಡಿವೆ.

ಮೈಸೂರು ಮಿತ್ರ

ಶ್ರೀ ರಾಮಕೃಷ್ಣ ಆಶ್ರಮದ ಶತಮಾನೋತ್ಸವ ಪ್ರಯುಕ್ತ

ಮೈಸೂರಲ್ಲಿ ಭಕ್ತಿಭಾವದ ಸಂಕೀರ್ತನೆ, ಭಜನಾ ಯಾತ್ರೆ

- ಪಲ್ಲಕ್ಕಿ ಉತ್ಸವದಲ್ಲಿ ದಿವ್ಯತ್ರಯರ ಚಿತ್ರಗಳ ಭವ್ಯ ಮೆರವಣಿಗೆ
- ಇಂದಿನಿಂದ ನಾಲ್ಕು ದಿನ ಶತಮಾನೋತ್ಸವ ಕಾರ್ಯಕ್ರಮಗಳು



ಮೈಸೂರಿನಲ್ಲಿ ಗುರುವಾರ ನಡೆದ ನಗರ ಸಂಕೀರ್ತನೆ ಹಾಗೂ ಭಜನಾ ಯಾತ್ರೆಯಲ್ಲಿ ಶ್ರೀ ರಾಮಕೃಷ್ಣ ಪರಮಹಂಸರ ಬೃಹತ್ ಫೋಟೋ ಹೊತ್ತ ಸಾರೋಟು ಹಾಗೂ ಭಜನಾ ಮಂಡಳಿಗಳ ಸದಸ್ಯರು ಸಾಗುತ್ತಿರುವುದನ್ನು ಕಾಣಬಹುದು.



ಯಾತ್ರೆಯಲ್ಲಿ ಆಶ್ರಮದ ಅಧ್ಯಕ್ಷರಾದ ಪೂಜ್ಯ ಸ್ವಾಮಿ ಮುಕ್ತಿದಾನಂದಜೀ ಮಹಾರಾಜ್ ಸೇರಿದಂತೆ ಆಶ್ರಮದ ಸಾಧು-ಸಂತರು ಪಾಲ್ಗೊಂಡಿರುವುದನ್ನು ಕಾಣಬಹುದು.

ಮೈಸೂರು,ನ.20(ಪಿಎಂ)- ದಿವ್ಯತ್ರಯರಾದ ಶ್ರೀರಾಮಕೃಷ್ಣ ಪರಮಹಂಸರು, ಮಾತೆ ಶಾರದಾದೇವಿ ಹಾಗೂ ಸ್ವಾಮಿ ವಿವೇಕಾನಂದರ ಆರಾಧನೆಯೊಂದಿಗೆ ನಗರ ಸಂಕೀರ್ತನೆ ಹಾಗೂ ಭಜನಾ ಯಾತ್ರೆಯು ಮೈಸೂರಿನ ಶ್ರೀ ರಾಮಕೃಷ್ಣ ಆಶ್ರಮದ ವತಿಯಿಂದ ನಗರದಲ್ಲಿ ಅತ್ಯಂತ ಸಡಗರದಿಂದ ಗುರುವಾರ ನಡೆಯಿತು.

ಮೈಸೂರಿನ ವಿವಿ ಮೊಹಲ್ಲಾದ ಮಾತೃಮಂಡಳಿ ವೃತ್ತದಲ್ಲಿರುವ ಶ್ರೀ ಚಂದ್ರಮೌಳೇಶ್ವರಸ್ವಾಮಿ ದೇವಸ್ಥಾನದಿಂದ ಯಾದವಗಿರಿಯ ಶ್ರೀ ರಾಮಕೃಷ್ಣ ಆಶ್ರಮದವರೆಗೆ ಆಶ್ರಮದ ಅಧ್ಯಕ್ಷರೂ ಆದ ರಾಮಕೃಷ್ಣ ಮಠ ಮತ್ತು ರಾಮಕೃಷ್ಣ ಮಿಷನ್ ಟ್ರಸ್ಟಿ ಪೂಜ್ಯ ಸ್ವಾಮಿ ಮುಕ್ತಿದಾನಂದಜೀ ಮಹಾರಾಜ್ ಅವರ ನೇತೃತ್ವದಲ್ಲಿ ಮೆರವಣಿಗೆಯು ಜರುಗಿತು.

ಮೈಸೂರಿನ ಶ್ರೀ ರಾಮಕೃಷ್ಣ ಆಶ್ರಮದ ಶತಮಾನೋತ್ಸವ (1925-2025), ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆಯ ಸುವರ್ಣ ಮಹೋತ್ಸವ ಹಾಗೂ ವಿವೇಕಪ್ರಭ ಮಾಸ ಪತ್ರಿಕೆಯ ರಜತ ಮಹೋತ್ಸವವನ್ನು ಸಂಯುಕ್ತವಾಗಿ ನ.21ರಿಂದ 24ರವರೆಗೆ ಆಚರಿಸುತ್ತಿದ್ದು, ಇದರ ಪೂರ್ವಭಾವಿಯಾಗಿ ನಗರ ಸಂಕೀರ್ತನೆ ಹಾಗೂ ಭಜನಾ ಯಾತ್ರೆ ನಡೆಯಿತು.

ವಿವಿ ಮೊಹಲ್ಲಾದ ಶ್ರೀ ಚಂದ್ರಮೌಳೇಶ್ವರಸ್ವಾಮಿ ದೇವಸ್ಥಾನದಲ್ಲಿ ಶ್ರೀ ಪ್ರಸನ್ನ ಪಾರ್ವತಿ ಸಮೇತ ಚಂದ್ರಮೌಳೇಶ್ವರ ದೇವರಿಗೆ ಆರತಿ ಸಲ್ಲಿಸಿ, ಶಿವನಾಮದ ಪಠಣದೊಂದಿಗೆ ನೂರಾರು ಸಾಧು-ಸನ್ಯಾಸಿಗಳ ಸಮ್ಮುಖದಲ್ಲಿ ಆಶ್ರಮದ ಅಧ್ಯಕ್ಷರಾದ ಪೂಜ್ಯ ಸ್ವಾಮಿ ಮುಕ್ತಿದಾನಂದಜೀ ಮಹಾರಾಜ್ ನಗರ ಸಂಕೀರ್ತನೆಗೆ ಚಾಲನೆ ನೀಡಿದರು.

ದಿವ್ಯತ್ರಯರ ಛಾಯಾಚಿತ್ರಗಳನ್ನು ಒಳಗೊಂಡ ಪಲ್ಲಕ್ಕಿ ಉತ್ಸವ, ಸ್ವಾಮಿ ವಿವೇಕಾನಂದರ ಪ್ರತಿಮೆ ಹಾಗೂ ಸಂದೇಶಗಳನ್ನು ಹೊಂದಿರುವ ರಥ, ಸ್ವಾಮಿ ರಾಮಕೃಷ್ಣ ಪರಮಹಂಸರ ಫೋಟೋ ಒಳಗೊಂಡ ಸಾರೋಟು ಮೆರವಣಿಗೆಗೆ ಮೆರಗು ನೀಡಿತ್ತು. ಅಪಾರ ಸಂಖ್ಯೆಯ ಭಕ್ತರು ದಿವ್ಯತ್ರಯರ ಆರಾಧನೆಯೊಂದಿಗೆ ಮೆರವಣಿಗೆಯಲ್ಲಿ ಹೆಜ್ಜೆ ಹಾಕಿದರು.

ಮೆರವಣಿಗೆಯಲ್ಲಿ ಸಾಗಿದ ಹಲವು ಭಜನಾ ತಂಡಗಳು ಭಗವಂತನ ನಾಮ ಸಂಕೀರ್ತನೆ ಮೊಳಗಿಸಿದವು. 'ರಾಮಕೃಷ್ಣ ಶರಣಂ ಶರಣಂ...', 'ರಾಮಕೃಷ್ಣ ಹರಿ ಜೈಜೈ...' ಸೇರಿದಂತೆ ದೇವರ ನಾಮಸ್ಮರಣೆಯ ಭಜನೆಗಳು ಕೇಳಿಬಂದವು. ಸಂವಿತ ಭಜನಾ ಮಂಡಳಿ, ಬೆಂಗಳೂರು ವಿಜಯನಗರದ ಗುರು ನಾರಾಯಣ ಭಾಗವತರ ವೃಂದ ಸೇರಿದಂತೆ ಹಲವು ಭಜನಾ ಮಂಡಳಿಗಳಿಂದ ಮೆರವಣಿಗೆಯುದ್ದಕ್ಕೂ ದೇವರ ನಾಮಸ್ಮರಣೆ ಪ್ರತಿಧ್ವನಿಸಿತು.

ಆಶ್ರಮದ ನೂರಾರು ಸಾಧು-ಸನ್ಯಾಸಿಗಳು, ಬ್ರಹ್ಮಚಾರಿಗಳು, ಅಪಾರ ಸಂಖ್ಯೆಯ ಸದ್ಭಕ್ತರು, ವಿದ್ಯಾರ್ಥಿಗಳು, ಮೈಸೂರಿನ ನಾಗರಿಕರು ಮೆರವಣಿಗೆಯಲ್ಲಿ ಹೆಜ್ಜೆ ಹಾಕಿದರು. ವಿವಿ ಮೊಹಲ್ಲಾದ ಕಾಳಿದಾಸ ರಸ್ತೆಯಲ್ಲಿ ಸಾಗಿದ ಮೆರವಣಿಗೆಯು, ಇಲ್ಲಿನ 8ನೇ ಕ್ರಾಸ್ ಹಾಗೂ 6ನೇ ಮೇನ್ ಮೂಲಕ ಟೆಂಪಲ್ ರಸ್ತೆಗೆ ತಲುಪಿತು. ಬಳಿಕ ಟೆಂಪಲ್ ರಸ್ತೆ ಹಾಗೂ ಕೆಆರ್‌ಎಸ್ ರಸ್ತೆಗೆ ಸಾಗಿ ಆಶ್ರಮಕ್ಕೆ ತಲುಪಿ, ಇಲ್ಲಿ ಮಹಾ ಮಂಗಳಾರತಿ ಮತ್ತು ಪ್ರಸಾದ ವಿನಿಯೋಗದೊಂದಿಗೆ ಮೆರವಣಿಗೆ ಸಮಾಪ್ತಿಗೊಂಡಿತು.

ತುಮಕೂರು ಶ್ರೀ ರಾಮಕೃಷ್ಣ ಆಶ್ರಮದ ಅಧ್ಯಕ್ಷ ಸ್ವಾಮಿ ವೀರೇಶಾನಂದಜೀ, ಸ್ವಾಮಿ ಯುಕ್ತೇಶಾನಂದ, ಸ್ವಾಮಿ ಜ್ಞಾನಯೋಗಾನಂದ, ಸ್ವಾಮಿ ಮುಕ್ತಿಪದಾನಂದ, ಸ್ವಾಮಿ ಅನೂಪಮಾನಂದ, ಸ್ವಾಮಿ ಆತ್ಮಶ್ರದ್ಧಾನಂದ ಸೇರಿದಂತೆ ಆಶ್ರಮದ ಹಿರಿಯ ಸಾಧು-ಸಂತರು ಸಹ ಪಾಲ್ಗೊಂಡಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಮಫ್ತಿ ಪೊಲೀಸ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಐ ಆ್ಯಮ್ ಗಾಡ್ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಮಸ್ತಿ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ರಾಧೇಯ (ಕ)	4 ಪ್ರದರ್ಶನಗಳು
ಗಾಯಿತ್ರಿ	
ರಾಧೇಯ (ಕ)	4 ಪ್ರದರ್ಶನಗಳು
ರಾಜಕಮಲ್	
ಕೊಡಮ ಸಿಂಹಂ(ತೆ)	4 ಪ್ರದರ್ಶನಗಳು
ಸಂಗಂ	
ಕಂಗ್ರಾಜುಲೇಷನ್ ಬ್ರದರ್(ಕ)	4 ಪ್ರದರ್ಶನಗಳು
ಲಿಡೋ	
ಬ್ರ್ಯಾಟ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಟಾಸ್ಕ್ (ಕ)	4 ಪ್ರದರ್ಶನಗಳು

ಯತ್ನಾಳ್ ಅಂತಹವರು ರಾಜ್ಯದ ಮುಖ್ಯಮಂತ್ರಿ ಆಗಬೇಕಿದೆ

ಲಾಗೈಡ್ ಕಾನೂನು ಮಾಸಿಕ ಪತ್ರಿಕೆ ಗೌರವ ಸಂಪಾದಕರೂ ಆದ ಹಿರಿಯ ವಕೀಲ ಹೆಚ್.ಎನ್.ವೆಂಕಟೇಶ್ ಅಭಿಮತ



ಮೈಸೂರಿನಲ್ಲಿ ಹಿಂದೂ ಜಾಗೃತಾ ವೇದಿಕೆ ವತಿಯಿಂದ ನಡೆದ ಕಾರ್ಯಕ್ರಮದಲ್ಲಿ ಹಿರಿಯ ವಕೀಲ ಹೆಚ್.ಎನ್.ವೆಂಕಟೇಶ್ ಮಾತನಾಡಿದರು. ಶ್ರೀ ಭಾಷ್ಯಂ ಸ್ವಾಮೀಜಿ, ಶಾಸಕ ಬಸನಗೌಡ ಪಾಟೀಲ್ ಯತ್ನಾಳ್, ವಕೀಲ ಹರೀಶ್ ಹೆಗ್ಡೆ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು, ನ.20- ಯತ್ನಾಳ್ ಅವರು ರಾಜ್ಯದ ಮುಖ್ಯಮಂತ್ರಿಯಾಗಲಿ ಎಂದು ಲಾಗೈಡ್ ಕನ್ನಡ ಕಾನೂನು ಮಾಸಪತ್ರಿಕೆ ಗೌರವ ಸಂಪಾದಕರೂ ಆದ ಮೈಸೂರಿನ ಹಿರಿಯ ವಕೀಲ ಹೆಚ್.ಎನ್.ವೆಂಕಟೇಶ್ ಆಶಿಸಿದರು.

ನಗರದ ಕಲಾಮಂದಿರದಲ್ಲಿ ಹಿಂದೂ ಜಾಗೃತಾ ವೇದಿಕೆ ವತಿಯಿಂದ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಈಗಿನ ರಾಜಕೀಯ ಹಾಗೂ ಸಾಮಾಜಿಕ ಪರಿಸ್ಥಿತಿಯಲ್ಲಿ ಬಸನಗೌಡ ಪಾಟೀಲ್ ಯತ್ನಾಳ್ ಅಂತಹವರು ಆಡಳಿತದ ಚುಕ್ಕಾಣಿ ಹಿಡಿಯುವ ಅವಶ್ಯಕತೆ ಇದೆ ಎಂದರು.

ಒಂದೆಡೆ ಸನಾತನ ಧರ್ಮ ಅಳಿವಿನಂಚಿನಲ್ಲಿದ್ದು, ಈ ಬಗ್ಗೆ ಪ್ರಶ್ನೆ ಮಾಡುವವರೇ ಇಲ್ಲದಂತಾಗಿದೆ. ಮತ್ತೊಂದೆಡೆ ದೇಶದಲ್ಲಿ ವೈದ್ಯರು, ಇಂಜಿನಿಯರ್ ಸೇರಿದಂತೆ ವಿದ್ಯಾವಂತರೇ ಬಾಂಬ್ ಸ್ಫೋಟಿಸುವ ದೇಶದ್ರೋಹಿಗಳಾಗುತ್ತಿದ್ದಾರೆ. ಒಂದು ಧರ್ಮದ ವೈದ್ಯರ ಬಗ್ಗೆಯೇ ಜನರಲ್ಲಿ ಅನುಮಾನ ಮೂಡುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ದೇಶದ ಭದ್ರತೆ, ಸುರಕ್ಷತೆ ಬಗ್ಗೆ ಮಾತನಾಡದ ಕೆಲವರಿಗೆ ಆರ್‌ಎಸ್‌ಎಸ್ ಸಂಘಟನೆಯನ್ನು ಟೀಕಿಸುವುದೇ ಛಾಳಿಯಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ರಾಜ್ಯ ಹಾಗೂ ದೇಶದ ಅಧಿಕಾರದ ಚುಕ್ಕಾಣಿ ಹಿಡಿದವರು ನೇರ ಹಾಗೂ ನಿಷ್ಠೂರವಾಗಿರಬೇಕು. ದೇಶದ್ರೋಹಿ ಕೃತ್ಯಗಳನ್ನು ಯಾವುದೇ ಕಾರಣಕ್ಕೂ ಸಹಿಸಬಾರದು. ಅಂತಹವರು ಯಾರೇ ಆಗಿದ್ದರೂ ಬಂಧಿಸಿ, ದುಷ್ಕೃತ್ಯಗಳು ಮರುಕಳಿಸದಂತೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು. ರಾಜ್ಯದಲ್ಲಿ ಅಂತಹ ವಾತಾವರಣ ನಿರ್ಮಾಣವಾಗಬೇಕಾದರೆ ಯತ್ನಾಳ್ ಅಂತಹವರು ಮುಖ್ಯಮಂತ್ರಿಗಳಾಗಬೇಕು ಎಂದು ಹಾರೈಸಿದರು.

ಕೊಂಡೋತ್ಸವ ಮೆರವಣಿಗೆ



ಮೈಸೂರಿನ ಹಲ್ಲಿನಬೀದಿಯ ಶ್ರೀ ಮಲೆ ಮಹದೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಜರುಗಿದ ಕಾರ್ತಿಕ ಮಾಸದ ಕೊಂಡೋತ್ಸವದಲ್ಲಿ ಕುದೇರು ಮಠದ ಶ್ರೀ ಗುರುಶಾಂತ ಮಹಾಸ್ವಾಮಿಗಳು, ಶ್ರೀ ಚಂದ್ರಶೇಖರ ಸ್ವಾಮೀಜಿ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಮುಖಂಡರಾದ ಹರೀಶ್, ಮದನ್, ಗುಣಶೇಖರ್, ಮಹ್ಮದ್ ಫಾರೂಖ್ ಮತ್ತಿತರರು ಪಾಲ್ಗೊಂಡಿದ್ದರು.

ಸಮಾಜವನ್ನು ದಾಸಶ್ರೇಷ್ಠರು ಸಾಹಿತ್ಯದ ಮೂಲಕ ತಿದ್ದುವ ಕೆಲಸ ಮಾಡಿದ್ದಾರೆ

- ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಅಭಿಮತ
- ಕನಕದಾಸರ ಕೀರ್ತನೆಗಳ ಗಾಯನ ಕಾರ್ಯಕ್ರಮ



ಚಾರ್ವಿ ಸತೀಶ್ ಅವರನ್ನು ಕಸಾಪ ವತಿಯಿಂದ ಸನ್ಮಾನಿಸಲಾಯಿತು.

ಮೈಸೂರು, ನ.20(ವಿವಿಹೆಚ್)- ದಾಸ ಶ್ರೇಷ್ಠರು ಸಾಹಿತ್ಯದ ಮೂಲಕ ಸಮಾಜವನ್ನು ತಿದ್ದುವ ಕೆಲಸ ಮಾಡಿದ್ದಾರೆ ಎಂದು ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಅಭಿಪ್ರಾಯಪಟ್ಟರು.

ಮೈಸೂರಿನ ವಿಜಯನಗರದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಹಾಗೂ ಉತ್ತಿಷ್ಠ ಭಾರತ ಪ್ರತಿಷ್ಠಾನ ಸಂಯುಕ್ತಾಶ್ರಯದಲ್ಲಿ ಗುರುವಾರ ನಡೆದ ದಾಸಶ್ರೇಷ್ಠ ಕನಕದಾಸರ ಜಯಂತ್ಯುತ್ಸವದ 'ಕನಕದಾಸ ಕೀರ್ತನೆಗಳ ಗಾಯನ' ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ನಮ್ಮದು ವಿವಿಧತೆಯನ್ನೊಳಗೊಂಡ ಸಮಾಜವಾಗಿದೆ. ಇದರಲ್ಲಿ ಹಲವು ವಿಷಯಗಳು, ವಿವಿಧತೆಗಳನ್ನು ಒಳಗೊಂಡಿವೆ. ಇವೆಲ್ಲವನ್ನು ಒಂದುಗೂಡಿಸಿ, ಸಮ ಸಮಾಜ ನಿರ್ಮಾಣ ಮಾಡುವುದಕ್ಕೆ ದಾಸ ಶ್ರೇಷ್ಠರು ಶ್ರಮಿಸಿದ್ದಾರೆ ಎಂದರು.

ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಸಮಾನತೆಯಡಿ ಎಲ್ಲರಿಗೂ ಅವಕಾಶ ವಿದೆ. ಇವುಗಳನ್ನು ಬಳಸಿಕೊಂಡು ಜಾತಿ, ಧರ್ಮ ಬಿಟ್ಟು ಎಲ್ಲರೂ ಒಂದಾಗಬೇಕು ಆ ಮೂಲಕ ಧಾರ್ಮಿಕ ಅಸಮಾನತೆಯನ್ನು ತೊಡೆಯಬೇಕಿದೆ ಎಂದರು.

ಕನಕದಾಸರ ಜೀವನ ಬೋಧನೆಗಳು, ಕೀರ್ತನೆಗಳು ಇಂದಿಗೂ ಪ್ರಸ್ತುತವಾಗಿವೆ. ಕನಕದಾಸರ ಕೀರ್ತನೆಗಳ ಮಾರ್ಗದರ್ಶನದಲ್ಲಿ ಸಾಗಿ ಸಹಬಾಳ್ವೆ ಹೊಂದಿದ ಸಮಾಜ ನಿರ್ಮಾಣ ಮಾಡಲು ಯುವ ಪೀಳಿಗೆ ಶ್ರಮಿಸಬೇಕು ಎಂದರು.

ಬೆಂಗಳೂರಿನ ಮಲ್ಲತಹಳ್ಳಿಯ 'ಕನಕದಾಸರ ತತ್ವ ಪದಗಳ ಅಧ್ಯಯನ ಕೇಂದ್ರ'ದಲ್ಲಿ ನಡೆದ ರಾಜ್ಯ ಮಟ್ಟದ ಕಿಶೋರ ಕನಕ ಗಮಕ ಕಾವ್ಯ ಗಾಯನ ಸ್ಪರ್ಧೆಯಲ್ಲಿ ಭಾಗವಹಿಸಿ ರಾಜ್ಯಕ್ಕೆ ಮೂರನೇ ಸ್ಥಾನ ಪಡೆದ ಮೈಸೂರಿನ ಚಾರ್ವಿ ಸತೀಶ್ ಅವರನ್ನು ಕಸಾಪ ವತಿಯಿಂದ ಸನ್ಮಾನಿಸಲಾಯಿತು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಗೌರವ ಕಾರ್ಯದರ್ಶಿ ಮ.ನ ಲತಾ ಮೋಹನ್, ಸಮಾಜ ಸೇವಕ ಡಾ.ಕೆ.ರಘುರಾಮ್ ವಾಜಪೇಯಿ, ವಿದುಷಿ ಕೆ.ಲೀಲಪ್ರಕಾಶ್, ವರಕೋಡು ಶಿಕ್ಷ ಪದವಿ ಕಾಲೇಜಿನ ಪ್ರಾಂಶುಪಾಲ ದೇಮಾಜಿ ಪಿ ಚಿಕ್ಕಹಳ್ಳಿ, ಉತ್ತಿಷ್ಠ ಪ್ರತಿಷ್ಠಾನದ ಸಂಚಾಲಕ ಚಕ್ರಪಾಣಿ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಉಪಾಧ್ಯಕ್ಷ ಎನ್. ಅನಂತ್, ಉತ್ತಿಷ್ಠ ಪ್ರತಿಷ್ಠಾನದ ಕಾರ್ಯದರ್ಶಿ ಎಂ.ವಿ. ನಾಗೇಂದ್ರಬಾಬು ಉಪಸ್ಥಿತರಿದ್ದರು.


ಶೇಷಾದ್ರಿಪುರಂ ಪದವಿ ಕಾಲೇಜಿಗೆ ಪಾಲಿಕೆಯಿಂದ ಅಭಿನಂದನಾ ಪುರಸ್ಕಾರ



ಮೈಸೂರು, ನ. 20- ಮೈಸೂರಿನ ಶೇಷಾದ್ರಿಪುರಂ ಪದವಿ ಕಾಲೇಜು ಮೈಸೂರು ಮಹಾನಗರ ಪಾಲಿಕೆಯ ಅಭಿನಂದನಾ ಪುರಸ್ಕಾರಕ್ಕೆ ಭಾಜನವಾಗಿದೆ. ಮೈಸೂರು ನಗರದಲ್ಲಿ ಹಸಿರನ್ನು ಉಳಿಸಿ ಬೆಳೆಸುವಲ್ಲಿ ತೊಡಗಿಸಿಕೊಂಡು ಪರಿಸರ ಸಂರಕ್ಷಣಾ ಕಾರ್ಯದಲ್ಲಿ ಮಹಾನಗರ ಪಾಲಿಕೆಗೆ ಬೆಂಬಲವನ್ನು ನೀಡಿರುವುದಕ್ಕಾಗಿ ಪಾಲಿಕೆಯು ಕಾಲೇಜಿನ ಕಾರ್ಯವನ್ನು ಶ್ಲಾಘಿಸಿ ಅಭಿನಂದನಾ ಪುರಸ್ಕಾರವನ್ನು ನೀಡಿ ಗೌರವಿಸಿದೆ. ಕಾಲೇಜಿನ ಪ್ರಾಂಶುಪಾಲರಾದ ಡಾ. ಸೌಮ್ಯ ಈರಪ್ಪ ಕೆ. ಅವರು ಗೌರವವನ್ನು ಸ್ವೀಕರಿಸಿದರು.

ರಾಷ್ಟ್ರೀಯ ಸೇವಾ ಯೋಜನೆ ಘಟಕದ ಕಾರ್ಯಕ್ರಮ ಅಧಿಕಾರಿ ಪ್ರೊ ಗುರುಮೂರ್ತಿ ಭಟ್, ಮುಖ್ಯಸ್ಥರು, ವಾಣಿಜ್ಯ ಮತ್ತು ನಿರ್ವಹಣಾ ಶಾಸ್ತ್ರ ವಿಭಾಗ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಅಭಿನಂದನೆ



ಜಿಲ್ಲಾ ರಾಜ್ಯೋತ್ಸವ ಪುರಸ್ಕಾರಕ್ಕೆ ಭಾಜನರಾದ ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಅಧ್ಯಕ್ಷ ಕೆ.ಬಿ.ಲಿಂಗರಾಜು ಅವರನ್ನು ಮೈಸೂರು ಫೋಟೋ ಜರ್ನಲಿಸ್ಟ್ ಅಸೋಸಿಯೇಷನ್ ವತಿಯಿಂದ ಅಭಿನಂದಿಸಲಾಯಿತು. ಅಸೋಸಿಯೇಷನ್ ಅಧ್ಯಕ್ಷ ಪ್ರತಿ ಗೋಪಾಲ ಕೃಷ್ಣ ಪ್ರಧಾನ ಕಾರ್ಯದರ್ಶಿ ಲಕ್ಷ್ಮಿನಾರಾಯಣ ಯಾದವ್, ನಿರ್ದೇಶಕರಾದ ಎಂ.ಎಸ್.ಬಸವಣ್ಣ ಕೆ.ಹೆಚ್.ಚಂದ್ರು ನಾಗೇಶ್ ಪಾಣತ್ತಲೆ, ಹಂಪಾ ನಾಗರಾಜ್, ಅನುಪ್‌ರಾಗ್, ಗವಿಮಠ ರವಿ ಚಿತ್ರದಲ್ಲಿದ್ದಾರೆ.

ನ.25ರಂದು ಮಾಂಸ ಮಾರಾಟ ನಿಷೇಧ

ಮೈಸೂರು,ನ.20- ನ.25 ರಂದು ಸೈಂಟ್ ಟಿ.ಎಲ್.ವಾಸವಾನಿ ಜಯಂತಿಯ ಪ್ರಯುಕ್ತ ಮೈಸೂರು ಮಹಾನಗರ ಪಾಲಿಕೆಗೆ ಸೇರಿದ ಕುರಿ, ಮೇಕೆಗಳ ಕಸಾಯಿಖಾನೆ ಮತ್ತು ಇತರೆ ಎಲ್ಲಾ ಮಾಂಸದ ಅಂಗಡಿಗಳನ್ನು ಮುಚ್ಚಲಾಗುತ್ತದೆ. ಈ ದಿನ (ಕುರಿ, ಮೇಕೆ, ಕೋಳಿ, ಹಂದಿ ಮಾಂಸ ಮತ್ತು ಮೀನು) ವ್ಯಾಪಾರವನ್ನು ಮೈಸೂರು ನಗರದಲ್ಲಿ ಕಡ್ಡಾಯವಾಗಿ ನಿಷೇಧಿಸಲಾಗಿರುತ್ತದೆ ಎಂದು ಮೈಸೂರು ಮಹಾನಗರ ಪಾಲಿಕೆಯ ಆರೋಗ್ಯಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರತ್ನಮ್ಮ ನಿಧನ



ಮೈಸೂರು, ನ.20- ತಾಲೂಕಿನ ಜಯಪುರ ಹೋಬಳಿ ಮಾದಳ್ಳಿ ಗ್ರಾಮದ ರತ್ನಮ್ಮ (76) ಅವರು ಗುರುವಾರ ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು.

ಇವರು ಹಿರಿಯ ವಕೀಲ ಹಾಗೂ ನೋಟರಿ ಎಂ.ಎನ್.ಬಾಲಸುಬ್ರಮಣ್ಯ ಸೇರಿ ಮೂವರು ಪುತ್ರರು, ಪುತ್ರಿ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಶುಕ್ರವಾರ(ನ.21) ಮಧ್ಯಾಹ್ನ 2ಕ್ಕೆ ಸ್ವಗ್ರಾಮದಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ. ರತ್ನಮ್ಮ ಅವರ ನಿಧನಕ್ಕೆ ಲಾಗೈಡ್ ಬಳಗ ತೀವ್ರ ಸಂತಾಪ ವ್ಯಕ್ತಪಡಿಸಿದೆ.

ನ.23ಕ್ಕೆ ಆಕಾಶವಾಣಿ ಸಂಗೀತ ಸಮ್ಮೇಳನ



ಆಕಾಶವಾಣಿ ಮೈಸೂರು ಕೇಂದ್ರದ ಸಭಾಂಗಣದಲ್ಲಿ 'ಆಕಾಶವಾಣಿ ಸಂಗೀತ ಸಮ್ಮೇಳನ'ದ ಪೋಸ್ಟರ್‌ಅನ್ನು ಕಾರ್ಯಕ್ರಮ ಹಾಗೂ ನಿಲಯದ ಮುಖ್ಯಸ್ಥ ಮಂಜುನಾಥ ಎಸ್.ಬೇದ್ರೆ ಬಿಡುಗಡೆ ಮಾಡಿದರು.

ಮೈಸೂರು,ನ.20(ಎಂಟಿವೈ)- ಆಕಾಶವಾಣಿ ಮೈಸೂರು ಕೇಂದ್ರದ ವತಿಯಿಂದ ನ.23ರಂದು ಸಂಜೆ 6 ಗಂಟೆಗೆ ಮೈಸೂರಿನ ಕುವೆಂಪುನಗರದ ಆದಿಚುಂಚನಗಿರಿ ರಸ್ತೆಯಲ್ಲಿರುವ ವೀಣೆ ಶೇಷಣ್ಣ ಭವನ ಗಾನಭಾರತಿ ಸಭಾಂಗಣದಲ್ಲಿ 67ನೇ 'ಆಕಾಶವಾಣಿ ಸಂಗೀತ ಸಮ್ಮೇಳನ' ಆಯೋಜಿಸಲಾಗಿದೆ ಎಂದು ಕಾರ್ಯಕ್ರಮ ಹಾಗೂ ನಿಲಯ ಮುಖ್ಯಸ್ಥ ಮಂಜುನಾಥ ಎಸ್.ಬೇದ್ರೆ ತಿಳಿಸಿದ್ದಾರೆ.

ಮೈಸೂರು ಆಕಾಶವಾಣಿ ಕೇಂದ್ರದ ಸಭಾಂಗಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಆಕಾಶವಾಣಿ ಮೈಸೂರು ಕೇಂದ್ರ 91 ವರ್ಷದ ಸಂಭ್ರಮಾಚರಣೆಯಲ್ಲಿದೆ. ಹಲವು ವೈವಿಧ್ಯಮಯ ಕಾರ್ಯಕ್ರಮದ ಮೂಲಕ ಶ್ರೋತೃಗಳ ಮನಗೆಲ್ಲುವಲ್ಲಿ ಮೈಸೂರು ಆಕಾಶವಾಣಿ ಕೇಂದ್ರ ಯಶಸ್ವಿಯಾಗಿದೆ ಇದೀಗ ಪ್ರಸಾರ ಭಾರತಿ, ಭಾರತೀಯ ಸಾರ್ವಜನಿಕ ಪ್ರಸಾರ ಸೇವೆ ಸಹಯೋಗದೊಂದಿಗೆ 67ನೇ 'ಆಕಾಶವಾಣಿ ಸಂಗೀತ ಸಮ್ಮೇಳನ' ನಡೆಸಲಾಗುತ್ತಿದೆ. ದೇಶದಾದ್ಯಂತ ನ.2ರಿಂದ 29ರವರೆಗೆ ಎಲ್ಲಾ ಆಕಾಶವಾಣಿ ಕೇಂದ್ರಗಳು ಸಂಗೀತ ಸಮ್ಮೇಳನ ನಡೆಸುತ್ತಿವೆ ಎಂದರು.

ಈ ಸಂಗೀತ ಸಮ್ಮೇಳವನ್ನು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ಉದ್ಘಾಟಿಸಲಿದ್ದಾರೆ. ಬಳಿಕ ವಿದ್ವಾನ್ ಹೆಚ್.ಎಲ್. ಶಿವಶಂಕರ ಸ್ವಾಮಿ ಮೃದಂಗ ತರಂಗ ಪ್ರಸ್ತುತಪಡಿಸಲಿದ್ದು, ಅವರಿಗೆ ಸಮೀರ್ ರಾವ್ ಕೊಳಲು, ಜ್ಯೋತ್ಸ್ನಾ ಶ್ರೀಕಾಂತ್ ಪಿಟೀಲು, ಸಂಗೀತ್ ಥಾಮಸ್ ಕೀ ಬೋರ್ಡ್, ಅನುಷ್ ಶೆಟ್ಟಿ ತಾಳವಾದ್ಯ ಸಾಥ್ ನೀಡಲಿದ್ದಾರೆ.

ಬಳಿಕ ವಿದುಷಿ ಡಾ.ಎಸ್.ವಿ.ಸಹನಾ ಅವರಿಂದ ವೀಣಾ ವಾದನ ಜರುಗಲಿದ್ದು, ಅವರಿಗೆ ಅರ್ಜುನ್ ಕುಮಾರ್ ಮೃದಂಗ, ಜಿ.ಎಸ್.ರಾಮಾನುಜನ್ ಘಟಂ ಸಾಥ್ ನೀಡಲಿದ್ದಾರೆ ಎಂದು ವಿವರಿಸಿದರು.

ಈ ಕಾರ್ಯಕ್ರಮವನ್ನು ಪ್ರಸಾರ ಭಾರತಿ ವತಿಯಿಂದ ದೂರದರ್ಶನವು ಮುದ್ರಿಸಿಕೊಳ್ಳುತ್ತಿದ್ದು, ರಾಷ್ಟ್ರಮಟ್ಟದಲ್ಲಿ ಪ್ರಸಾರ ಮಾಡಲಿದೆ. ಕೇಂದ್ರದ ಸಂಸ್ಕೃತಿ ಸಚಿವಾಲಯ ಹಾಗೂ ಪ್ರಸಾರ ಭಾರತಿ ವತಿಯಿಂದ ಹಮ್ಮಿಕೊಂಡಿದೆ.

ಭಾರತದ ಸಾಂಸ್ಕೃತಿಕ ಪರಂಪರೆಯನ್ನು ಪಸರಿಸುವಲ್ಲಿ ಕರ್ನಾಟಕ, ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಪ್ರಕಾರಗಳು ಮಹತ್ವಪೂರ್ಣ ಪಾತ್ರವನ್ನು ವಹಿಸಿವೆ. ಇದರ ಜೊತೆಗೆ ಲಘು ಸಂಗೀತಾ ಮತ್ತು ಜನಪದ ಸಂಗೀತಗಳಿಗೂ ಸಮಾನ ಆದ್ಯತೆಯನ್ನು ನೀಡುತ್ತಾ ಬರಲಾಗಿದೆ. ಭಾರತದ ಸಮೃದ್ಧ ಶ್ರೀಮಂತ ಸಂಗೀತ ಪರಂಪರೆಯನ್ನು ಜನಪ್ರಿಯಗೊಳಿಸುವುದು ಈ ಸಮ್ಮೇಳನದ ಗುರುತರ ಉದ್ದೇಶವಾಗಿದೆ. ಸುಪ್ರಸಿದ್ಧ ಗಾಯಕ-ಗಾಯಕಿಯರಲ್ಲದೇ ಉದಯೋನ್ಮುಖ ಪ್ರತಿಭೆಗಳಿಗೂ ತಮ್ಮ ವಿದ್ವತ್ ಅನ್ನು ಪ್ರಸ್ತುತಪಡಿಸಲು ಸಮ್ಮೇಳನ ಪ್ರತಿಷ್ಠಿತ ವೇದಿಕೆಯಾಗಿದೆ ಎಂದರು.

ಸಮ್ಮೇಳನದಲ್ಲಿ ಪ್ರಸ್ತುತ ಪಡಿಸಿದ ಕಾರ್ಯಕ್ರಮವನ್ನು ಆಕಾಶವಾಣಿ ರಾಷ್ಟ್ರೀಯ ಕಾರ್ಯಕ್ರಮದಲ್ಲಿ ಜನವರಿ ತಿಂಗಳಲ್ಲಿ ಪ್ರಸಾರ ಮಾಡಲಾಗುತ್ತದೆ. ಹೀಗಾಗಿ ಪ್ರತಿಭೆಗಳಿಗೆ ರಾಷ್ಟ್ರೀಯ ಮನ್ನಣೆ ದೊರೆಯುತ್ತದೆ. ಮೈಸೂರು ಆಕಾಶವಾಣಿಯ ಕಾರ್ಯಕ್ರಮಗಳಿಗೆ ವಿದೇಶದಲ್ಲೂ ಅಪಾರ ಮಟ್ಟದಲ್ಲಿ ಶ್ರೋತೃಗಳು ಇದ್ದಾರೆ. ಮೊಬೈಲ್ ಅಪ್ಲಿಕೇಷನ್ ಮೂಲಕ ಈಗ ಮೈಸೂರು ಆಕಾಶವಾಣಿ ಕಾರ್ಯಕ್ರಮವನ್ನು ಎಲ್ಲ ಕಡೆಯೂ ಆಲಿಸಬಹುದಾಗಿದೆ. ಈ ಹಿನ್ನೆಲೆಯಲ್ಲಿ ಕೇಳುಗ ವರ್ಗವೂ ಹೆಚ್ಚಾಗಿದೆ. ಆದ್ದರಿಂದ ಈ ನಿಟ್ಟಿನಲ್ಲಿ ನಾವು ಹಲವಾರು ವೈವಿಧ್ಯಮಯ ಕಾರ್ಯಕ್ರಮವನ್ನು ನೀಡಲು ಯಾವಾಗಲೂ ಕಾರ್ಯಪ್ರವೃತ್ತರಾಗಿರುತ್ತೇವೆ. ಸಾರ್ವಜನಿಕರು, ಸಂಗೀತ ಪ್ರೇಮಿಗಳಿಗೆ ಮುಕ್ತ ಪ್ರವೇಶವಿದೆ. ಯಾವುದೇ ಪಾಸ್, ಟಿಕೆಟ್ ಇರುವುದಿಲ್ಲ ಎಂದರು.

ಸುದ್ದಿಗೋಷ್ಠಿಯಲ್ಲಿ ಕಾರ್ಯಕ್ರಮ ನಿರ್ವಾಹಕ ಎನ್.ಕೇಶವಮೂರ್ತಿ, ತಾಂತ್ರಿಕ ವಿಭಾಗದ ಮುಖ್ಯಸ್ಥ ಪಿ.ಆನಂದನ್, ಹಿರಿಯ ಉದ್ಘೋಷಕ ಡಾ.ಮೈಸೂರು ಉಮೇಶ್ ಇದ್ದರು.

OBITUARY
In Loving Memory of



Our beloved Mother
Mrs. PARVATHI M
W/o Late Dr. R Kempaiah (H.M.T)
11 Oct 1947 - 10 Nov 2025
Amma, you will be deeply missed and forever cherished.
Cherished by:
Narayan K, Ganesh K, Krishna Prasad
Grand Daughter, Relatives, Family & Friends

VIBHA TOURS
EUROPE TOUR - 15N / 16D
London, Paris, Belgium, German, Netherlands, Switzerland, Italy, Liechtenstein, Austria, Vatican City
₹ 4,05,000+GST+TCS/-
Initial Booking Amount ₹ 50,000
BOOK NOW
#641, 8th Main, A-1 Block, Vijaynagar 3rd Stage, Mysore - 17
+91 89719 20816
+91 89719 59003

WANTED
Security Agency requires
MANAGER
with experience must.
Age below 30 years.
Salary: 30,000 + ESI + PF
Mob: 9900632749

Aquaguard & Kent
Water Purifier
Sales & Service
9901200444
#319, Near Mega Medical Store, Kuvempunagar

In Loving Memory
6th Death Anniversary



PETER
15.2.1957 - 21.11.2019
You taught me life's most valuable lessons to work hard, love abundantly & live with integrity, I carry that wisdom with me in my heart.
Wife - Maria Peter

HOUSE FOR SALE
IN GATED-COMMUNITY
As per your requirement, Architect designed
Near St Joseph School Mysore
20x40 @ 38 Lakhs.
30x50 @ 71 Lakhs.
8123387555, 7259348777

ಬೇಕಾಗಿದ್ದಾರೆ
ಕೌಶಿಕ್ ಕನ್ಸಲ್ಟೆಂಟ್ಸ್, ಮೈಸೂರು–570022
ರಸ್ತೆ ಹಾಗೂ ಇತರೆ ಸರ್ವೇ ಕೆಲಸಕ್ಕೆ ಬೇಕಾಗಿದ್ದಾರೆ.
ವಿದ್ಯಾರ್ಹತೆ 7ನೇ ಮತ್ತು 10ನೇ ತರಗತಿ(P/F)
ವಯಸ್ಸು: 18 ರಿಂದ 30 ವರ್ಷದೊಳಗೆ
9986246267
9591015424

ಜಮೀನು ಮಾರಾಟಕ್ಕಿದೆ
2 ಎಕರೆ ತೆಂಗಿನ ತೋಟ
ಹುಲ್ಲಹಳ್ಳಿ–ರಾಂಪುರ
ಅಹಲ್ಯ ಡಾಂಬರ್ ರಸ್ತೆ
(ರಿಂಗ್ ರೋಡ್‌ನಿಂದ 15ಕಿ.ಮೀ)
9008897496

1% ನೆಟ್ ಫ್ರಾಫಿಟ್
1 ಸೀರೆ ಖರೀದಿಸಿ, 1 ಸೀರೆ ಉಚಿತ ಪಡೆಯಿರಿ
2 ಸೀರೆ ಖರೀದಿಸಿ, 1 ಸೀರೆ ಉಚಿತ ಪಡೆಯಿರಿ
"ಸೀರೆಗಳ ಸಂಭ್ರಮ"
ವಿಳಾಸ : ಕುವೆಂಪುನಗರ KSRTC ಬಸ್ ಡಿಪೋ ಪಕ್ಕ, ಬಸ್ ನಿಲ್ದಾಣ, ಮೈಸೂರು
ಸಂಪರ್ಕಿಸಿ:
9980620678, 7411749410

ಶ್ರೀ ಸಂಜೀವಿನಿ ಗೋಲ್ಡ್ ಕಂಪನಿ
ನೀವು ಗಿರವಿ ಇಟ್ಟ ಚಿನ್ನಾಭರಣ ಬಿಡಿಸಿ ಉಳಿದ ಹಣವನ್ನು ನಿಮ್ಮ ಸ್ಥಳದಲ್ಲೇ ನೀಡಲಾಗುತ್ತದೆ.
ಒಂದು ಗ್ರಾಂ ಚಿನ್ನಕ್ಕೆ–
Rs. 11,300 (24 CT)
9108146123

ಪ್ಲಾಸ್ಟಿಕ್ ಬಳಕೆ ನಿಷೇಧಿಸಿ
ಪರಿಸರವನ್ನು ಕಾಪಾಡಿ

COMMERCIAL
BUILDING FOR SALE
@ Nanjumalige
30 x 35
Call: 94809 88340

Pragathi
Educational Institutions
SARAGUR
TEACHERS REQUIRED
(1) High School
Sub: Mathematics / Hindi
Qualifications: B.Sc (Maths) / Graduation with B.Ed
Salary: as per Experience.
Experience: 2 years
8147164815
Email: pragathi.edu.in@gmail.com

BUY WITH CONFIDENCE
MUDA-APPROVED PLOTS IN MYSURU
Ready to Register
Location: Bannur Road
Dimensions: 30x40 | 40x60 | 50x80
Bank Loan Available from Major Banks
Call Us At : 8310839079

14ನೇ ವರ್ಷದ ಪುಣ್ಯಸ್ಮರಣೆ



ಡಾ॥ ದೊಡ್ಡನಾರಣಪ್ಪ
"ಮಧುಮೇಹಿಗಳ ಆಪ್ತಮಿತ್ರ"
ನೀವು ನಮ್ಮನ್ನಗಲಿ ಇಂದಿಗೆ 14 ವರ್ಷಗಳು ಕಳೆದರೂ ನಿಮ್ಮ ಪ್ರೀತಿ ಆಶೀರ್ವಾದ ನಮಗೆ ದಾರಿದೀಪವಾಗಿದೆ
ಸದಾ ನಿಮ್ಮ ನೆನಪಿನಲ್ಲಿರುವ
ಪತ್ನಿ ಹಾಗೂ ಮಕ್ಕಳು

7ನೇ ವರ್ಷದ ಸವಿನೆನಪು



ಎಂ.ಪಿ. ಪ್ರಸನ್ನಕುಮಾರ್
ನೀವು ನಮ್ಮನ್ನಗಲಿ ಇಂದಿಗೆ 7 ವರ್ಷ ಕಳೆದರೂ ಸದಾ ನಿಮ್ಮನ್ನು ಸ್ಮರಿಸುತ್ತಾ ನಿಮ್ಮ ನೆನಪಿನಲ್ಲಿರುವ
ತಂದೆ, ತಾಯಿ, ತಮ್ಮಂದಿರು ಹಾಗೂ ಕುಟುಂಬವರ್ಗ

ಶ್ರೀ ಗೌರೀಶಂಕರ ಟ್ರಾವೆಲ್ಸ್
12–12–2025 (7 ದಿನ): ಅಯೋಧ್ಯೆ, ಕಾಶಿ, ದೆಹಲಿ, ಆಗ್ರಾ, ಮಥುರಾ, ಪ್ರಯಾಗ್‌ರಾಜ್, ಗಯಾ.
17–1–2026 (4 ದಿನ): ಭುವನೇಶ್ವರ್, ಪುರಿಜಗನ್ನಾಥ್, ಕೊನಾರ್ಕ್
7–2–2026 (4 ದಿನ): ಭೀಮಾಶಂಕರ, ಶಿರಡಿ, ತ್ರಯ್ಯಂಬಕೇಶ್ವರ, ಘೃಶ್ನೇಶ್ವರ್, ನಾಸಿಕ್.
(ವಿಮಾನ, AC ಬಸ್, ಊಟ, ರೂಂ)
Mob: 9448499538

SITE FOR SALE
40'x60'
in Prakruthi Badavane, TN Pura Road, Mysuru.
Rs. 3650/- per sq.ft.
Mob: 74833-11233

PROPERTIES FOR SALE
Ready for Registration
Prime Locations
43x93
East Facing Ashokapuram
Railway Station 100 Mtr
Near Bedarakanappa Temple.
30 Gunta
Siddaiahna Hundi
H D Kote Main Road
Residential Converted
9 GUNTAS
100 ft Road Prime Location
Kergalli Main Road
Residential Converted
(Brokers Excuse)
9008111454

100% NEEM PLYWOOD
@ FACTORY DEPOT RATES
NEEM BOND PLATINUM®
15 YEARS WARRANTY
©9901291267, 9845426862

ಧನ ಗಣಪತಿ ಫೈನಾನ್ಸ್
ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನವನ್ನು ನಾವೇ ಹಣಕೊಟ್ಟು ಬಿಡಿಸಿ, ಉಳಿದ ಹಣ ತಕ್ಷಣ ಕೊಡುತ್ತೇವೆ.
ಒಂದು ಗ್ರಾಂ ಚಿನ್ನಕ್ಕೆ 14000
8884864444

ಕೆಲಸಕ್ಕೆ ಬೇಕಾಗಿದ್ದಾರೆ
ಬೆಂಗಳೂರಿನಲ್ಲಿರುವ ಕಂಪನಿಗೆ ಕೆಲಸ ಮಾಡಲು 18ವರ್ಷ ಮೇಲ್ಪಟ್ಟ ಯುವಕರು ತಕ್ಷಣ ಬೇಕಾಗಿದ್ದಾರೆ
ಚಾಲಕರು (Goods) 18 ಸಾವಿರ
ಎಲೆಕ್ಟ್ರಿಷಿಯನ್ (18 ಸಾವಿರ)
ಕಾರ್ಪೆಂಟರ್ (18 ಸಾವಿರ)
ಸಹಾಯಕರು (15 ಸಾವಿರ)
3 ವರ್ಷ ಅನುಭವ ಸ್ಥಳ : ಬೆಂಗಳೂರು
ಆಸಕ್ತರು ತಕ್ಷಣ ಸಂಪರ್ಕಿಸಿ:
98450 26220

ಇಂಪೀರಿಯಲ್ ಸಿಟಿ
ಮೆಗಾ ರೆಸಿಡೆನ್ಸಿಯಲ್ ವಿಲ್ಲಾ ಟೌನ್‌ಶಿಪ್
ಮೈಸೂರು - ಹುಣಸೂರು ಮುಖ್ಯರಸ್ತೆ, ಮೈಸೂರು
MUDA LIMITS
ಇಲವಾಲ ಸ್ಯಾಟ್‌ಲೈಟ್ ಬಸ್ ನಿಲ್ದಾಣದಿಂದ ಕೇವಲ 4 ಕೀ.ಮೀ
ಬುಕಿಂಗ್ ಪ್ರಾರಂಭವಾಗಿದೆ
ಕೇವಲ ₹749/ ಪ್ರತಿ ಚದರ ಅಡಿ
ಸುಲಭ 4 ಕಂತುಗಳ ಸೌಲಭ್ಯವಿದೆ
30x40 | 30x50 | 40x60 | 50x80
ಅಳತೆಯ ಎಲ್ಲಾ ಸೌಲಭ್ಯಗಳನ್ನು ಒಳಗೊಳ್ಳುವ ನಿವೇಶನಗಳು
ಹೈಲ್ಯಾಂಡ್ ಪ್ರಾಪರ್ಟೀಸ್
ಕಾಳಿದಾಸ ರಸ್ತೆ, ವಿಜಯನಗರ 1ನೇ ಹಂತ, ಮೈಸೂರು
88840 71010
90713 86615

ಬೇಕಾಗಿದ್ದಾರೆ
ಮೈಸೂರಿನ ಖಾಸಗಿ ಕಂಪನಿಗೆ, Fortuner ಮತ್ತು Automatic ಕಾರು ಓಡಿಸುವ ಡ್ರೈವರ್‌ಗಳು ಬೇಕಾಗಿದ್ದಾರೆ.
ಸಂಬಳ: 25,000
ಮತ್ತು ಟೆಲಿಕಾಲಿಂಗ್ ಕಛೇರಿಯ ಕೆಲಸ ಮಾಡಲು ಹುಡುಗಿಯರು ಬೇಕಾಗಿದ್ದಾರೆ.
8548089469/9164946160

PUBLIC NOTICE

Our client Mysuru District Government Officers and Employees House Building Cooperative Society Pvt. having its registered office at No.66, HIG, Group-4, 2nd phase, 2nd Stage, KHB colony, Hootagalli, Mysuru has hereby instructed us caution the Public in General that our client had lodged Original Suit in Com. O.S. No. 70 of 2021 of that came to be decreed by a compromise entered into by JDA Projects, Represented By Partners Jesudas Rathnam and Divya M and failed to comply the terms of compromise which prompted our client to lodge Com.Ex.No.293 of 2023 where the Court has approved for executing the Deed of Sale with respect to entire suit schedule property of this Notice and suppressing this fact said JDA Projects, Represented By Partners Jesudas Rathnam and Divya M has by false representation have also entered compromise with another party in Hon'ble Supreme Court of India that has appointed Hon'ble Principal District Judge Mysuru as Receiver to monitor sale of property by said JDA Projects, Represented By Partners Jesudas Rathnam and Divya M.

Thus the only Registration of the schedule property came to stand still and hence our client is moving the Hon'ble Supreme Court to initiate contempt proceedings as well as annulment of such compromise fraudulently entered by said JDA Projects, Represented By Partners Jesudas Rathnam and Divya M before the Supreme Court.

Taking advantage of such position under the claim of compromise said JDA Projects, Represented By Partners Jesudas Rathnam and Divya M are causing sale of the sites carved out of schedule property, and it is evident that innocent and gullible Parties are purchasing such property after approval of Hon'ble Principal District Judge Mysuru which is approving the same under the directions from Hon'ble Supreme Court.

However, all these Deeds of sale in favour of such parties are liable to be cancelled once the Hon'ble Supreme Court is made known of collusive fraud committed by parties before the Supreme Court. In such an event our client will not be bound by sale of either in part or whole of Schedule Property. Therefore such gullible purchasers who are lured by JDA Projects, Represented By Partners Jesudas Rathnam and Divya M are cautioned not to be swayed by such impressions and may face consequences under law and suffer damages.

SCHEDULE

All that piece and parcel of the residential sites, located in Survey No. 83/2, comprising of 2 Acres and 03 Guntas, and the landed property, measuring 2 Acres and 37 Guntas, located in Survey No. 84/2, totally measuring 5 acres, and, situated at Lingambudi Village, Kasaba Mysuru, District Mysuru, that is bounded on :- East By: Road, West By: Property bearing Survey No.82, North By: Property bearing Survey No.87, South By: Property bearing Survey Nos.83/1 and 84/1.

For Deshak Law Associates
Adv. Shri. Sweekar Gowda E. K.
No: 94/1, III Floor, S.B.I. Administrative Building, Institute of Education Trust Premises,
Sahukar Chennaiah Road
Saraswathipuram, Mysuru-570 009
Cell No: 9945001234, 7892608317
E-Mail: deshakadvocates@gmail.com

G9 projects ನವೆಂಬರ್ ಹಬ್ಬ V eo2 Developers
ಪೂರ್ವ ಶೆಲ್ಟರ್ಸ್
20×30 | 30×40 20×40 | 30×50
30 - 11 - 2025 ಆಫರ್ ಕೊನೆಗೊಳ್ಳುತ್ತದೆ
8088-707-707

mysoerae
KALENI SILK INDUSTRY
ಅಪ್ಪಟ ಚಿನ್ನದ ಜರಿಯ ಸೀರೆಗಳು
FACTORY SALE
100% PURE SILK / GOLD ZARI SAREES
UP TO 30% DISCOUNT
Woven on traditional looms exclusively with pure silk from the historic region of Mysore.
KALENI SILK INDUSTRY
263, Hebbal Industrial Area, Opp. to Annapurna Aahar Hotel, Mysore-570018
9019949145 / 9845817295 / 9019348989

ತಾಲ್ಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಕಾರ್ಯಾಲಯ
ತಾಲ್ಲೂಕು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಹೆಚ್.ಡಿ.ಕೋಟೆ
ವಿಶ್ವನಾಥ ಕಾಲೋನಿ, ಹೆಚ್.ಡಿ.ಕೋಟೆ ತಾಲ್ಲೂಕು–571114
Email: tbcwohdkote@gmail.com Mob: 08228-297156
ಸಂ.ಹಿಂವಕಇ/ಬಾವಾ/ಸಿಆರ್–01/2025–26 ದಿನಾಂಕ: 18.11.2025

ಅಲ್ಪಾವಧಿ ಟೆಂಡರ್

ತಾಲ್ಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಕಛೇರಿ, ಹೆಚ್.ಡಿ. ಕೋಟೆ ಇಲ್ಲಿನ ಸರ್ಕಾರಿ ಅಧಿಕೃತ ಕೆಲಸ ಕಾರ್ಯಗಳಿಗೆ 2025 ನೇ ಡಿಸೆಂಬರ್ ಮಾಹೆಯಿಂದ ಅನ್ವಯಿಸುವಂತೆ ಮಾಸಿಕ ರೂ.35000/– ಗಳ (ಜಿ.ಎಸ್.ಟಿ. ಒಳಗೊಂಡಂತೆ) ಮಿತಿಗೆ ಒಳಪಟ್ಟು ಬಾಡಿಗೆ ಆಧಾರದ ಮೇಲೆ ಸ್ವಿಫ್ಟ್ ಡಿಸೈರ್, ಟಯೋಟಾ ಇಟಿಎಸ್, ಸಿಯಾಜ್ ಮಾದರಿಯ ವಾಹನವನ್ನು ಸರಬರಾಜು ಮಾಡಲು ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದ್ದು ಆಸಕ್ತಿಯುಳ್ಳ ಅರ್ಹ ಟ್ರಾವೆಲ್ ಏಜೆನ್ಸಿ/ಸಂಸ್ಥೆಯವರು ಈ ಕಛೇರಿಯಿಂದ ಅರ್ಜಿಗಳನ್ನು ಪಡೆದು ದಿ: 24.11.2025 ರಿಂದ 29.11.2025 ರ ಸಂಜೆ 03.00 ಗಂಟೆಯೊಳಗೆ ಸಲ್ಲಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಕಛೇರಿಯನ್ನು ಸಂಪರ್ಕಿಸಲು ಕೋರಿದೆ.

ಸಹಿ/– ತಾಲ್ಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು
DIPR/DDMYS/1252/KSMCA/697/2025-26



ಮೈಸೂರು : ವುಡ್‌ಲ್ಯಾಂಡ್ಸ್, DRC, PVR·INOX GARUDA|FORUM SATYAM|CENTRO, VISION CINEMAS
ಮಂಡ್ಯ : ಮಹಾವೀರ್
ಹಾಸನ : ಎಸ್.ಬಿ.ಜಿ
ಕೊಳ್ಳೇಗಾಲ : ಶಾಂತಿ
ಚಾಮರಾಜನಗರ: ಬಸವೇಶ್ವರ
ಕೆ.ಎಂ.ದೊಡ್ಡಿ : ಮಾರುತಿ
ಮದ್ದೂರು : ಸಂಜಯ
ಹೊಳೆನರಸೀಪುರ: ಚೆನ್ನಾಂಬಿಕಾ
ಚನ್ನರಾಯಪಟ್ಟಣ: ಗಾಯತ್ರಿ
ಬೆಳ್ಳೂರುಕ್ರಾಸ್: ಮಾರುತಿ
ಮಳವಳ್ಳಿ : ಮಹಾಲಕ್ಷ್ಮೀ
ಟಿ.ನರಸೀಪುರ : ವಿಜಯಭಗವಾನ್
ಬನ್ನೂರು : ಸೋಮೇಶ್ವರ
ಪಾಂಡವಪುರ : ಕೋಕಿಲ
ಕೆ.ಆರ್.ಪೇಟೆ : ಬಸವೇಶ್ವರ
ಪಿರಿಯಾಪಟ್ಟಣ: ಮಹದೇಶ್ವರ
ಕೆ.ಆರ್.ನಗರ : ಗೌರಿಶಂಕರ
ನಂಜನಗೂಡು : ಭಾರ್ಗವಿ
ಗುಂಡ್ಲುಪೇಟೆ : ಸೂರ್ಯ
ಹಲಗೂರು : ರವಿ
ಯಳಂದೂರು : ಮಹದೇಶ್ವರ
ನಾಗಮಂಗಲ : ವೆಂಕಟೇಶ್ವರ
ಅರಸೀಕೆರೆ : ರತ್ನ
ಸಾಲಿಗ್ರಾಮ : ಪದ್ಮಾಂಬ
ಬಾಬುರಾಯನಕೊಪ್ಪಲು: ಭಾರತಿ
ಬೆಳಕವಾಡಿ : ಬೀರೇಶ್ವರ
ಹುಲ್ಲಹಳ್ಳಿ : ಯಜಮಾನ
ಸಾತನೂರು : ವೆಂಕಟೇಶ್ವರ
ಬೇಲೂರು : ರೇಣುಕಾ

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ


ಎಕ್ಸ್‌ಟ್ರಾ ಇನ್ನಿಂಗ್ಸ್

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | 46 | ನವೆಂಬರ್ 21 ಶುಕ್ರವಾರ 2025

ಪುಟಗಳು: IV

ಉದಯಗಿರಿ ಪೊಲೀಸ್ ಠಾಣೆ ಉತ್ತರ–ದಕ್ಷಿಣವೆಂದು ವಿಭಜನೆ

ರಾಜೀವ್‌ನಗರ 2ನೇ ಹಂತದಲ್ಲಿ ಶೀಘ್ರ ಹೊಸ 'ಉತ್ತರ ಠಾಣೆ' ಕಾರ್ಯಾರಂಭ



ಮೈಸೂರು,ನ.20(ಆರ್‌ಕೆ)– ಕಾರ್ಯ ವ್ಯಾಪ್ತಿ ಮತ್ತು ಜನಸಂಖ್ಯೆಗನುಗುಣವಾಗಿ ಮೈಸೂರಿನ ಉದಯಗಿರಿ ಪೊಲೀಸ್ ಠಾಣೆ ವಿಭಜಿಸಿ ಮತ್ತೊಂದು ಪೊಲೀಸ್ ಠಾಣೆ ಮಂಜೂರು ಮಾಡಲಾಗಿದೆ.

ಈ ಕುರಿತು ನ.18ರಂದು ಅಧಿಸೂಚನೆ ಹೊರಡಿಸಿರುವ ಒಳಾಡಳಿತ ಇಲಾಖೆ (ಪೊಲೀಸ್ ವೆಚ್ಚ) ಸರ್ಕಾರದ ಅಧೀನ ಕಾರ್ಯದರ್ಶಿ ಕೆ.ಎನ್. ವನಜ ಅವರು ಪ್ರಸ್ತುತ ಇರುವ ಉದಯಗಿರಿ ಪೊಲೀಸ್ ಠಾಣೆಯನ್ನು ವಿಭಜಿಸಿ 'ಉದಯಗಿರಿ ಉತ್ತರ ಮತ್ತು ಉದಯಗಿರಿ ದಕ್ಷಿಣ' ಠಾಣೆ ಸೃಜಿಸಿದ್ದಾರೆ. ಅದರಂತೆ ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಉದಯಗಿರಿ ಠಾಣೆಯನ್ನು 'ದಕ್ಷಿಣ' ಎಂದು ಪರಿಗಣಿಸಿದ್ದು, ಹೊಸದಾಗಿ ಸೃಷ್ಟಿಸುವ ಠಾಣೆಗೆ 'ಉದಯಗಿರಿ ಉತ್ತರ' ಎಂದು ನಾಮಕರಣ ಮಾಡಲಾಗಿದೆ.

ಸರ್ಕಾರದ ಆದೇಶದ ಪ್ರಕಾರ ಎರಡೂ ಠಾಣೆಗಳಿಗೆ ಕ್ರಮವಾಗಿ ಓರ್ವ ಪೊಲೀಸ್ ಇನ್ಸ್‌ಪೆಕ್ಟರ್, ನಾಲ್ವರು ಸಬ್‌ಇನ್ಸ್‌ಪೆಕ್ಟರ್‌ಗಳು, 8 ಮಂದಿ ಸಹಾಯಕ ಸಬ್‌ಇನ್ಸ್‌ಪೆಕ್ಟರ್‌ಗಳು, 24 ಹೆಡ್ ಕಾನ್ಸ್‌ಟೇಬಲ್‌ಗಳು, 48 ಪೊಲೀಸ್ ಕಾನ್ಸ್‌ಟೇಬಲ್‌ಗಳು ಹಾಗೂ ಉತ್ತರ ಠಾಣೆಗೆ ಹೆಚ್ಚುವರಿಯಾಗಿ ಇಬ್ಬರು ಸಶಸ್ತ್ರ ಪೊಲೀಸ್ ಕಾನ್ಸ್‌ಟೇಬಲ್‌ಗಳನ್ನು ನಿಯೋಜಿಸುವಂತೆ ಹುದ್ದೆ ಮಂಜೂರು ಮಾಡಲಾಗಿದೆ.

ಹೊಸದಾಗಿ ಸೃಜಿಸಿರುವ ಉದಯಗಿರಿ ಉತ್ತರ ಠಾಣೆಗೆ ಎನ್.ಆರ್. ಕ್ಷೇತ್ರದ ಶಾಸಕ ತನ್ವೀರ್ ಸೇಠ್ ಅವರು ರಾಜೀವ್‌ನಗರ 2ನೇ ಹಂತದ ಗುಪ್ತ ಸ್ಟೋರ್ ಸಮೀಪ ಖಾಸಗಿ ಕಟ್ಟಡವನ್ನು ಗುರುತಿಸಿದ್ದಾರೆ. ತಕ್ಷಣಕ್ಕೆ ಅದನ್ನು ಬಾಡಿಗೆಗೆ ಪಡೆದು ಅಲ್ಲಿ ಹೊಸ ಠಾಣೆಯನ್ನು ಆರಂಭಿಸಲಾಗುವುದು. ಉದಯಗಿರಿ ಹೆಚ್ಚುವರಿ ಠಾಣೆ ಅಗತ್ಯವಿದೆ ಎಂದು ಈ ಹಿಂದೆ ತನ್ವೀರ್ ಸೇಠ್ ಅವರು ಸರ್ಕಾರಕ್ಕೆ ಮನವಿ ಸಲ್ಲಿಸಿದ್ದನ್ನು ಇಲ್ಲಿ ಸ್ಮರಿಸಬಹುದು.

ರೈಲು ನಿಲ್ದಾಣದ ಬಳಿ ಬಸ್ ನಿಲುಗಡೆ ಸ್ಥಳದಲ್ಲಿ ಆಟೋಗಳದ್ದೇ ದರ್ಬಾರ್

- ಮೂಕ ಪ್ರೇಕ್ಷಕರಂತಿರುವ ಸಂಚಾರ ಪೊಲೀಸರು; ಪ್ರಯಾಣಿಕರ ಪರದಾಟ
- ದೇವರಾಜ ಠಾಣೆ ಎದುರಿನ ಫುಟ್‌ಪಾತ್‌ಗಳಲ್ಲಿ ಪೊಲೀಸರಿಂದ ಜಪ್ತಿಯಾದ ವಾಹನಗಳ ನಿಲುಗಡೆ; ಪಾದಚಾರಿಗಳಿಗೆ ನಿತ್ಯ ಕಿರಿಕಿರಿ

ಮೈಸೂರು,ನ.20(ಆರ್‌ಕೆ)–ಸಾರ್ವಜನಿಕರು ಹಾಗೂ ಪಾದಚಾರಿಗಳಿಗೆ ಅನುಕೂಲ ಕಲ್ಪಿಸಬೇಕಾದ ಜವಾಬ್ದಾರಿ ಹೊತ್ತ ಪೊಲೀಸರು ಹಾಗೂ ಸ್ಥಳೀಯ ಸಂಸ್ಥೆ ಅಧಿಕಾರಿಗಳೇ ಕೆಲವೊಮ್ಮೆ ಕೆಲವೊಂದು ಸಮಸ್ಯೆಗೆ ಕಾರಣರಾಗುತ್ತಾರೆಂಬುದಕ್ಕೆ ಹಲವು ನಿದರ್ಶನಗಳು ನಮ್ಮ ಕಣ್ಮುಂದೆ ಇವೆ.

ಮೈಸೂರಿನ ಹೃದಯ ಭಾಗದ ರೈಲು ನಿಲ್ದಾಣದ ಬಳಿ ಬಾಬು ಜಗಜೀವನ್ ರಾಮ್ ಸರ್ಕಲ್‌ಗೆ ಹೊಂದಿಕೊಂಡಂತಿರುವ ಜೆ.ಕೆ. ಗ್ರೌಂಡ್ ಎದುರಿನ ಇರ್ವಿನ್ ರಸ್ತೆಯ ಇಕ್ಕೆಲಗಳ ನಗರ ಸಾರಿಗೆ ಬಸ್ ನಿಲುಗಡೆ ಸ್ಥಳಗಳಲ್ಲಿ ಆಟೋರಿಕ್ಷಾಗಳ ಕಾರುಬಾರು ಹೆಚ್ಚಾಗಿದ್ದು, ಇಲ್ಲಿ ಬಸ್ ನಿಲುಗಡೆಯಾದರೂ ಪ್ರಯಾಣಿಕರು ಹತ್ತುವುದು–ಇಳಿಯುವುದಕ್ಕೆ ಹರಸಾಹಸ ಪಡಬೇಕಿದೆ.

ಬಸ್ ನಿಲುಗಡೆ ಸ್ಥಳದಲ್ಲಿ ಆಟೋಗಳು ನಿಲ್ಲುವುದರಿಂದ ದಾಸಪ್ಪ ಸರ್ಕಲ್ ಕಡೆಯಿಂದ ಬರುವ ನಗರ ಸಾರಿಗೆ ಬಸ್‌ಗಳು ನಿಲುಗಡೆಗೆ ಸ್ಥಳವಿಲ್ಲದೇ ನಡು ರಸ್ತೆಯಲ್ಲಿ ನಿಲ್ಲುವಂತಾಗಿದೆ. ಆದ್ದರಿಂದ ಕೆ.ಆರ್. ಆಸ್ಪತ್ರೆ ಕಡೆಯಿಂದ ಮತ್ತು ಜಗಜೀವನ ರಾಮ್ ಸರ್ಕಲ್ ಕಡೆಯಿಂದ ಬರುವ ವಾಹನಗಳ ಸಂಚಾರಕ್ಕೆ ತೀವ್ರ ಅಡಚಣೆ ಉಂಟಾಗುತ್ತಿದೆಯಲ್ಲದೇ ಬಸ್ ಪ್ರಯಾಣಿಕರಿಗೂ ತೊಂದರೆಯಾಗುತ್ತಿದೆ.

ಸರ್ಕಲ್‌ನಲ್ಲಿ ಸದಾ ಸಂಚಾರ ಪೊಲೀಸರು ಕರ್ತವ್ಯದಲ್ಲಿದ್ದರೂ ಈ ಸಮಸ್ಯೆ ಅವರ ಕಣ್ಣಿಗೆ ಬಿದ್ದಿಲ್ಲ. ಇಲ್ಲವೇ ನಮಗೆ ಸಂಬಂಧಿಸಿದ್ದಲ್ಲ ಎಂಬಂತೆ ವರ್ತಿಸುತ್ತಾ ಬಂದಿದ್ದಾರೆ. ಹಾಗಾಗಿ ಆಟೋ ಚಾಲಕರು ಇದನ್ನು ಪರಿಪಾಠ ಮಾಡಿಕೊಳ್ಳಲು ಕಾರಣ



> “ರೈಲು ನಿಲ್ದಾಣ ಸರ್ಕಲ್ ಬಳಿ ನಗರ ಸಾರಿಗೆ ಬಸ್ ನಿಲುಗಡೆ ಸ್ಥಳದಲ್ಲಿ ಆಟೋಗಳು ನಿಲ್ಲುತ್ತಿರುವುದು ನಮ್ಮ ಗಮನಕ್ಕೂ ಬಂದಿದೆ. ಅಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಂಚಾರ ಪೊಲೀಸರು, ಅವುಗಳನ್ನು ತೆರವುಗೊಳಿಸಿದರೂ, ಪದೇ ಪದೇ ನಿಲ್ಲಿಸುವ ಪ್ರವೃತ್ತಿ ಬೆಳೆಸಿಕೊಂಡಿದ್ದಾರೆ. ಹೀಗೆ ನಿಲ್ಲುತ್ತಿರುವ ವಾಹನಗಳನ್ನು ಠಾಣೆಗೆ ತಂದು ದಂಡ ವಿಧಿಸಲಾಗುತ್ತಿದೆ. ಹಂತ–ಹಂತವಾಗಿ ಈ ಸಮಸ್ಯೆಯನ್ನು ನಿವಾರಿಸುತ್ತೇವೆ.
>
> **–ರೇಖಾಬಾಯಿ, ಇನ್ಸ್‌ಪೆಕ್ಟರ್, ನರಸಿಂಹರಾಜ ಸಂಚಾರ ಠಾಣೆ**

> “ನಮ್ಮ ಠಾಣೆ ಎದುರು ಕೃಷ್ಣ ವಿಲಾಸ ರಸ್ತೆಯ ಎರಡು ಬದಿಗಳಲ್ಲಿ ಜಪ್ತಿಯಾದ ವಾಹನಗಳನ್ನು ನಿಲ್ಲಿಸುತ್ತಿರುವುದು ಸರಿಯಷ್ಟೆ, ದೇವರಾಜ ಕಾನೂನು ಸುವ್ಯವಸ್ಥೆ ಠಾಣೆಯಿಂದ ವಶಪಡಿಸಿಕೊಂಡ ಬಹುತೇಕ ವಾಹನಗಳನ್ನು ಸ್ಥಳದ ಅಭಾವದಿಂದಾಗಿ ರಸ್ತೆ ಬದಿ ನಿಲ್ಲಿಸುವುದು ಅನಿವಾರ್ಯವಾಗಿದೆ. ಸಾರ್ವಜನಿಕರ ಹಿತದೃಷ್ಟಿಯಿಂದ ಎರಡು ಠಾಣೆಗಳ ಪೊಲೀಸರಿಂದ ಪರ್ಯಾಯ ವ್ಯವಸ್ಥೆಗೆ ಪ್ರಯತ್ನಿಸಲಾಗುತ್ತಿದೆ. **–ಮಮತಾ, ದೇವರಾಜ ಸಂಚಾರ ಠಾಣೆ, ಇನ್ಸ್‌ಪೆಕ್ಟರ್**

ವಾಗಿದೆ. ರೈಲಿನಲ್ಲಿ ಬರುವ ಪ್ರಯಾಣಿಕರು, ರೈಲು ನಿಲ್ದಾಣಕ್ಕೆ ಬರುವವರು ನಗರ ಸಾರಿಗೆ ಬಸ್ ಹತ್ತಲು, ಇಳಿಯಲು ತೀವ್ರ ತೊಂದರೆಯಾಗುತ್ತಿದೆ.

ಫುಟ್‌ಪಾತ್ ಆಕ್ರಮಣ: ಮತ್ತೊಂದೆಡೆ ದೇವರಾಜ ಮೊಹಲ್ಲಾದ ನಿರ್ಮಾಣ ಹಂತದ ಡಾ.ಬಿ.ಆರ್.ಅಂಬೇಡ್ಕರ್ ಭವನದ ಪಕ್ಕದಲ್ಲಿರುವ ದೇವರಾಜ ಪೊಲೀಸ್ ಠಾಣೆ ಮತ್ತು ದೇವರಾಜ ಸಂಚಾರ ಠಾಣೆ ಪೊಲೀಸರ ವಾಹನಗಳನ್ನು ಠಾಣೆಯೆದುರು ಕೃಷ್ಣ ವಿಲಾಸ ರಸ್ತೆಯ ಎರಡು ಬದಿಯ ಫುಟ್‌ಪಾತ್‌ಗಳ ಮೇಲೆ ನಿಲ್ಲಿಸುತ್ತಿರುವುದರಿಂದ ಪಾದಚಾರಿಗಳು ಓಡಾಡಲು ಸಮಸ್ಯೆಯಾಗುತ್ತಿದೆ ಎಂದು ಸಾರ್ವಜನಿಕರು ದೂರಿದ್ದಾರೆ.

ಸಂಚಾರ ನಿಯಮ ಉಲ್ಲಂಘನೆ ಹಾಗೂ ವಿವಿಧ ಅಪರಾಧ ಪ್ರಕರಣಗಳಲ್ಲಿ ವಶಪಡಿಸಿಕೊಂಡ ವಾಹನಗಳನ್ನು ನಿಲ್ಲಿಸಲು ಠಾಣಾ ಆವರಣದಲ್ಲಿ ಜಾಗದ ಕೊರತೆ ಇರುವುದರಿಂದ ಪೊಲೀಸರು ಅಂತಹ ವಾಹನಗಳನ್ನು ರಸ್ತೆಯ ಇಕ್ಕೆಲ ಫುಟ್‌ಪಾತ್ ಮೇಲೆ ನಿಲ್ಲಿಸಬೇಕಾಗಿದೆ. ಇದರಿಂದಾಗಿ ಪಾದಚಾರಿಗಳು, ಶಾಲಾ–ಕಾಲೇಜು ವಿದ್ಯಾರ್ಥಿಗಳು ಅನಿವಾರ್ಯವಾಗಿ ರಸ್ತೆಗಿಳಿಯಬೇಕಾಗಿದೆ. ಹಾಗಾಗಿ ಆಗಿಂದಾಗ್ಗೆ ಅಪಘಾತಗಳು ಸಂಭವಿಸುತ್ತಿವೆ ಎಂದು ನಾಗರಿಕರು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

ಮೈಸೂರಿನ ಸಯ್ಯಾಜಿರಾವ್ ರಸ್ತೆ, ಅಶೋಕ ರಸ್ತೆ, ಇರ್ವಿನ್ ರಸ್ತೆ, ಬಿ.ಎನ್. ರಸ್ತೆ, ರಮಾ ವಿಲಾಸ ರಸ್ತೆ, ರಾಮಾನುಜ ರಸ್ತೆ, ಡಿ. ದೇವರಾಜ ಅರಸು ರಸ್ತೆ, ಧನ್ವಂತರಿ ರಸ್ತೆ, ಶಿವರಾಮ್ ಪೇಟೆ ರಸ್ತೆ ಸೇರಿದಂತೆ ವಿವಿಧ ರಸ್ತೆಗಳಲ್ಲೂ ಪಾದಚಾರಿ ರಸ್ತೆ ಒತ್ತುವರಿಯಾಗಿರುವುದರಿಂದ ಸಾರ್ವಜನಿಕರು ರಸ್ತೆಗಿಳಿಯಬೇಕಾದ ಅನಿವಾರ್ಯತೆ ಇದೆ. ಮೈಸೂರು ಮಹಾನಗರ ಪಾಲಿಕೆ ಅಧಿಕಾರಿಗಳು ಪೊಲೀಸರ ನೆರವು ಪಡೆದು ಫುಟ್‌ಪಾತ್ ತೆರವುಗೊಳಿಸಿದಲ್ಲಿ ಸಾರ್ವಜನಿಕರಿಗೆ ಓಡಾಡಲು ಅನುಕೂಲವಾಗುತ್ತದೆ ಎಂಬ ಅಭಿಪ್ರಾಯ ವ್ಯಕ್ತವಾಗಿದೆ.

ಎರಡೂವರೆ ವರ್ಷ ಜನರಿಗೆ ನೀಡಿದಂತಹ ಭರವಸೆಗಳ ಆದ್ಯತೆ ಮೇಲೆ ಈಡೇರಿಸಿದ್ದೇವೆ

ಗೃಹ ಸಚಿವ ಡಾ.ಜಿ.ಪರಮೇಶ್ವರ್ ಸಮರ್ಥನೆ



ಬೆಂಗಳೂರು,ನ.20(ಕೆಎಂಶಿ)–ರಾಜ್ಯ ಕಾಂಗ್ರೆಸ್ ಸರ್ಕಾರ ಎರಡೂವರೆ ವರ್ಷದ ಆಡಳಿತಾವಧಿಯಲ್ಲಿ ಜನಸಮುದಾಯಕ್ಕೆ ನೀಡಿದ್ದ ಭರವಸೆಗಳನ್ನು ಆದ್ಯತೆ ಮೇಲೆ ಈಡೇರಿಸಿದ್ದೇವೆ ಎಂಬ ಸಮಾಧಾನವಿದೆ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಂದಿನ ದಿನಗಳಲ್ಲಿ ಹಣಕಾಸಿನ ವಿಚಾರದಲ್ಲಿ ಅನವಶ್ಯಕ ಖರ್ಚುಗಳನ್ನು ಸರಿಪಡಿಸುವ ಪ್ರಯತ್ನ ಮಾಡಬೇಕಿದೆ ಎಂದರು.


ಕೇಂದ್ರ ಸರ್ಕಾರ ರಾಜ್ಯಕ್ಕೆ ಕೊಡಬೇಕಾದ ಜಿಎಸ್‌ಟಿ ಪಾಲಿನಲ್ಲಿ ಕಡಿಮೆ ಪಾವತಿಸಿದೆ. ಕೇಂದ್ರ ಸಹಯೋಗದ ಯೋಜನೆಗಳಲ್ಲಿ ಸೂಕ್ತ ಸಮಯದಲ್ಲಿ ಅನುದಾನ ಬಿಡುಗಡೆ ಮಾಡುತ್ತಿಲ್ಲ. ಜಲ ಜೀವನ್ ಮಿಷನ್ ಯೋಜನೆಯಡಿ ಸಾಕಷ್ಟು ಅನುದಾನ ಬಾಕಿ ಇದೆ.

ದೇಶದ ಮನೆ ಮನೆಗೆ ಗಂಗೆ ಎನ್ನುತ್ತಾರೆ. ಆದರೆ, ಯೋಜನೆ ಹಣ ರಾಜ್ಯ ಸರ್ಕಾರವೇ ಭರಿಸುತ್ತಿದೆ. ಹಣಕಾಸು ಖಾತೆ ಹೊಂದಿರುವ ಮುಖ್ಯಮಂತ್ರಿ 17ನೇ ಬಾರಿ ಬಜೆಟ್ ಮಂಡಿಸಲಿದ್ದಾರೆ ಎಂದರು.

ಸಂಪುಟ ಪುನರ್ ರಚನೆ ಹಾಗೂ ಬೇರೆ ಬೇರೆ ವಿಚಾರಗಳ ಕುರಿತ ತೀರ್ಮಾನ ಪಕ್ಷದ ಹೈಕಮಾಂಡ್ ಮಾಡಬೇಕು. ಸಿದ್ದರಾಮಯ್ಯ ಆಡಳಿತಕ್ಕೆ ಎರಡೂವರೆ ವರ್ಷ ಆಗಿರುವುದು ಗೊತ್ತಿದೆ. ಇದಕ್ಕೆ ಮಹತ್ವ ಕೊಡುವ ಅಗತ್ಯ ಇಲ್ಲ. ನಾಯಕತ್ವ ಬದಲಾವಣೆ ಬಗ್ಗೆ ಯಾರು, ಏನೂ ಹೇಳಿಲ್ಲ. ನಾವು ನಾವೇ ಏನೇನೋ ಹೇಳಿಕೊಂಡು ಹೋದರೆ ಮಹತ್ವ ಇರುವುದಿಲ್ಲ. ಹೈಕಮಾಂಡ್ ಸ್ಪಷ್ಟವಾಗಿ ಹೇಳಿದಾಗ ಮಹತ್ವ ಬರುತ್ತದೆ. ಅವರೂ ಎಲ್ಲೂ ಏನೂ ಹೇಳಿಲ್ಲ. ಹೈಕಮಾಂಡ್ ಹೇಳಿದರೆ ಕೇಳುತ್ತೇವೆ. ಹೇಳದಿರುವ ಕಾರಣಕ್ಕೆ ಮಹತ್ವ ಕೊಡುವ ಅಗತ್ಯವಿಲ್ಲ. ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯಲ್ಲೂ ಚರ್ಚೆಯಾಗಿಲ್ಲ ಎಂದರು. ಧರ್ಮಸ್ಥಳ ಪ್ರಕರಣದ ಕುರಿತು ಎಸ್‌ಐಟಿಗೆ ಸ್ಪಷ್ಟವಾಗಿ ಹೇಳಿದ್ದೇವೆ. ವರದಿ ನೀಡುವುದು ಅವರಿಗೆ ಬಿಟ್ಟ ವಿಚಾರ. ಸರ್ಕಾರಕ್ಕೆ ವರದಿ ಕೊಡಲೇಬೇಕಾಗುತ್ತದೆ. ವಾಸ್ತವಾಂಶ ಏನಿದೆ ಎಂಬ ಮಾಹಿತಿ ಸದನಕ್ಕೆ ನೀಡಲೇಬೇಕಿದೆ ಎಂದರು.

ಮೆಕ್ಕೆಜೋಳ, ಸೋಯಾಬಿನ್, ಹೆಸರು, ಈರುಳ್ಳಿ ಹಾನಿಗೆ ಪರಿಹಾರ ಕಲ್ಪಿಸಿ

ಸರ್ಕಾರಕ್ಕೆ ಮಾಜಿ ಸಿಎಂ ಬಸವರಾಜ್ ಬೊಮ್ಮಾಯಿ ಆಗ್ರಹ




ಬೆಂಗಳೂರು,ನ.20(ಕೆಎಂಶಿ)–ಕಳೆದ ಎರಡು ವರ್ಷಗಳಿಂದ ಅತಿವೃಷ್ಟಿಯಿಂದ ಮೆಕ್ಕೆಜೋಳ, ಸೋಯಾಬಿನ್, ಹೆಸರು, ಈರುಳ್ಳಿ ಬೆಳೆ ನಷ್ಟ ಅನುಭವಿಸಿರುವ ಎಲ್ಲ ರೈತರಿಗೆ ಪರಿಹಾರ ನೀಡಬೇಕು ಎಂದು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ರಾಜ್ಯ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಈ ಕುರಿತು ಸಿಎಂ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿರುವ ಅವರು, ಕಳೆದ 2 ವರ್ಷ ವಿಪರೀತ ಮಳೆಯಿಂದಾಗಿ ಬಹುತೇಕ ಬೆಳೆ ನಾಶವಾಗಿವೆ. ನಷ್ಟವಾದ ಬೆಳೆಗೆ ಪರಿಹಾರ ಸಿಕ್ಕಿಲ್ಲ. ರಾಜ್ಯ ಸರ್ಕಾರ ಪ್ರಧಾನಿ ಮೋದಿ ಅವರಿಗೆ ಮನವಿ ಸಲ್ಲಿಸಿರುವುದನ್ನು ಗಮನಿಸಿದ್ದೇವೆ. ಆದರೆ, ವಾಸ್ತವಾಂಶ ಬೇರೆಯೇ ಇದ್ದು ತಮ್ಮ ಗಮನಕ್ಕೆ ತರಲು ಬಯಸುತ್ತೇನೆ ಎಂದಿದ್ದಾರೆ.

ಬೆಳೆ ನಷ್ಟ ಪರಿಹಾರ ಸಮೀಕ್ಷೆ ಸಮರ್ಪಕ ಹಾಗೂ ನ್ಯಾಯಸಮ್ಮತವಾಗಿ ನಡೆದಿಲ್ಲ. ಕೃಷಿ, ಕಂದಾಯ ಮತ್ತು ಸಾಂಖಿಕ ಇಲಾಖೆ ಅಧಿಕಾರಿಗಳು ರೈತರ ಜಮೀನಿನಲ್ಲಿ ಪರೀಕ್ಷೆ ನಡೆಸದೇ ಸರ್ಕಾರಕ್ಕೆ ವರದಿ ಸಲ್ಲಿಸಿದ್ದಾರೆ. ಪರಿಣಾಮ ಹಲವು ತಾಲೂಕುಗಳಲ್ಲಿ ಒಟ್ಟು ಬಿತ್ತನೆ ಪ್ರದೇಶದ ಶೇ.10ರಷ್ಟು ಬೆಳೆ ನಾಶ ಆಗಿಲ್ಲ ಎಂಬ ವರದಿ ಇದ್ದು, ಇದು ಸತ್ಯಕ್ಕೆ ದೂರವಾದುದು, ಕೆಲವು ತಾಲೂಕುಗಳಲ್ಲಿ ಬೆಳೆ ನಷ್ಟವೇ ಆಗಿಲ್ಲ ಎಂಬುದೂ ಸತ್ಯಕ್ಕೆ ದೂರವಾದ ವಿಷಯ. ಉದಾಹರಣೆಗೆ ಗದಗ ಜಿಲ್ಲೆ ಮುಂಡರಗಿ ತಾಲೂಕಿನಲ್ಲಿ ಸಾಕಷ್ಟು ಬೆಳೆ ನಷ್ಟ ಆಗಿದ್ದರೂ ನಷ್ಟವಾಗಿಲ್ಲ ಎಂಬ ವರದಿ ನೀಡಿದ್ದಾರೆ. ರಾಜ್ಯಾದ್ಯಂತ ಇದನ್ನು ಕೂಡಲೇ ಸರಿಪಡಿಸಬೇಕು. ನಷ್ಟಕ್ಕೆ ಒಳಗಾದ ಎಲ್ಲ ರೈತರಿಗೆ ಬೆಳೆ ಪರಿಹಾರ ಕೊಡಬೇಕು ಎಂದಿದ್ದಾರೆ. ಮೆಕ್ಕೆ ಜೋಳ ಸುಮಾರು 17 ಲಕ್ಷ ಹೆಕ್ಟೇರ್‌ನಲ್ಲಿ ಬೆಳೆದಿದ್ದು ಕಳೆದ ವರ್ಷದಷ್ಟೇ ಈ ವರ್ಷವೂ 54 ಲಕ್ಷ ಮೆಟ್ರಿಕ್ ಟನ್ ಉತ್ಪನ್ನ ನಿರೀಕ್ಷಿಸಲಾಗಿದೆ. ಮೆಕ್ಕೆ ಜೋಳ ಬೆಲೆ ಪ್ರತಿ ಕ್ವಿಂಟಾಲ್‌ಗೆ 1,600 ರೂ.ಗೆ ಇಳಿದಿರುವುದು ಆಘಾತ ತಂದಿದೆ. ಕೇಂದ್ರ ಸರ್ಕಾರ ಈಗಾಗಲೇ ಎಂಎಸ್‌ಪಿ 2,400 ರೂ. ಘೋಷಿಸಿದೆ. ಇದರ ಜೊತೆಗೆ ರಾಜ್ಯ ಸರ್ಕಾರ ಪ್ರತಿ ಕ್ವಿಂಟಾಲ್‌ಗೆ ಕನಿಷ್ಠ 500 ರೂ. ಸೇರಿಸಿ ಕೊಡಬೇಕು ಎಂದು ರೈತರು ಒತ್ತಾಯಿಸುತ್ತಿದ್ದಾರೆ.

ಕೇಂದ್ರ ಸರ್ಕಾರದ ನಿರ್ದೇಶನಕ್ಕೆ ಕಾಯದೇ ಮೆಕ್ಕೆಜೋಳ ಖರೀದಿಸಿ, ಸೂಕ್ತ ಮಾರುಕಟ್ಟೆ ದರ ಹೆಚ್ಚಾದಾಗ ಮಾರಬಹುದಾಗಿದೆ. ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಕ್ರಮ ವಹಿಸಿ ನಂತರ ಕೇಂದ್ರಕ್ಕೆ ವರದಿ ಕಳುಹಿಸಬಹುದು ಎಂದು ವಿನಂತಿಸಿದ್ದಾರೆ.

ಮೈಸೂರು ವಿವಿಯ ರೇಡಿಯೊ ಮಾನಸ 89.6 ಎಫ್‌ಎಂ–ಬೆಂಗಳೂರು ಪಿಪಿಎಲ್ ಒಡಂಬಡಿಕೆ



ಮೈಸೂರು, 20(ಎಂಕೆ)– ಮೈಸೂರು ವಿಶ್ವವಿದ್ಯಾನಿಲಯದ ರೇಡಿಯೊ ಮಾನಸ 89.6 ಎಫ್‌ಎಂ ಸಮುದಾಯ ಬಾನುಲಿ ಕೇಂದ್ರವು ಬೆಂಗಳೂರಿನ ಪ್ಯಾರದೀಪ್ ಫಾಸ್ಫೇಟ್ಸ್ ಲಿಮಿಟೆಡ್(ಪಿಪಿಎಲ್) ನೊಂದಿಗೆ ಒಂದು ವರ್ಷದ ಅವಧಿಗೆ ಒಡಂಬಡಿಕೆ(ಎಂಒಯು) ಮಾಡಿಕೊಂಡಿದೆ. ಕೈಗಾರಿಕಾ ಸಹಯೋಗದೊಂದಿಗೆ ಜ್ಞಾನ ಪಾಲುದಾರಿಕೆ, ಸಮತೋಲನ ರಸಗೊಬ್ಬರ ಬಳಕೆ, ಮಣ್ಣಿನ ಪೋಷಕಾಂಶ ನಿರ್ವಹಣೆ, ಕೃಷಿಯ ಪ್ರಮುಖ ವಿಷಯಗಳನ್ನು ಹಂಚಿಕೊಳ್ಳಲು ಹಾಗೂ ಪ್ರಸಾರ ಮಾಡಲು ಈ ಒಡಂಬಡಿಕೆ ಅನುಕೂಲವಾಗಲಿದೆ. ಈ ವೇಳೆ ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ. ಲೋಕನಾಥ್, ಕುಲಸಚಿವರಾದ ಎಂ.ಕೆ. ಸವಿತಾ, ಪ್ರೊ.ಎನ್.ನಾಗರಾಜ, ಮಾನಸ 89.6 ಎಫ್‌ಎಂ ಸಂಯೋಜಕ ಆರ್. ಸತೀಶ್, ಪಿಪಿಎಲ್ ಅಧಿಕಾರಿಗಳಿದ್ದರು.

ಪ್ರಕರಣಗಳಿಗೆ ಸಂಬಂಧಿಸಿದಂತೆ ಬೋಧಕ ವರ್ಗದವರ ಸಾಕ್ಷಿಗಳಾಗಿ ಪರಿಗಣಿಸಬೇಡಿ

ಪೊಲೀಸ್ ಅಧಿಕಾರಿಗಳಲ್ಲಿ ಎಂಎಲ್‌ಸಿ ವಿವೇಕಾನಂದ ಮನವಿ



ಮೈಸೂರು,ನ.20(ಜಿಎ)– ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಮೊಕದ್ದಮೆಗಳಿಗೆ ಬೋಧಕ ವೃಂದದವರನ್ನು ಸಾಕ್ಷಿಗಳಾಗಿ ಕರೆದುಕೊಂಡು ಹೋಗದಂತೆ ಸಂಬಂಧಪಟ್ಟ ಪೊಲೀಸ್ ಅಧಿಕಾರಿಗಳಿಗೆ ಸೂಚನೆ ನೀಡುವಂತೆ ವಿಧಾನಪರಿಷತ್ ಸದಸ್ಯ ಕೆ.ವಿವೇಕಾನಂದ ಪೊಲೀಸ್ ಮಹಾ ನಿರ್ದೇಶಕರಿಗೆ ಪತ್ರದ ಮೂಲಕ ಒತ್ತಾಯಿಸಿದ್ದಾರೆ. ಠಾಣೆಯಲ್ಲಿ ದಾಖಲಾಗಿರುವ ಕೆಲವು ಪ್ರಕರಣಗಳಿಗೆ ಶಾಲಾ–ಕಾಲೇಜುಗಳ ಶಿಕ್ಷಕರು, ಉಪನ್ಯಾಸಕರನ್ನು ಸಾಕ್ಷಿಗಳಾಗಿ ಬಳಸಿಕೊಂಡು ಅವರಿಂದ ಸಹಿ ಮಾಡಿಸಿಕೊಳ್ಳಲು, ಶಾಲಾ–ಕಾಲೇಜಿನ ಅವಧಿಯಲ್ಲಿ ನಿಮ್ಮ ಆರಕ್ಷಕ ಸಿಬ್ಬಂದಿ ಸಂಸ್ಥೆಯ ಮುಖ್ಯಸ್ಥರ ಮೇಲೆ ಒತ್ತಡ ಹೇರಿ ಕರೆದುಕೊಂಡು ಹೋಗಿ ಸಹಿ ಮಾಡಿಸಿಕೊಂಡಿರುತ್ತಾರೆ. ಇದರಿಂದ ಬೋಧಕ ವೃಂದದವರು ತುಂಬ ಮಾನಸಿಕ ತೊಳಲಾಟಕ್ಕೆ ಸಿಲುಕಿ ಕೊಂಡು ಹಲವು ಬಾರಿ ನ್ಯಾಯಾಲಯಕ್ಕೆ ಅಲೆಯುತ್ತಿರುವುದು ನನ್ನ ಗಮನಕ್ಕೆ ಬಂದಿರುತ್ತದೆ. ಆದ್ದರಿಂದ ತಾವುಗಳು ಈ ವಿಚಾರವಾಗಿ ವಿಶೇಷ ಗಮನಹರಿಸಿ ಠಾಣೆಯಲ್ಲಿ ದಾಖಲಾಗಿರುವ ಮೊಕದ್ದಮೆಗಳಿಗೆ ಬೋಧಕ ವೃಂದದವರನ್ನು ಸಾಕ್ಷಿಗಳಾಗಿ ಕರೆದುಕೊಂಡು ಹೋಗದಂತೆ ಸಂಬಂಧಪಟ್ಟ ಪೊಲೀಸ್ ಅಧಿಕಾರಿಗಳಿಗೆ ಸೂಚನೆ ನೀಡುವಂತೆ ಕೋರಿದ್ದಾರೆ.

ಜಮಾಅತೆ ಇಸ್ಲಾಮೀ ಹಿಂದ್ ವತಿಯಿಂದ ಇಂದಿನಿಂದ

'ಮಾದರಿ ನೆರೆಹೊರೆ–ಮಾದರಿ ಸಮಾಜ' ಅಭಿಯಾನ

- ಪರಸ್ಪರ ಸೌಹಾರ್ದ, ಶಾಂತಿಯುತ ಸಮಾಜ ನಿರ್ಮಾಣ ಉದ್ದೇಶ
- ಸಂಕುಚಿತ ಮನೋಭಾವ, ವಿಶ್ವಾಸ ಕೊರತೆ ನೀಗುವ ಪ್ರಯತ್ನ

ಮೈಸೂರು,ನ.20(ಎಂಕೆ)– ನೆರೆಹೊರೆಯವರೊಂದಿಗಿನ ಸಂಬಂಧ ಮತ್ತು ನೆರೆಹೊರೆಯವರ ಹಕ್ಕುಗಳ ಕುರಿತು ಜಾಗೃತಿಗೊಳಿಸುವ ಮೂಲಕ ಸ್ವಾಸ್ಥ್ಯ, ಸಹಬಾಳ್ವೆಯ ಸಮಾಜ ನಿರ್ಮಾಣಕ್ಕಾಗಿ ಜಮಾಅತೆ ಇಸ್ಲಾಮೀ ಹಿಂದ್ ವತಿಯಿಂದ ನಾಳೆ(ನ.21)ಯಿಂದ ನ.30ರವರೆಗೆ 'ಮಾದರಿ ನೆರೆಹೊರೆ, ಮಾದರಿ ಸಮಾಜ' ಶೀರ್ಷಿಕೆಯಡಿ ರಾಷ್ಟ್ರಮಟ್ಟದ ಅಭಿಯಾನ ಹಮ್ಮಿಕೊಳ್ಳಲಾಗಿದೆ ಎಂದು ಜಮಾಅತೆ ಇಸ್ಲಾಮೀ ಹಿಂದ್ ಸಂಘಟನೆಯ ರಾಜ್ಯ ಕಾರ್ಯದರ್ಶಿ ಜ.ಅಕ್ಬರ್ ಅಲಿ ಉಡುಪಿ ತಿಳಿಸಿದರು.

ಮೈಸೂರಿನ ಜೆ.ಪಿ.ಫಾರ್ಚೂನ್ ಹೋಟೆಲ್‌ನಲ್ಲಿ ಸುದ್ದಿಗೋಷ್ಠಿ ನಡೆಸಿದ ಅವರು, ನೆರೆಹೊರೆಯ ಸಂಬಂಧ ಆರೋಗ್ಯಕರವಾಗಿದ್ದರೆ ಮಾತ್ರವೇ ಆರೋಗ್ಯಕರ ಸಮಾಜ ನಿರ್ಮಾಣ ಸಾಧ್ಯ. ಪರಸ್ಪರ ಪ್ರೀತಿ–ವಿಶ್ವಾಸ, ಸಹಕಾರ, ಸೌಹಾರ್ದ ಮನೋಭಾವದಿಂದ ವರ್ತಿಸಿದಲ್ಲಿ ಸಮಾಜದಲ್ಲಿಯೂ ಶಾಂತಿ, ಸೌಹಾರ್ದ ಮತ್ತು ಪರಸ್ಪರ ಸಹಕಾರಗಳು ನೆಲೆಗೊಳ್ಳುತ್ತವೆ. ಈ ನಿಟ್ಟಿನಲ್ಲಿ ನೆರೆಹೊರೆಯ ಸಂಬಂಧ ಮತ್ತು ಪರಸ್ಪರರ ಹಕ್ಕುಗಳನ್ನು ಎಲ್ಲಾ ಧರ್ಮಿಯರ ಮನೆ ಮನೆಗೆ ತಿಳಿಸುವ ಉದ್ದೇಶದೊಂದಿಗೆ ರಾಷ್ಟ್ರವ್ಯಾಪ್ತಿ ಅಭಿಯಾನ ಹಮ್ಮಿಕೊಳ್ಳಲಾಗಿದೆ ಎಂದರು.

ನಾವಿಂದು ನಾನು, ನನ್ನದು ಎಂದು ಸಂಕುಚಿತ ಮನೋಭಾವಕ್ಕೆ ಒಳಗಾಗಿದ್ದು, ವಿಶ್ವಾಸದ ಕೊರತೆ ಹೆಚ್ಚಾಗುತ್ತಿದೆ. ಮನುಷ್ಯ ಸಂಘಜೀವಿ ಎಂಬ ಪ್ರಜ್ಞೆಯನ್ನೂ ಕಳೆದುಕೊಳ್ಳುತ್ತಿದ್ದೇವೆ. ಇವತ್ತು ಮೂವರಲ್ಲಿ ಒಬ್ಬರು ಇಂಟರ್‌ನೆಟ್‌ನೊಂದಿಗೆ ಕನೆಕ್ಟ್ ಆಗಿರುತ್ತಾರೆ. ಸಂಶೋಧನೆಗಳ ಪ್ರಕಾರ ಯುವಕರು–ಯುವತಿಯರು ನೆರೆಹೊರೆಯವರನ್ನು ಬಿಟ್ಟು ಶೇ.70ರಷ್ಟು ಆನ್‌ಲೈನ್ ಮಿತ್ರರೊಂದಿಗೆ ಸಂಪರ್ಕ ಬೆಳೆಸುತ್ತಿದ್ದಾರೆ. 120 ಕೋಟಿ ಸಮುದಾಯ ಗ್ರಾಹಕರಿದ್ದಾರೆ ಎಂಬುದನ್ನು ಟೆಲಿಕಾಂ ಸಂಸ್ಥೆಗಳೇ ಹೇಳುತ್ತಿವೆ. ಶೇ.40ರಷ್ಟು ಜನರು ಅಪಾರ್ಟ್‌ಮೆಂಟ್‌ನಲ್ಲಿ ವಾಸವಿದ್ದು, ಅಕ್ಕಪಕ್ಕದ ಮನೆಯವರು ಯಾರೆಂಬುದೇ ಗೊತ್ತಿರುವುದಿಲ್ಲ ಎಂದು ವಿಷಾದಿಸಿದರು.

1900ರಿಂದ 2000ದವರೆಗೂ ಶೇ.70–80ರಷ್ಟು ಜನರು ನೆರೆಹೊರೆಯವರೊಂದಿಗೆ ಅನ್ಯೋನ್ಯವಾಗಿದ್ದರು ಎಂದು ಸಂಶೋಧನೆಗಳು ಹೇಳುತ್ತವೆ. ಆದರೆ, ನಂತರದ ವರ್ಷಗಳಲ್ಲಿ ತಂತ್ರಜ್ಞಾನ ಬೆಳೆದಂತೆ ಮನುಷ್ಯ ಏಕಾಂಗಿಯಾಗುತ್ತಿದ್ದಾನೆ. 2010ರಿಂದ 2020ಕ್ಕೆ ನೆರೆಹೊರೆಯ ಸಂಬಂಧ ಕಡಿಮೆಯಾಗಿದೆ. ಶೇ.46 ರಷ್ಟು ಜನರು ವಾರದಲ್ಲೊಮ್ಮೆ ಭೇಟಿಯಾಗುತ್ತಾರೆ. ಭರವಸೆಯ ಪ್ರಮಾಣ ಶೇ.60 ರಷ್ಟು ಕಡಿಮೆಯಾಗಿದೆ. ಸುರಕ್ಷತೆ ಭಾವನೆ ಶೇ.40 ರಷ್ಟು ಇಳಿದಿದೆ. ಶೇ.51 ರಷ್ಟು ಜನರು ಒಂಟಿಯಾಗಿದ್ದಾರೆ. ವರ್ಷದಿಂದ ವರ್ಷಕ್ಕೆ ಸಂಬಂಧಗಳು ದೂರವಾಗುತ್ತಿವೆ. ಆದ್ದರಿಂದ ಪವಿತ್ರ ಖುರಾನ್‌ನಲ್ಲಿ ಸ್ಪಷ್ಟವಾಗಿ ತಿಳಿಸಿರುವಂತೆ ಜಮಾಅತೆ ಇಸ್ಲಾಮೀ ವತಿಯಿಂದ ನೆರೆಹೊರೆಯರ ಸಂಬಂಧವನ್ನು ಗಟ್ಟಿಗೊಳಿಸುವ ಅಭಿಯಾನಕ್ಕೆ ಹಮ್ಮಿಕೊಂಡಿದೆ ಎಂದು ಹೇಳಿದರು.

ಹಲವು ಕಾರ್ಯಕ್ರಮಗಳು: ಜಮಾಅತೆ ಇಸ್ಲಾಮೀ ಹಿಂದ್‌ನ ವಲಯ ಸಂಚಾಲಕ ಅಬ್ದುಸಲಾಮ್ ಉಪ್ಪಿನಂಗಡಿ ಮಾತನಾಡಿ, 'ಮಾದರಿ ನೆರೆಹೊರೆ, ಮಾದರಿ ಸಮಾಜ' ಅಭಿಯಾನವು ನಾಳೆಯಿಂದಲೇ ಮಸೀದಿಗಳಲ್ಲಿ ಪ್ರವಚನ, ಮನೆ ಮನೆಗಳಿಗೆ ಭೇಟಿ, ಮೊಹಲ್ಲಾ ಸಭೆಗಳು, ಕರಪತ್ರ ವಿತರಣೆ, ಸಾಂಸ್ಕೃತಿಕ ಕಾರ್ಯಕ್ರಮ, ಟ್ರಾಫಿಕ್ ನಿಯಮಗಳ ಜಾಗೃತಿ ಸಮಾವೇಶ ಹಾಗೂ ವಿದ್ಯಾರ್ಥಿ ಯುವಕರ ರ್‍ಯಾಲಿ ಮೂಲಕ ಜಾಗೃತಿ ಮೂಡಿಸಲಾಗುವುದು. 10 ದಿನ ಅಭಿಯಾನದಲ್ಲಿ ಸಮಾಜದಲ್ಲಿರುವ ಎಲ್ಲಾ ಧರ್ಮಿಯವರ ಮನೆಗಳಿಗೂ ಭೇಟಿ ನೀಡಿ ನೆರೆಹೊರೆಯ ಹಕ್ಕುಗಳ ಬಗ್ಗೆ ಅರಿವು ಮೂಡಿಸಲಾಗುವುದು. ಅವರನ್ನು ನಮ್ಮ ಮನೆಗಳಿಗೆ ಆಹ್ವಾನಿಸಿ ಪ್ರೀತಿ–ವಿಶ್ವಾಸ ಹೆಚ್ಚಿಸಲಾಗುವುದು. ಒಂದೊಂದು ದಿನವೂ ಮಹಿಳೆಯರಿಗೆ, ಮಕ್ಕಳಿಗೆ, ಯುವಕರಿಗೆ, ಹಿರಿಯರಿಗೆ ವಿಶೇಷ ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು. ಅಭಿಯಾನದ ಎಲ್ಲಾ ಯೋಜನೆಗಳನ್ನು ಸಿದ್ಧಪಡಿಸಲಾಗಿದೆ ಎಂದು ವಿವರಿಸಿದರು.

'ಮಾದರಿ ನೆರೆಹೊರೆ, ಮಾದರಿ ಸಮಾಜ' ಅಭಿಯಾನ ಸಂಚಾಲಕ ಖಲೀಲುರ್ರಹಮಾನ್ ವಸೀಂ, ಜಮಾಅತೆ ಇಸ್ಲಾಮೀ ಹಿಂದ್ ಸ್ಥಾನಿಯ ಅಧ್ಯಕ್ಷ ಜ.ಮಹಮ್ಮದ್ ಅಸ್ಲಾಂ, ಮೈಸೂರು ಜಿಲ್ಲಾ ಸಂಚಾಲಕ ಅಬ್ದುಲ್ ಖಾದರ್, ಮೈಸೂರು ಇಸ್ಲಾಮಿಕ್ ಫೌಂಡೇಷನ್ ಟ್ರಸ್ಟ್ ಕಾರ್ಯದರ್ಶಿ ಷೇಖ್ ಝುಬಿಹುಲ್ಲಾದ್ ಮತ್ತಿತರರು ಉಪಸ್ಥಿತರಿದ್ದರು.



ಮೈಸೂರಿನ ಜೆ.ಪಿ.ಫಾರ್ಚೂನ್ ಹೋಟೆಲ್‌ನಲ್ಲಿ ಜಮಾಅತೆ ಇಸ್ಲಾಮೀ ಹಿಂದ್ ವತಿಯಿಂದ ಪತ್ರಿಕಾಗೋಷ್ಠಿ ನಡೆಸಲಾಯಿತು. (ಎಡದಿಂದ) ಅಮಾಅತೆ ಇಸ್ಲಾಮೀ ಹಿಂದ್ ಮೈಸೂರು ಜಿಲ್ಲಾ ಸಂಚಾಲಕ ಅಬ್ದುಲ್ ಖಾದಿರ್, ವಲಯ ಸಂಚಾಲಕ ಅಬ್ದುಸಲಾಮ್ ಉಪ್ಪಿನಂಗಡಿ, ರಾಜ್ಯ ಕಾರ್ಯದರ್ಶಿ ಜ.ಅಕ್ಬರ್ ಅಲಿ ಉಡುಪಿ, ಸ್ಥಾನಿಯ ಅಧ್ಯಕ್ಷ ಜ.ಮಹಮ್ಮದ್ ಅಸ್ಲಾಂ, ಅಭಿಯಾನ ಸಂಚಾಲಕ ಖಲೀಲುರ್ರಹಮಾನ್ ವಸೀಂ, ಮೈಸೂರು ಇಸ್ಲಾಮಿಕ್ ಫೌಂಡೇಷನ್ ಟ್ರಸ್ಟ್ ಕಾರ್ಯದರ್ಶಿ ಷೇಖ್ ಝುಬಿಹುಲ್ಲಾದ್ ಉಪಸ್ಥಿತರಿದ್ದರು.

ಡಿ.7ರಂದು ಕ್ರಿಸ್ಮಸ್ ಗಾಯನ ಸ್ಪರ್ಧೆ

ಮೈಸೂರು,ನ.20(ಜಿಎ)–ಮೈಸೂರು ಕ್ಯಾಥೋಲಿಕ ಸಂಘದ ವತಿಯಿಂದ ಮೈಸೂರು ಧರ್ಮ ಕ್ಷೇತ್ರದ ಮಟ್ಟದ 21ನೇ ಕ್ರಿಸ್ಮಸ್ ಗಾಯನ ಸ್ಪರ್ಧೆಯನ್ನು ಬನ್ನಿಮಂಟಪದಲ್ಲಿರುವ ಸಂತ ಫಿಲೋಮಿನಾ ಕಾಲೇಜಿನ ಒಳಾಂಗಣ ಭವನದಲ್ಲಿ ಡಿ.7ರಂದು ಬೆಳಗ್ಗೆ 7 ಗಂಟೆಗೆ ಆಯೋಜಿಸಲಾಗಿದೆ.

ಕಾರ್ಯಕ್ರಮದಲ್ಲಿ ಮೈಸೂರು ಧರ್ಮ ಕ್ಷೇತ್ರದ ಧರ್ಮಾಧ್ಯಕ್ಷರಾದ ಡಾ.ಫ್ರಾನ್ಸಿಸ್ ಸೇರಾವೋ ಸಾನಿಧ್ಯದಲ್ಲಿ ಹಾಗೂ ಧರ್ಮ ಗುರುಗಳ ಸಹಯೋಗದೊಂದಿಗೆ ಪೂಜಾರ್ಪಣೆ ಇರುವುದು. ತದನಂತರ ಧರ್ಮಾಧ್ಯಕ್ಷರ ಅಧ್ಯಕ್ಷತೆಯಲ್ಲಿ ಕ್ರಿಸ್ತ ಜಯಂತಿ ಗಾಯನ ಸ್ಪರ್ಧೆ ಉದ್ಘಾಟನೆಗೊಳ್ಳುವುದು. ನೂರಕ್ಕೂ ಹೆಚ್ಚಿನ ತಂಡಗಳು ಭಾಗವಹಿಸಲಿವೆ.

ಸ್ಪರ್ಧೆಯನ್ನು ಕನ್ನಡ ಭಾಷೆ, ಆಂಗ್ಲ ಭಾಷೆ ಹಾಗೂ ಪ್ರಾದೇಶಿಕ ಭಾಷೆಗಳಲ್ಲಿ ನಡೆಸಲಾಗುವುದು. ಸ್ಪರ್ಧೆಗಳನ್ನು ಪ್ರೌಢಶಾಲಾ ವಿಭಾಗ, ಕಾಲೇಜು ವಿಭಾಗ,ವಿವಿಧ ಧರ್ಮ ಕೇಂದ್ರಗಳ ವಿಭಾಗ, ವೃತ್ತಿಪರ ಗಾಯನ ವಿಭಾಗ, ಶಿಕ್ಷಣ ಸಂಸ್ಥೆಗಳ ಬೋಧಕ ಬೋಧಕಿಯರ ವಿಭಾಗ ಆಯೋಜಿಸಿದ್ದು ವಿಜೇತ ತಂಡಗಳಿಗೆ ಆಕರ್ಷಕ ಬಹುಮಾನ, ಪಾರಿತೋಷಕಗಳನ್ನು ನೀಡಿ ಗೌರವಿಸಲಾಗುವುದು. ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.90 ಹಾಗೂ ಅದಕ್ಕಿಂತ ಹೆಚ್ಚಿನ ಅಂಕಗಳಿಸಿದ ಕ್ಯಾಥೋಲಿಕ ಕ್ರೈಸ್ತ ಮಕ್ಕಳನ್ನು ಅಭಿನಂದಿಸಲಾಗುತ್ತದೆ. ನೊಂದಾಯಿಸಲು ಕೊನೆಯ ದಿನಾಂಕ ನ.23. ವಿವರಗಳಿಗೆ 9886015652, 9845622422 ಸಂಪರ್ಕಿಸಬಹುದು.

ಸಂಶೋಧನೆ ಸತ್ಯದ ಹಾದಿಯಲ್ಲೇ ನಡೆಯಬೇಕು

ಸಂಶೋಧಕರಿಗೆ ಖ್ಯಾತ ಸಂಗೀತ ನಿರ್ದೇಶಕ ಹಂಸಲೇಖ ಸಲಹೆ



ಮೈಸೂರು ವಿವಿ 2025–26ನೇ ಸಾಲಿನ ಸಂಶೋಧಕರ ಸಂಘ ಹಾಗೂ ಸಂವಿಧಾನ ದಿನಾಚರಣೆ ಕಾರ್ಯಕ್ರಮವನ್ನು ಖ್ಯಾತ ಸಂಗೀತ ನಿರ್ದೇಶಕ ಹಂಸಲೇಖ ಉದ್ಘಾಟಿಸಿದರು. ಮೈಸೂರು ವಿವಿ ಕುಲಪತಿ ಪ್ರೊ.ಲೋಕನಾಥ್ ಮತ್ತಿತರರಿದ್ದರು.

ಮೈಸೂರು,20(ಎಂಕೆ)–ಸತ್ಯದ ಪೋಷಣೆ ಮತ್ತು ಮುಂದುವರಿಕೆಯೇ ಸಂಶೋಧನೆಯಾಗಿದ್ದು, ಸಂಶೋಧನಾ ವಿದ್ಯಾರ್ಥಿಗಳು ಸತ್ಯದ ಹಾದಿಯಲ್ಲೇ ನಡೆಯಬೇಕು ಎಂಬುದನ್ನು ಯಾವತ್ತು ಮರೆಯಬಾರದು ಎಂದು ಖ್ಯಾತ ಸಂಗೀತ ನಿರ್ದೇಶಕ ಹಂಸಲೇಖ ಸಲಹೆ ನೀಡಿದರು.

ಮೈಸೂರು ವಿವಿ ಮಾನಸಗಂಗೋತ್ರಿಯ ಮಾನವಿಕ ಸಭಾಂಗಣದಲ್ಲಿ 2025–26ನೇ ಸಾಲಿನ ಮೈಸೂರು ವಿವಿ ಸಂಶೋಧಕರ ಸಂಘ ಹಾಗೂ ಸಂವಿಧಾನ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಒಂದು ಗಿಡಕ್ಕೆ ನೀರೆರೆದು ಪೋಷಿಸುವುದು ಮತ್ತು ಸತ್ಯದ ಬೀಜವನ್ನು ಕೈಗೆತ್ತಿಕೊಂಡು ಅದನ್ನು ಪೋಷಣೆ ಮಾಡುತ್ತಾ ಸತ್ಯದ ಮುಂದುವರಿಕೆ ಮಾಡುವುದು ಕೂಡ ಸಂಶೋಧನೆಯಾಗಿದೆ ಎಂದರು.

ಪ್ರತಿಂಯೊಬ್ಬ ಸಂಶೋಧ'ಕರು ಒಂದೊಂದು ದ್ವೀಪ ಮತ್ತು ಏಕವಾಗಿದ್ದಾರೆ. ಅನೇಕ ಏಕಗಳು ಸೇರಿ ಇಂದು ಸಂಘವಾಗಿದೆ. ಸಂಶೋಧನೆ ರೂಪದಲ್ಲಿ ಸತ್ಯವನ್ನು ಮುಂದುವರೆಸುವ ಈ ಸಂಶೋಧಕರ ಸಂಘವನ್ನು ಉದ್ಘಾಟನೆ ಮಾಡಿರುವುದು ವಿಶೇಷ. ಸಂಘಗಳು ಹಳೆಯದಾದಂತೆ ಉತ್ಸಾಹ ಕಡಿಮೆಯಾಗುವುದು ಸಹಜ. ಆದರೆ, ಕುವೆಂಪು ಅವರ ಕಾಲಘಟ್ಟದ ದಾರಿಯನ್ನು ಮುಂದುವರೆಸುವುದು ಬಹಳ ಮುಖ್ಯವಾಗಿದೆ ಎಂದರು.

ಭರವಸೆ, ಕನಸುಗಳನ್ನು ಹೊತ್ತುಕೊಂಡು ಸಂಶೋಧನೆಗೆ ಇಳಿದಿರುವ ಸಂಶೋಧಕರು ತಮ್ಮ ವಿಷಯದಲ್ಲಿ ನಿಖರತೆ ಸಿಗುವವರೆಗೂ ಧ್ಯಾನ ಮಾಡಿ. ನಿಖರತೆ ಬಂದ ಕೂಡಲೇ ನಿಮ್ಮ ಸಂಶೋಧನೆಯ ವಿಷಯಕ್ಕೆ ಸ್ಪಷ್ಟತೆ ದೊರೆತು ಪ್ರತಿಫಲ ಸಿಗುತ್ತಾ ಹೋಗುತ್ತದೆ. ನಾವು ಬಹಳ ಎತ್ತರಕ್ಕೆ ಏರುವುದನ್ನು ರೂಡಿ ಮಾಡಿಕೊಳ್ಳಬೇಕು. ಜೊತೆಗೆ ಸತ್ಯದ ಹಾದಿಯ ಮೇಲೆ ನಡೆಯಬೇಕು ಎಂಬುದನ್ನು ಯಾವತ್ತು ಮರೆಯಬಾರದು ಎಂದು ಕಿವಿಮಾತು ಹೇಳಿದರು.

ಶಿಕ್ಷಣ ತಜ್ಞ ಶ್ರೀಪಾದ ಭಟ್ ಮಾತನಾಡಿ, ಮೈಸೂರು ವಿವಿ ಮತ್ತು ಸಂಶೋಧಕರ ಸಂಘದ ಕುರಿತು ಮಾತನಾಡಿದರು. ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ. ಲೋಕನಾಥ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಮಾಜಿ ಮೇಯರ್ ಪುರುಷೋತ್ತಮ್, ಮೈಸೂರು ವಿವಿ ಕುಲಸಚಿವರಾದ ಎಂ.ಕೆ.ಸವಿತಾ, ದಲಿತ ಮುಖಂಡ ಅಹಿಂದ ಜವರಪ್ಪ ಪತ್ರಕರ್ತೆ ರಶ್ಮಿ ಕೋಟಿ, ಪ್ರಗತಿಪರ ಚಿಂತಕಿ ಸವಿತಾ ಪ.ಮಲ್ಲೇಶ್, ಸಿಂಡಿಕೇಟ್ ಸದಸ್ಯ ನಟರಾಜ್ ಶಿವಣ್ಣ, ಕ್ಯಾತನಹಳ್ಳಿ ನಾಗರಾಜ್, ವಕೀಲ ಶಿವಪ್ರಸಾದ್, ನವೀನ್ ಮೌರ್ಯ, ಎಸ್.ಮರಿದೇವಯ್ಯ, ಸಂಶೋಧಕರ ಸಂಘದ ಅಧ್ಯಕ್ಷ ವರಹಳ್ಳಿ ಆನಂದ್ ಮತ್ತಿತರರಿದ್ದರು.

ಬಹುತೇಕ ಸಮಸ್ಯೆಗೆ 'ಬಸವತತ್ವ'ವೇ ಔಷಧ

ಚೆನ್ನೈನಲ್ಲಿ ಬಸವ ಮಂಟಪ; ಬಸವೇಶ್ವರ ಪುತ್ಥಳಿ ಅನಾವರಣಗೊಳಿಸಿ ಸುತ್ತೂರು ಶ್ರೀಗಳು ಆಶೀರ್ವಚನ

ಚೆನ್ನೈ: ಜಗಜ್ಯೋತಿ ಬಸವಣ್ಣನವರ ಆದರ್ಶ ಮತ್ತು ತತ್ವಗಳನ್ನು ಪಾಲಿಸುವುದು ಸಮಾಜಕ್ಕೆ ಅತ್ಯಗತ್ಯ. ಏಕೆಂದರೆ ಬಸವಣ್ಣನವರ ತತ್ವಗಳು ಜಾತೀಯತೆ, ಅಸ್ಪೃಶ್ಯತೆ, ಭ್ರಷ್ಟಾಚಾರ ಮತ್ತು ಹಿಂಸಾಚಾರದಂತಹ ಸಮಸ್ಯೆಗಳನ್ನು ಹೋಗಲಾಡಿಸಲು 'ಬಸವತತ್ವ' ಎಂಬ ಔಷಧವನ್ನು ನೀಡುತ್ತವೆ ಎಂದು ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು ಬಣ್ಣಿಸಿದರು.



ಚೆನ್ನೈನ ಕೊಳ್ಳುಮೇಡು ಗ್ರಾಮದಲ್ಲಿ ಬಸವ ಮಂಟಪ ಉದ್ಘಾಟಿಸಿ, ಬಸವೇಶ್ವರ ಪುತ್ಥಳಿಯನ್ನು ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅನಾವರಣಗೊಳಿಸಿದರು. ಬಸವೇಶ್ವರ ಟ್ರಸ್ಟ್ ಅಧ್ಯಕ್ಷ ಪ್ರಕಾಶಂ ಇನ್ನಿತರರಿದ್ದರು.

ಚೆನ್ನೈನ ಬಸವೇಶ್ವರ ಸೋಷಿಯಲ್ ಟ್ರಸ್ಟ್, ವೀರಶೈವ ಲಿಂಗಾಯತ ವೆಲ್ಫೇರ್ ಅಸೋಷಿಯೇಷನ್, ಶ್ರೀ ಕಾಶಿ ವಿಶ್ವನಾಥ–ವಿಶ್ವಲಕ್ಷ್ಮಿ ಆಲಯ ಟ್ರಸ್ಟ್ ಮತ್ತು ಚೆನ್ನೈ ಹೊರನಾಡು ಕನ್ನಡಿಗರ ಸಂಘದ ಸಂಯುಕ್ತಾಶ್ರಯದ ವತಿಯಿಂದ ಕೊಳ್ಳುಮೇಡು ಗ್ರಾಮದಲ್ಲಿ ಆಯೋಜಿಸಲಾಗಿದ್ದ ಬಸವ ಮಂಟಪ ಉದ್ಘಾಟನೆ ಹಾಗೂ ಬಸವೇಶ್ವರ ಪುತ್ಥಳಿ ಅನಾವರಣ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಆಶೀರ್ವಚನ ನೀಡಿದರು.

ಬಸವಣ್ಣನವರು 12ನೇ ಶತಮಾನದ ಸಾಮಾಜಿಕ ಸುಧಾರಕರಾಗಿದ್ದರು. ತತ್ವಜ್ಞಾನಿ, ಕವಿ, ವಚನ ಸಾಹಿತ್ಯದ ಮೂಲಕ ಜಾತಿ ವ್ಯವಸ್ಥೆ ಮತ್ತು ಅಸಮಾನತೆಗಳನ್ನು ವಿರೋಧಿಸಿದರು. ಅವರು 'ಕಾಯಕವೇ ಕೈಲಾಸ' ಎಂಬ ತತ್ವವನ್ನು ಸಾರಿದರು. ಎಲ್ಲರನ್ನು ಒಳಗೊಂಡ ಅನುಭವ ಮಂಟಪವನ್ನು ಸ್ಥಾಪಿಸಿದರು. ಇದು ಆಧ್ಯಾತ್ಮಿಕ ಹಾಗೂ ಲೌಕಿಕ ವಿಚಾರಗಳನ್ನು ಚರ್ಚಿಸಲು ವೇದಿಕೆಯಾಗಿತ್ತು ಎಂದು ಶ್ರೀಗಳು ನುಡಿದರು.

ಯುವ ಪೀಳಿಗೆಗೆ ಬಸವೇಶ್ವರ ಸಿದ್ಧಾಂತಗಳು ದಾರಿದೀಪವಾಗಿವೆ. ಬಸವಣ್ಣ ಸರ್ವ ಕಾಲಕ್ಕೂ, ಸರ್ವರಿಗೂ ಬೆಳಕಾಗಿ ಒಡಮೂಡುತ್ತಾರೆ. 12ನೇ ಶತಮಾನದಲ್ಲಿ ತೆರೆದ ಅನುಭವ ಮಂಟಪ ಎಂಬ ಮಹಾ ಪರಿಕಲ್ಪನೆ ಇಂದು ನಮಗೆ ಸಂವಿಧಾನವಾಗಿ ಹೊರಹೊಮ್ಮಿದೆ. ಸಮಾನತೆ, ಭ್ರಾತೃತ್ವ ಹಾಗೂ ಸಾಮರಸ್ಯವನ್ನು ಜಗತ್ತಿಗೆ ಸಾರಿದ ಮಹಾತಪಸ್ವಿ ಕಾಯಕಯೋಗಿ ಬಸವಣ್ಣನವರ ಜೀವನ ಆದರ್ಶವನ್ನು ಪ್ರತಿಯೊಬ್ಬರೂ ಕೈಗೂಡಿಸಿಕೊಂಡರೆ ಜಗತ್ತಿನಲ್ಲಿ ಅಶಾಂತಿಯೇ ಇರಲಾರದು ಎಂದು ತಿಳಿಸಿದರು.

ದೊಡ್ಡ ಕೆಲಸಗಳು ಸಣ್ಣದಾಗಿಯೇ ಪ್ರಾರಂಭವಾಗುತ್ತವೆ. ಆದರೆ ಬಳಿಕ ನಿರೀಕ್ಷೆಗೂ ಮೀರಿದ ಫಲಿತಾಂಶ, ಯಶಸ್ಸು ದೊರೆಯುತ್ತದೆ ಎಂದ ಶ್ರೀಗಳು, ಕರುನಾಡಿನ ತಲಕಾವೇರಿಯಲ್ಲಿ ಸಣ್ಣ ಪ್ರಮಾಣದಲ್ಲಿ ಉದ್ಭವಿಸುವ ಕಾವೇರಿ ಮಾತೆ ಹೊರನಾಡಿನ ನದಿ, ಕೆರೆ–ಕಟ್ಟೆಗಳು ತುಂಬುವ ಮಟ್ಟದಲ್ಲಿ ಹರಿಯುವುದು ಉದಾಹರಣೆಯಾಗಿದೆ ಎಂದರಲ್ಲದೇ, ದೂರದ ಚೆನ್ನೈನಲ್ಲಿ ಬಸವ ಮಂಟಪ ಸ್ಥಾಪಿಸಿ, ಬಸವೇಶ್ವರರ ಪುತ್ಥಳಿ ನಿರ್ಮಾಣಗೊಳಿಸಿರುವುದು ಅತ್ಯಂತ ಹರ್ಷದಾಯಕ. ಇದಕ್ಕೆ ಕಾರಣಕರ್ತರಾದ ಪ್ರತಿಯೊಬ್ಬರಿಗೂ ಒಳಿತಾಗಲಿ ಎಂದರು.

ಚೆನ್ನೈನ ಕುಲುಮೇಡು ಗ್ರಾಮದಲ್ಲಿನ ಇಂದಿನ ಕಾರ್ಯಕ್ರಮದಲ್ಲಿ ಸುಮಾರು 1000ಕ್ಕೂ ಅಧಿಕ ಮಂದಿ ಈ ಸುಸಂದರ್ಭದಲ್ಲಿ ದೀಕ್ಷಾ ಸಂಸ್ಕಾರ ಪಡೆದು ಲಿಂಗ ಧಾರಣೆ ಮಾಡಿದ್ದಾರೆ. ಕರ್ನಾಟಕ, ತಮಿಳುನಾಡಿನ ಸಂಗಮದ ಕಾರ್ಯಕ್ರಮ ಇದಾಗಿದೆ. ಬಸವ ಮಂಟಪದಲ್ಲಿನ ಈ ಸಮಾವೇಶ ನಿಜಕ್ಕೂ ಸಂತೋಷಕರ ಸಂಗತಿ. ಇದರರ್ಥ ಕಾಯಕ, ದಾಸೋಹ ಮತ್ತು ಸಮಾನತೆಗಳನ್ನು ಎಲ್ಲರೂ ಅಳವಡಿಸಿಕೊಳ್ಳಬೇಕು ಎಂದರು.

> “ಜೀವನದಲ್ಲಿ ಕಷ್ಟ–ಸುಖ ಎಂಬುದು ಸಾಮಾನ್ಯ. ಸುಖ ಬಂದಾಗ ಹಿಗ್ಗದೇ, ಕಷ್ಟ ಬಂದಾಗ ಕುಗ್ಗದೇ ಎಲ್ಲವನ್ನೂ ಜಯಿಸಿ ಗೆಲ್ಲುವವನೇ ನಿಜವಾದ ಸಾಧಕ. ಈ ಬಗ್ಗೆ ಬಸವಣ್ಣನವರ ಸಾಕಷ್ಟು ವಚನಗಳಲ್ಲಿ ಉಲ್ಲೇಖವೂ ಇದೆ. ಇನ್ನೂ ಹಲವೆಡೆ ಬಸವಣ್ಣನವರನ್ನು ನಾವು ಕುದುರೆ ಮೇಲೆ, ಸಿಂಹಾಸನದ ಮೇಲೆ ಕುಳಿತಿರುವ ದೃಶ್ಯ ಕಂಡಿದ್ದೇವೆ. ವಿವಿಧೆಡೆ ನೋಡುವ ದೃಷ್ಟಿ ಬೇರೆಯದ್ದೇ ಆಗಿದೆ. ಆದರೆ ಬಸವಣ್ಣನವರು ಇಷ್ಟ ಲಿಂಗಪೂಜಾಸಕ್ತರಾಗಿ ಏಕಾಗ್ರತೆಯ ಮನಸ್ಸಿನಿಂದ ಧ್ಯಾನಾಸಕ್ತರಾಗಿ ಭಗವಂತನ ಕಡೆಗೆ ಕೇಂದ್ರಿಕರಿಸುವಂತಹ ಪುತ್ಥಳಿ ನಿರ್ಮಾಣ ಮಾಡಿರುವುದು ಹಲವು ಮಹತ್ವದ ಸಂದೇಶಗಳನ್ನು ಸಾರುತ್ತದೆ. **– ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸುತ್ತೂರು ವೀರ ಸಿಂಹಾಸನಮಠ.**

ಹಾಗೆಯೇ ಇಂದಿನ ಈ ಮೌಲಿಕ ಕಾರ್ಯಕ್ರಮದ ಆಯೋಜಕರಾದ ಬಸವೇಶ್ವರ ಟ್ರಸ್ಟ್ ಅಧ್ಯಕ್ಷ ಪ್ರಕಾಶಂ, ಉದ್ಯಮಿ ಬಿ.ರಾಜೇಶ್ ಊಟಿ, ಶಿವಮೂರ್ತಿ(ಚೆನ್ನೈ) ಹಾಗೂ ತಂಡದವರು ಮತ್ತು ಮೈಸೂರಿನವರೇ ಆದರೂ ಚೆನ್ನೈನಲ್ಲೇ ನೆಲೆಸಿ, ಕನ್ನಡ ಸಂಸ್ಕೃತಿಯನ್ನು ಪಸರಿಸಿ, ತಮ್ಮೆಲ್ಲರ ಪ್ರೀತಿ ವಿಶ್ವಾಸ ಗಳಿಸಿರುವ ದಾಕ್ಷಾಯಿಣಿ ದಳವಾಯಿ ಅವರಿಗೂ ಹಾಗೆಯೇ ಅವರ ತಂದೆ ಈ ಬಾರಿಯ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರೂ ಆದ ಮಹದೇವಪ್ಪ ಉಡಿಗಾಲ ಅವರು ಸೇರಿದಂತೆ ಎಲ್ಲರಿಗೂ ಒಳಿತಾಗಲಿ ಎಂದು ಹಾರೈಸಿದರು.

ಈ ವೇಳೆ ಜೀವಮಾನ ಸಾಧನೆ ಪ್ರಶಸ್ತಿ ಪುರಸ್ಕೃತರಾದ ಬನಾರಸ್ ಹಿಂದೂ ವಿಶ್ವವಿದ್ಯಾನಿಲಯದ ಪ್ರೊ.ಡಾ.ಎನ್. ರಾಮನ್, ಯೂನಿವರ್ಸಿಟಿ ಆಫ್ ಮದ್ರಾಸ್(ಚೆನ್ನೈ) ವಿಭಾಗದ ಮುಖ್ಯಸ್ಥರಾದ ತಮಿಳ್ ಸೆಲ್ವಿ, ತಮಿಳುನಾಡು ಸರ್ಕಾರದ ವೀರಮಾಮುನಿವರ್ ಪ್ರಶಸ್ತಿ ವಿಜೇತರಾದ ಹಾಲ್‌ದೊರೈ, ಬೆಂಗಳೂರಿನ ಬಸವನಗುಡಿಯ ಬಿಎಂಎಸ್ ಕಾಲೇಜಿನ ನಿವೃತ್ತ ಪ್ರೊ.ಶಿವಕುಮಾರ್ ಎ.ಆರ್, ಸೇರಿದಂತೆ ಹಲವಾರು ಗಣ್ಯರು, ಸ್ಥಳೀಯ ನಿವಾಸಿಗಳು, ಸಾವಿರಕ್ಕೂ ಹೆಚ್ಚು ಕನ್ನಡಿಗರು ಹಾಗೂ ಬಸವ ಅನುಯಾಯಿಗಳು, ಮುಖಂಡರು ಉಪಸ್ಥಿತರಿದ್ದರು.

ಅನುಭವ ಮಂಟಪ ನೃತ್ಯ ರೂಪಕ



ಹೊರನಾಡ ಕನ್ನಡಿಗರು ಸಂಚಾಲಕಿ ದಾಕ್ಷಾಯಿಣಿ ಎಸ್.ದಳವಾಯಿ ನೇತೃತ್ವದ ತಂಡ 'ಇಂದಿನ ಅನುಭವ ಮಂಟಪ ನೃತ್ಯ ರೂಪಕ'ವನ್ನು ಪ್ರದರ್ಶಿಸಿ ಗಮನ ಸೆಳೆದರು. ಸುತ್ತೂರು ಶ್ರೀಗಳ ಆಶೀರ್ವಚನದಲ್ಲಿನ ಕಾಯಕವೇ ಕೈಲಾಸ, ದಯವೇ ಧರ್ಮದ ಮೂಲವಯ್ಯ. ಜೀವನದಲ್ಲಿ ಕಷ್ಟ–ಸುಖ ಎಂಬುದು ಸಾಮಾನ್ಯ. ಸುಖ ಬಂದಾಗ ಹಿಗ್ಗದೇ, ಕಷ್ಟ ಬಂದಾಗ ಕುಗ್ಗದೇ ಎಲ್ಲವನ್ನೂ ಜಯಿಸಿ ಗೆಲ್ಲುವವನೇ ನಿಜವಾದ ಸಾಧಕ ಎಂಬ ಪದಗಳಿಗೆ ಹಾಗೂ ಬಸವಣ್ಣನವರ ತತ್ವಗಳನ್ನು ಬಿಂಬಿಸುವ ಮಾದರಿಯ 'ಹೆದರದಿರಿ... ಹಿಂಡನಗಲಿ ಬಂದವರ ಹಾಗೆ ಭರವಸೆಯ ಕಳೆಯದಿರಿ... ನಾವಿದ್ದೇವೆ... ನಾವಿದ್ದೇವೆ. ನಮ್ಮನುಭವಗಳ ಬೆಳಕಲ್ಲಿ ಈ ಸುತ್ತಲಿನ ಪರಿಸರಕ್ಕೆ ಅರಿವನೆರೆದಿದ್ದೇವೆ... ಇದು ಶರಣ ಕಲ್ಯಾಣ.. ಇದರ ಗುರಿ ವಿಶ್ವ ಕಲ್ಯಾಣ' ಎಂಬಿತ್ಯಾದಿ ಸಾಲುಗಳುಳ್ಳ ಅರ್ಥಪೂರ್ಣ ನೃತ್ಯ ರೂಪಕ ಪ್ರದರ್ಶಿಸಿದ್ದು, ನೆರೆದಿದ್ದವರ ಮೆಚ್ಚುಗೆಗೆ ಪಾತ್ರವಾಯಿತು.

ಶ್ರೀ ವೀರಾಂಜನೇಯಸ್ವಾಮಿ ದೇವಸ್ಥಾನದಲ್ಲಿ ಡಿ.1ರಿಂದ 4ರವರೆಗೆ ಹನುಮ ಜಯಂತಿ

ಮೈಸೂರು,ನ.20–ಮೈಸೂರಿನ ಬನ್ನಿ ಮಂಟಪ ಹನುಮಂತನಗರದಲ್ಲಿರುವ ಶ್ರೀ ವೀರಾಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಡಿ.1ರಿಂದ 4ರವರೆಗೆ ಶ್ರೀ ಹನುಮ ಜಯಂತಿ ಕಾರ್ಯಕ್ರಮ ವಿಜೃಂಭಣೆಯಿಂದ ನಡೆಯಲಿದೆ.



ಡಿ.1ರಂದು ಬೆಳಗ್ಗೆ 6.30ಕ್ಕೆ ಪುಣ್ಯಾ ವಾಚನ, ರಕ್ಷಾ ಬಂಧನ, ಗಣಪತಿ ಹೋಮ, ನವಗ್ರಹ ಹೋಮ, ಸುದರ್ಶನ ಹೋಮ, 9.30ಕ್ಕೆ ಪೂರ್ಣಾಹುತಿ, ಮಹಾ ಮಂಗಳಾರತಿ, ಪ್ರಸಾದ ವಿನಿಯೋಗ, ರಾತ್ರಿ 10.30ಕ್ಕೆ ಶ್ರೀ ಮುರುಗನ್ ತಂಡದವರಿಂದ ಅಖಂಡ ಭಜನೆ ನಡೆಯಲಿದೆ.

ಡಿ.2ರಂದು ಬ್ರಾಹ್ಮಿ ಮುಹೂರ್ತದಲ್ಲಿ ಶ್ರೀ ಸ್ವಾಮಿಯವರಿಗೆ ಚತುಷ್ಟಾರ್ಚನೆ, ಪಂಚಾಮೃತ ಅಭಿಷೇಕ, 7.30ಕ್ಕೆ ಮಹಾ ಮಂಗಳಾರತಿ, ಪ್ರಸಾದ ವಿನಿಯೋಗ, 9 ಗಂಟೆಗೆ ಶ್ರೀ ರಾಮತಾರಕ ಹೋಮ, ಶ್ರೀ ಆಂಜನೇಯ ಸಹಸ್ರನಾಮ, 11ಕ್ಕೆ ಶ್ರೀ ವೀರಾಂಜನೇಯ ಸ್ವಾಮಿ ಉತ್ಸವ, ಮಹಾಮಂಗಳಾರತಿ, ಮಧ್ಯಾಹ್ನ 12ಕ್ಕೆ ಅನ್ನಸಂತರ್ಪಣೆ. ಸಂಜೆ 6.30ಕ್ಕೆ ಶ್ರೀಮತಿ ಭಾಗ್ಯದತ್ತ ಅವರಿಂದ ಸುಗಮ ಸಂಗೀತ ಕಾರ್ಯಕ್ರಮ ನಡೆಯಲಿದೆ. ಡಿ.3ರಂದು ಬೆಳಗ್ಗೆ ಶ್ರೀ ಸ್ವಾಮಿಯವರಿಗೆ ವಿಶೇಷ ಪೂಜೆ ಮತ್ತು ಅಲಂಕಾರ, ಸಂಜೆ 6.30ಕ್ಕೆ ಶ್ರೀ ಕೃಷ್ಣ ಭಜನಾ ಮಂಡಳಿಯವರಿಂದ ಭಜನಾ ಕಾರ್ಯಕ್ರಮ ನಡೆಯಲಿದೆ. ಡಿ.4ರಂದು ಶ್ರೀ ಸತ್ಯನಾರಾಯಣ ಪೂಜೆ, ಮಧ್ಯಾಹ್ನ 12ಕ್ಕೆ ಮಹಾಮಂಗಳಾರತಿ, ಅನ್ನಸಂತರ್ಪಣೆ ಏರ್ಪಡಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಬೀದಿನಾಯಿಗಳ ಮಾಹಿತಿ ನೀಡಿ

ಮೈಸೂರು: ನಗರ ಸ್ಥಳೀಯ ಸಂಸ್ಥೆಯ ವ್ಯಾಪ್ತಿಯಲ್ಲಿ ಖಾಸಗಿ ಹಾಗೂ ಸರ್ಕಾರಿ ಶಿಕ್ಷಣ ಸಂಸ್ಥೆಗಳು ಖಾಸಗಿ ಹಾಗೂ ಸರ್ಕಾರಿ ಆಸ್ಪತ್ರೆಗಳು, ಕ್ರೀಡಾ ಸಂಕೀರ್ಣ, ಬಸ್ ನಿಲ್ದಾಣಗಳು, ರೈಲ್ವೆ ನಿಲ್ದಾಣಗಳ ಮುಖ್ಯಸ್ಥರಿಗೆ ಸುಪ್ರೀಂಕೋರ್ಟ್ ಸ್ವಯಂ ಪ್ರೇರಿತ ರಿಟ್ ಅರ್ಜಿ ಸಂಖ್ಯೆ 5/2025ರಲ್ಲಿ ನೀಡಿರುವ ನಿರ್ದೇಶನದಂತೆ ತಮ್ಮ ಸಂಸ್ಥೆಯ ಆವರಣದಲ್ಲಿ ಯಾವುದೇ ಬೀದಿ ನಾಯಿಗಳು ವಾಸವಿದ್ದಲ್ಲಿ ಪರಿಶೀಲಿಸಿ ಕೂಡಲೇ ಅದರ ಸಂಖ್ಯೆಯನ್ನು ಲೆಕ್ಕ ಮಾಡಿ ಮುಖ್ಯಾಧಿಕಾರಿ, ಪೌರಾಯುಕ್ತರಿಗೆ ತಿಳಿಸಬೇಕಾಗಿದೆ. ತಮ್ಮ ಸಂಸ್ಥೆಯ ಆವರಣದಲ್ಲಿ ಬೀದಿನಾಯಿಗಳ ಉಪಟಳ ತಡೆಯಲು ಹಾಗೂ ಅವುಗಳ ಪ್ರವೇಶ ನಿಯಂತ್ರಿಸಲು ಕ್ರಮವಹಿಸುವುದು. ನಗರ ಸ್ಥಳೀಯ ಸಂಸ್ಥೆಯಿಂದ ಬೀದಿನಾಯಿಗಳನ್ನು ಸ್ಥಳಾಂತರಿಸಲು ಸಹಕರಿಸಲು ಹಾಗೂ ಅವುಗಳ ಪ್ರವೇಶ ನಿರ್ಬಂಧಿಸುವುದನ್ನು ಮೇಲ್ವಿಚಾರಣೆ ಮಾಡಲು ತಮ್ಮ ಸಂಸ್ಥೆ ವತಿಯಿಂದ ಒಬ್ಬ ಜವಾಬ್ದಾರಿಯುತ ನೌಕರರನ್ನು ನೋಡಲ್ ಅಧಿಕಾರಿಯಾಗಿ ನೇಮಕ ಮಾಡುವುದು. ತಮ್ಮ ಸಂಸ್ಥೆಯ ವ್ಯಾಪ್ತಿಯಲ್ಲಿ ಪುನಃ ನಾಯಿಗಳು ವಾಸ ಮಾಡಲು ಅವಕಾಶ ಕೊಟ್ಟಲ್ಲಿ ಅವನ್ನು ಸ್ಥಳಾಂತರಿಸುವ ವೆಚ್ಚವನ್ನು ತಮ್ಮ ಸಂಸ್ಥೆಯಿಂದ ವಸೂಲಿ ಮಾಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.


ನ.23ರಂದು ಪ್ರೊ.ಸಿ.ಪಿ.ಸಿದ್ಧಾಶ್ರಮರ 'ನೆಲದ ನಕ್ಷತ್ರಗಳು', 'ಅರಿವಿನ ದೀವಿಗೆ' ಕೃತಿ ಬಿಡುಗಡೆ

ಮೈಸೂರು,ನ.20(ಜಿಎ)–ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಉಷಾ ಪ್ರಕಾಶನ ಸಹಯೋಗದೊಂದಿಗೆ ನ.23ರಂದು ಸಂಜೆ 4 ಗಂಟೆಗೆ ಜಿಲ್ಲಾ ಕನ್ನಡ ಸಾಹಿತ್ಯ ಭವನದಲ್ಲಿ ಪ್ರೊ.ಸಿ.ಪಿ.ಸಿದ್ಧಾಶ್ರಮ ಅವರ 'ನೆಲದ ನಕ್ಷತ್ರಗಳು' ಮತ್ತು 'ಅರಿವಿನ ದೀವಿಗೆ' ಕೃತಿ ಬಿಡುಗಡೆ ಸಮಾರಂಭ ಆಯೋಜಿಸಲಾಗಿದೆ ಎಂದು ಪ್ರಾಧ್ಯಾಪಕ ಡಾ.ಆರ್.ಗುರುಸ್ವಾಮಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೃತಿಯನ್ನು ಹಿರಿಯ ಸಾಹಿತಿ ಪ್ರೊ.ರಾಮೇಗೌಡ(ರಾಗೌ) ಬಿಡುಗಡೆಗೊಳಿಸಲಿದ್ದಾರೆ. ಕೃತಿ ಕುರಿತು ಸಾಹಿತಿ ಪ್ರೊ.ಕೆ.ತಿಮ್ಮಯ್ಯ, ಉಪನ್ಯಾಸಕಿ ಡಾ.ಹೆಚ್.ಎಲ್.ಶೈಲಾ ಮಾತನಾಡಲಿದ್ದಾರೆ. ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್ ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು.

ಈ ವೇಳೆ ಸಾಹಿತಿ ಪ್ರೊ.ಕೆ.ತಿಮ್ಮಯ್ಯ ಮಾತನಾಡಿ, ಸಂಸ್ಕೃತಿ ಚಿಂತಕರಾಗಿ ಗುರುತಿಸಿಕೊಂಡಿರುವ ಪ್ರೊ.ಸಿ.ಪಿ.ಸಿದ್ಧಾಶ್ರಮ ಅವರು ಹಲವಾರು ದಶಕಗಳಿಂದ ತಮ್ಮ ಸಾಹಿತ್ಯದ ಮೂಲಕ ಸಮಾಜದ ಬದಲಾವಣೆಗಾಗಿ ಸಂಶೋಧನೆ, ವಿಮರ್ಶಕರಾಗಿ ಸಾಕಷ್ಟು ಕೊಡುಗೆ ನೀಡಿದ್ದು, ಸಮ ಸಮಾಜ ನಿರ್ಮಾಣ ಮಾಡುವ ನಿಟ್ಟಿನಲ್ಲಿ ಕೃತಿಗಳನ್ನು ಬರೆದಿದ್ದಾರೆ. ಅವರ ವಿದ್ಯಾರ್ಥಿಗಳು, ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕ್ರಮಕ್ಕೆ ಆಗಮಿಸಿ ಎಂದು ಕರೆ ನೀಡಿದರು. ಈ ವೇಳೆ ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಉಷಾ ಪ್ರಕಾಶಕ ಕೆ.ಸಿ.ಓಂಕಾರಪ್ಪ ಉಪಸ್ಥಿತರಿದ್ದರು.

ಜಗದ್ಗುರು ಡಾ.ಶ್ರೀ ಶಿವರಾತ್ರಿ ರಾಜೇಂದ್ರ ಶ್ರೀಗಳ 30ನೇ ಸಂಗೀತ ಸಮ್ಮೇಳನ



ಮೈಸೂರು: ಡಾ.ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಸಂಸ್ಮರಣಾ 30ನೇ ಸಂಗೀತ ಸಮ್ಮೇಳನವು ಡಿ. 2ರಿಂದ 6ರವರೆಗೆ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳ ಸಾನ್ನಿಧ್ಯದಲ್ಲಿ ಮೈಸೂರಿನಲ್ಲಿ ಜರುಗಲಿದೆ. 5 ದಿನಗಳ ಸಮ್ಮೇಳನದಲ್ಲಿ ಪ್ರತಿದಿನ ಸಂಜೆ ನಾಡಿನ ಒಳಗಿನ ಹಾಗೂ ಹೊರಗಿನ ಖ್ಯಾತ ನಾಮರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ ಹಾಗೂ ಬೆಳಗಿನ ವಿದ್ವತ್ ಗೋಷ್ಠಿಯ ಮೊದಲಿಗೆ ಸಂಗೀತಾಂಜಲಿ ಜರುಗಲಿದೆ. 30ನೆಯ ಸಮ್ಮೇಳನದ ಅಧ್ಯಕ್ಷರಾಗಿ ಕರ್ನಾಟಕ ಶಾಸ್ತ್ರೀಯ ಸಂಗೀತದ ದಿಗ್ಗಜರಾದ ಡಾ.ಟಿ.ಎಸ್.ಸತ್ಯವತಿ ಆಗಮಿಸಲಿದ್ದಾರೆ. ಸಮ್ಮೇಳನದ ಉದ್ಘಾಟನೆ ಹಾಗೂ ಸಮಾರೋಪ ಸಮಾರಂಭದಲ್ಲಿ ಸಚಿವರು, ಸಂಸದರು, ಶಾಸಕರು ಭಾಗವಹಿಸಲಿದ್ದಾರೆ.

ಇಂದು ವಿದ್ಯುತ್ ವ್ಯತ್ಯಯ

ಮೈಸೂರು,ನ.20–ತಾಯೂರು ವಿದ್ಯುತ್ ವಿತರಣಾ ಕೇಂದ್ರದಲ್ಲಿ ತ್ರೈಮಾಸಿಕ ನಿರ್ವಹಣಾ ಕಾರ್ಯ ನಿಮಿತ್ತ ನವೆಂಬರ್ 21ರಂದು ಬೆಳಗ್ಗೆ 10ರಿಂದ ಸಂಜೆ 6ರವರೆಗೆ ತಾಯೂರು, ಗೆಜ್ಜಗನಹಳ್ಳಿ, ವಡ್ಡರ ಹುಂಡಿ, ಈಶ್ವರಗೌಡನಹಳ್ಳಿ, ಕೊಟ್ಟರಾಯನಹುಂಡಿ, ಬೀರಿಹುಂಡಿ, ಕಲ್ಕುಂದ, ಕಾಮಳ್ಳಿ, ಮತ್ತು ಗ್ರಾಪಂ ವ್ಯಾಪ್ತಿಯ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಸೆಸ್ಕ್‌ನ ಪತ್ರಿಕಾ ಪ್ರಕಟಣೆ ತಿಳಿಸಿದೆ.



ವಿದ್ಯಾವರ್ಧಕ ಕಾಲೇಜಲ್ಲಿ ಎಂಸಿಎ ವಿಭಾಗ ಉದ್ಘಾಟನೆ ಇಂದು

ಮೈಸೂರು, ನ.20–ಮೈಸೂರಿನ ಶೇಷಾದ್ರಿ ಅಯ್ಯರ್ ರಸ್ತೆಯಲ್ಲಿರುವ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನಲ್ಲಿ ನ.21ರಂದು ಬೆಳಗ್ಗೆ 9.30ಕ್ಕೆ ಎಂಸಿಎ ವಿಭಾಗದ ಉದ್ಘಾಟನೆ ಹಾಗೂ 2025–26ನೇ ತಂಡದ ಅಭಿವಿನ್ಯಾಸ ಕಾರ್ಯಕ್ರಮ ಏರ್ಪಡಿಸಲಾಗಿದೆ. ಕಾಲೇಜಿನ ಪಿ.ಎಂ.ಚಿಕ್ಕ ಬೋರಯ್ಯ ಸಭಾಂಗಣದಲ್ಲಿ ನಡೆಯಲಿರುವ ಕಾರ್ಯಕ್ರಮವನ್ನು ಮೈಸೂರು ವಿವಿ ಗಣಕ ವಿಜ್ಞಾನ ವಿಭಾಗದ ಹಿರಿಯ ಪ್ರಾಧ್ಯಾಪಕ ಡಾ.ಡಿ.ಎನ್.ಗುರು ಉದ್ಘಾಟಿಸಲಿದ್ದು, ವಿದ್ಯಾವರ್ಧಕ ಸಂಘದ ಗೌರವ ಅಧ್ಯಕ್ಷ ಗುಂಡಪ್ಪಗೌಡರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಸಂಘದ ಗೌರವ ಕಾರ್ಯದರ್ಶಿ ಪಿ.ವಿಶ್ವನಾಥ್, ಖಜಾಂಚಿ ಶ್ರೀಶೈಲ ರಾಮಣ್ಣನವರ್, ಕಾಲೇಜು ನಿರ್ವಹಣಾ ಸಮಿತಿ ಅಧ್ಯಕ್ಷ ಟಿ.ನಾಗರಾಜು ಆಗಮಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಜನರ ಪಾಲ್ಗೊಳ್ಳುವಿಕೆಯಿಂದ ಸರ್ಕಾರದ ಯೋಜನೆ ಉದ್ದೇಶ ಸಾರ್ಥಕ

ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಡಿ.ಆರ್.ಪಾಟೀಲ್ ಅಭಿಮತ

ಮೈಸೂರು,ನ.20(ಎಂಟಿವೈ)– ಸಾರ್ವಜನಿಕರ ಶ್ರೇಯೋಭಿವೃದ್ಧಿಗಾಗಿ ಸರ್ಕಾರ ಜಾರಿಗೊಳಿಸುವ ಯಾವುದೇ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಅಧಿಕಾರಿಗಳು ಬದ್ಧತೆಯಿಂದ ಕಾರ್ಯನಿರ್ವಹಿಸಬೇಕು ಎಂದು ಕರ್ನಾಟಕ ವಿಕೇಂದ್ರೀಕೃತ ಯೋಜನೆ ಮತ್ತು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಡಿ.ಆರ್.ಪಾಟೀಲ್ ಸಲಹೆ ನೀಡಿದ್ದಾರೆ.



ಮೈಸೂರು ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಕರ್ನಾಟಕ ವಿಕೇಂದ್ರೀಕೃತ ಯೋಜನೆ ಮತ್ತು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಡಿ.ಆರ್.ಪಾಟೀಲ್ ಮೈಸೂರು ವಿಭಾಗ ಮಟ್ಟದ ಅಧಿಕಾರಿಗಳ ಸಭೆ ನಡೆಸಿದರು.

ಮೈಸೂರು ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಬುಧವಾರ ಮೈಸೂರು ವಿಭಾಗ ಮಟ್ಟದ ಅಧಿಕಾರಿಗಳ ಸಭೆ ನಡೆಸಿ ಮಾತನಾಡಿದ ಅವರು, ಸರ್ಕಾರದ ಯೋಜನೆಗಳ ಜಾರಿಗೆ ತಂದರೆ ಅದರ ಹಿಂದಿನ ಉದ್ದೇಶ ಸಾರ್ವಜನಿಕರ ಅಭಿವೃದ್ಧಿಯೇ ಆಗಿರುತ್ತದೆ. ಆ ಕಾರಣದಿಂದ ವಿವಿಧ ಯೋಜನೆ ರೂಪಿಸುತ್ತದೆ. ಸರ್ಕಾರದ ಯೋಜನೆಗಳಲ್ಲಿ ಸಾರ್ವಜನಿಕರ ಪಾಲ್ಗೊಳ್ಳುವಿಕೆ ಇರಬೇಕು. ಆಗ ಮಾತ್ರ ಯೋಜನೆಯ ಉದ್ದೇಶ ಸಾಕಾರಗೊಳ್ಳುತ್ತದೆ. ಅಲ್ಲದೆ, ಅಧಿಕಾರಿಗಳು ಕಾನೂನು ಬದ್ಧವಾಗಿ, ಬದ್ಧತೆಯಿಂದ ಕೆಲಸ ಮಾಡಿದರೆ ಅಭಿವೃದ್ಧಿ ಕಾರ್ಯ ಯಶಸ್ವಿಯಾಗುತ್ತದೆ ಎಂದರು.

ಕೆಲವು ವಿಚಾರಗಳಲ್ಲಿ ಜನರ ನಿರೀಕ್ಷೆ ಮತ್ತು ಬೇಡಿಕೆ ಹೆಚ್ಚಾಗಿರುತ್ತದೆ. ಇಂತಹ ಸಂದರ್ಭದಲ್ಲಿ ಜನರಿಂದ ಮಾಹಿತಿ ಪಡೆದು ಯೋಜನೆ ರೂಪಿಸುವುದು ಕಷ್ಟಕರವಾಗಿರುತ್ತದೆ. ಆದ್ದರಿಂದ ಯೋಜನೆ ರೂಪಿಸುವಾಗ ಯಾವ ವಿಷಯಕ್ಕೆ ಆದ್ಯತೆ ನೀಡಬೇಕು ಎಂಬ ಅಂಶ ತಿಳಿಸಬೇಕು. ಅಲ್ಲದೆ, ಯೋಜನೆ ಅನುಷ್ಠಾನಗೊಂಡಾಗ ಯಾವ ಫಲಾನುಭವಿಗೆ ಆದ್ಯತೆ ನೀಡಬೇಕು ಎನ್ನುವುದನ್ನು ಅರಿಯಬೇಕು ಎಂದರು.

ಸರ್ಕಾರ ಜಾರಿಗೊಳಿಸುವ ಯೋಜನೆಗಳಲ್ಲಿ ಜನರ ಪಾಲ್ಗೊಳ್ಳುವಿಕೆಯಿಂದ ಜನೋಪಯೋಗಿ ಕೆಲಸ ಮಾಡಬಹುದು ಎಂಬ ಆಶಯದೊಂದಿಗೆ ಸಭೆಗಳನ್ನು ನಡೆಸುತ್ತಿದ್ದು, ಜಿಲ್ಲಾ ಯೋಜನಾ ವಿವರಗಳನ್ನು ಆಯವ್ಯಯಕ್ಕೂ ಮುನ್ನ ಮಾನ್ಯ ಮುಖ್ಯಮಂತ್ರಿಗಳಿಗೆ ನೀಡಲು ಸಿದ್ಧತೆ ಮಾಡಿಕೊಳ್ಳಬೇಕು ಎಂದು ಸೂಚಿಸಿದರು.

ಗ್ರಾಮ ಸಭೆಯಲ್ಲಿ ಜನರ ಪಾಲ್ಗೊಳ್ಳುವಿಕೆ ಉತ್ತಮವಾಗಿದೆ. ನಗರ ಪ್ರದೇಶದಲ್ಲಿ ಜನರ ಪಾಲ್ಗೊಳ್ಳುವಿಕೆ ಕಾಣುತ್ತಿಲ್ಲ. ಆದ್ದರಿಂದ ನಗರ ಸ್ಥಳೀಯ ಸಂಸ್ಥೆಗಳ ಮುಖ್ಯಸ್ಥರು ಡಿ.6ರೊಳಗೆ 100 ಮತಗಳಿಗೆ ಇಬ್ಬರನ್ನು ಆಯ್ಕೆ ಮಾಡಿ ನೆಯ್ಬರ್ ವುಡ್ ಗ್ರೂಪ್ ರಚಿಸಿ ನಂತರ ವಾರ್ಡ್ ಸಭೆ ಆಯೋಜಿಸಿ ನಗರ ಪ್ರದೇಶದ ಯೋಜನೆಗಳನ್ನು ರೂಪಿಸಲು ಕ್ರಮ ಕೈಗೊಳ್ಳುವಂತೆ ಸಲಹೆ ನೀಡಿದರು. ಸಭೆಯಲ್ಲಿ ಮಂಡ್ಯ ಜಿಲ್ಲಾಧಿಕಾರಿ ಡಾ.ಕುಮಾರ್, ಮೈಸೂರು ಜಿ.ಪಂ. ಸಿಇಓ ಯುಕೇಶ್‌ಕುಮಾರ್, ಚಾಮರಾಜನಗರ, ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ತಮ್ಮ ಜಿಲ್ಲೆಗಳ ಯೋಜನೆಯ ವಿವರಗಳನ್ನು ವಿವರಿಸಿದರು. ಸಭೆಯಲ್ಲಿ ಮೈಸೂರು ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ ಸೇರಿದಂತೆ ಮೈಸೂರು ವಿಭಾಗದ ವಿವಿಧ ಜಿಲ್ಲೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

ವರ್ತಮಾನದ ತಲ್ಲಣಗಳಿಗೆ ಕುವೆಂಪು ವಿರಚಿತ ನಾಡಗೀತೆಯಲ್ಲಿದೆ ಪರಿಹಾರ

'ಶತವರುಷದ ಶುಭನಾಡಗೀತೆ' ಶೀರ್ಷಿಕೆಯ ಗಾಯನ ಕಾರ್ಯಕ್ರಮದಲ್ಲಿ ಜಾನಪದ ವಿದ್ವಾಂಸ ಮೈಸೂರು ಕೃಷ್ಣಮೂರ್ತಿ ಅಭಿಮತ

ಮೈಸೂರು,ನ.20(ಪಿಎಂ)– ಶತಮಾನದ ಹಿಂದೆಯೇ ರಚನೆಯಾಗಿರುವ ರಾಷ್ಟ್ರಕವಿ ಕುವೆಂಪು ವಿರಚಿತ 'ನಾಡಗೀತೆ'ಯಲ್ಲಿರುವ ಸತ್ವವು ವರ್ತಮಾನದ ತಲ್ಲಣಗಳಿಗೆ ಸೂಕ್ತ ಪರಿಹಾರಗಳನ್ನು ಸೂಚಿಸುತ್ತದೆ ಎಂದು ಜಾನಪದ ವಿದ್ವಾಂಸ ಮೈಸೂರು ಕೃಷ್ಣಮೂರ್ತಿ ಹೇಳಿದರು.

ಮೈಸೂರಿನ ಕಲಾಮಂದಿರದ ಕಿರುರಂಗಮಂದಿರ ಆವರಣದಲ್ಲಿ ಮಹಾರತ್ನ ಟ್ರಸ್ಟ್ ವತಿಯಿಂದ ರಾಜ್ಯೋತ್ಸವ ಪ್ರಯುಕ್ತ 'ಶತವರುಷದ ಶುಭನಾಡಗೀತೆ; ಹಾಡುವ ಕಂಠದ ಅನುಪಮಾ ಸಂಗಮ' ಶೀರ್ಷಿಕೆಯಡಿ ಹಮ್ಮಿಕೊಂಡಿದ್ದ 100ಕ್ಕೂ ಹೆಚ್ಚು ಗಾಯಕರಿಂದ ನಾಡಗೀತೆ ಸಾದರಪಡಿಸುವ ವಿನೂತನ ಕಾರ್ಯಕ್ರಮದಲ್ಲಿ ಅವರು ಆಶಯ ನುಡಿಗಳನ್ನಾಡಿದರು.

ನಾಡಗೀತೆಯಲ್ಲಿನ 'ಸರ್ವ ಜನಾಂಗದ ಶಾಂತಿಯ ತೋಟ' ಎನ್ನುವ ಸಾಲು ಈ ದೇಶ ಉಳಿಸಿ ಬೆಳೆಸಲು ಇರುವ ಪರಮ ಸೂತ್ರವೇ ಸರಿ. ಇಲ್ಲಿನ ತೋಟ ಮತ್ತು ಉದ್ಯಾನಗಳ ರೂಪಕ ಬಹುತ್ವವನ್ನು ಗೌರವಿಸುವ ಮತ್ತು ರಕ್ಷಿಸುವ ಧೋರಣೆಯನ್ನು ಅನಾವರಣಗೊಳಿಸುತ್ತದೆ. ಈ ದೇಶದ ಹಿತ ಕಾಯಲು ಅಗತ್ಯವಾದ ಎಲ್ಲಾ ಸಿದ್ಧಾಂತಗಳನ್ನು ಕಾವ್ಯಾತ್ಮಕವಾಗಿ ರಾಷ್ಟ್ರಗೀತೆಯಲ್ಲಿ ನಿರೂಪಣೆ ಮಾಡಲಾಗಿದೆ. ಕನ್ನಡ ನಾಡು–ನುಡಿಯ ಬಗ್ಗೆ ಅಭಿಮಾನ ಮೆರೆಯುವ ಅನೇಕ ಗೀತೆಗಳನ್ನು ಕುವೆಂಪು ಅವರು ಮಾತ್ರವಲ್ಲದೆ, ಬೇರೆ ಕವಿಗಳು ಬರೆದಿದ್ದಾರೆ. ಆದರೆ ನಾಡಗೀತೆಯಾಗುವ ಅರ್ಹತೆ ಪೂರ್ಣ ಪ್ರಮಾಣದಲ್ಲಿ ಇರುವುದು ಕುವೆಂಪು ವಿರಚಿತ ಈ ಗೀತೆಗೆ ಮಾತ್ರವೇ ಎಂದರೆ ಉತ್ಪ್ರೇಕ್ಷೆಯಲ್ಲ ಎಂದು ಹೇಳಿದರು.



ಮೈಸೂರಿನ ಕಲಾಮಂದಿರದ ಕಿರುರಂಗಮಂದಿರದ ಆವರಣದಲ್ಲಿ ಏರ್ಪಡಿಸಿದ್ದ 'ಶತವರುಷದ ಶುಭನಾಡಗೀತೆ' ಗಾಯನ ಕಾರ್ಯಕ್ರಮವನ್ನು ಗಣ್ಯರು ಉದ್ಘಾಟಿಸಿದರು.

ಕನ್ನಡ ಮತ್ತು ಕರ್ನಾಟಕ ಎನ್ನುವುದು ಕುವೆಂಪು ಅವರಿಗೆ ಕೇವಲ ಭಾಷೆ ಮತ್ತು ಭೂ ಭಾಗವಲ್ಲ. ಅವರೇ ಹೇಳಿರುವಾಗೆ ಅದು ಶಕ್ತಿ, ಮಂತ್ರ, ತಾಯಿ ಹಾಗೂ ದೇವಿ ಎಲ್ಲವೂ ಆಗಿದೆ. 'ಕರ್ಣಾಟ ರಾಷ್ಟ್ರಗೀತೆ' ಎಂಬ ಹೆಸರಿನಲ್ಲಿ ಮೊದಲು ಕುವೆಂಪು ಅವರು ನಾಡಗೀತೆ ರಚನೆ ಮಾಡಿದ್ದರು. ಅವರೇ ತಮ್ಮ 'ನೆನಪಿನ ದೋಣಿಯಲ್ಲಿ' ಆತ್ಮಕಥೆಯಲ್ಲಿ ಈ ಬಗ್ಗೆ ಮಾಹಿತಿ ನೀಡಿದ್ದಾರೆ. ಅವರ ಈ ಆತ್ಮಕಥೆಯಲ್ಲಿ ಕವನಗಳು ರಚನೆಗೊಂಡ ದಿನಾಂಕಗಳ ಬಗ್ಗೆ ಮಾಹಿತಿ ಒದಗಿಸಿದ್ದಾರೆ. ಅಂದಿನ 'ಕರ್ಣಾಟ ರಾಷ್ಟ್ರಗೀತೆ' ಪರಿಷ್ಕರಣೆಯಾಗುತ್ತ ಪ್ರಸ್ತುತ ನಾವು ಹಾಡುವ ರೂಪ ಪಡೆದಿದೆ ಎಂದರು.

ಬಹುಶಃ ಸಾಮಾನ್ಯ ಜನರು ಈ ನಾಡಗೀತೆಯನ್ನು ಮೊದಲಿಗೆ ಕೇಳಿದ್ದು 1963ರಲ್ಲಿ ಬಿಡುಗಡೆಗೊಂಡ ಡಾ.ರಾಜ್‌ಕುಮಾರ್ ಅಭಿನಯದ 'ಮನಮೆಚ್ಚಿದ ಮಡದಿ' ಚಿತ್ರದಲ್ಲಿ. ವಿಜಯ ಭಾಸ್ಕರ್ ಅವರ ಸಂಗೀತ ನಿರ್ದೇಶನದಲ್ಲಿ ಪಿ.ಬಿ.ಶ್ರೀನಿವಾಸ್ ಅವರು ಅದ್ಭುತವಾಗಿ ಹಾಡಿದ್ದಾರೆ. ಬಹಶಃ ಈ ನಾಡಗೀತೆ ಹೆಚ್ಚಿನ ಜನರನ್ನು ತಲುಪಿದ್ದು ಈ ಸಿನಿಮಾದ ಮೂಲಕವೇ ಇರಬೇಕು ಎಂದು ತಿಳಿಸಿದರು.

ಕುವೆಂಪು ಅವರು ಏಕಕಾಲಕ್ಕೆ ಕನ್ನಡದ ಕವಿ ಮಾತ್ರವಲ್ಲದೆ, ರಾಷ್ಟ್ರ ಹಾಗೂ ವಿಶ್ವಕವಿಯಾಗಿದ್ದಾರೆ. ಈ ಲೋಕದಲ್ಲಿ ಬಾಳಬೇಕಾದ ನಿಜವಾದ ಜೀವನ ಸಿದ್ಧಾಂತವನ್ನು ನಾವು ಕುವೆಂಪು ಅವರ ನಾಡಗೀತೆಗಳಲ್ಲಿ ಕಾಣಬಹುದು. ನಮ್ಮ ದೇಶದ ಒಕ್ಕೂಟ ವ್ಯವಸ್ಥೆಯ ಅಸ್ತಿತ್ವದ ಮುಖ್ಯ ನೆಲೆಯನ್ನು ನಮ್ಮ ಈ ನಾಡಗೀತೆ ಅನಾವರಣಗೊಳಿಸುತ್ತದೆ ಎಂದರು.

> “ನಮ್ಮ ಸಂವಿಧಾನದ ಧ್ಯೇಯವಾಕ್ಯವಾದ 'ಭಾರತೀಯ ಪ್ರಜೆಗಳಾದ ನಾವು (ವೀ ದ ಪೀಪಲ್ ಆಫ್ ಇಂಡಿಯಾ)' ಎನ್ನುವುದನ್ನು ನಮ್ಮ ನಾಡಗೀತೆ ತನ್ನ ಒಳಹೂರಣದಲ್ಲಿ ಸಾರುತ್ತದೆ. ಭಾರತದ ಅಸ್ಮಿತೆ ಹಾಗೂ ಕರ್ನಾಟಕದ ಅನನ್ಯತೆ ಎರಡನ್ನೂ ನಾಡಗೀತೆ ಬಿತ್ತರಗೊಳಿಸುವ ಮೂಲಕ ಸಂವಿಧಾನ ಆಶಯವನ್ನು ಸ್ವಾತಂತ್ರ್ಯ ಮತ್ತು ಸಂವಿಧಾನ ಅಸ್ತಿತ್ವಕ್ಕೆ ಬರುವ ಮುನ್ನವೇ ಅನಾವರಣಗೊಳಿಸಿದ್ದು, ಇದು ಕುವೆಂಪು ಅವರ ದರ್ಶನದ ಅತ್ಯಂತ ಮಹತ್ವದ ಸಂಗತಿ ಎಂದೇ ಭಾವಿಸಬೇಕು. **–ಮೈಸೂರು ಕೃಷ್ಣಮೂರ್ತಿ**

ಬಳಿಕ 100ಕ್ಕೂ ಹೆಚ್ಚು ಗಾಯಕರು ನಾಡಗೀತೆ ಸಾದರಪಡಿಸಿದರು. ಅಲ್ಲದೆ, ಕನ್ನಡಾಭಿಮಾನ ಮೆರೆಯುವ ನಿತ್ಯೋತ್ಸವ ಹಾಗೂ ಹಚ್ಚೇವು ಕನ್ನಡದ ದೀಪ ಸೇರಿದಂತೆ ಮೊದಲಾದ ಗೀತೆಗಳನ್ನು ಪ್ರಸ್ತುತಪಡಿಸಲಾಯಿತು.

ನಂತರ ಇದೇ ಸಂಸ್ಥೆಯಿಂದ ಕಿರುರಂಗ ಮಂದಿರ ಒಳಾವರಣದಲ್ಲಿ ನಡೆದ 'ಬಾರಯ್ಯ ಬೆಳದಿಂಗಳೇ' ಶೀರ್ಷಿಕೆಯ ಜನಪದ ಗಾಯನ ಕಾರ್ಯಕ್ರಮದಲ್ಲಿ ಜಿಲ್ಲಾ ಸಹಕಾರಿ ಯೂನಿಯನ್ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್ ಹಾಗೂ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಅವರಿಗೆ 'ಕನ್ನಡರತ್ನ' ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮೇಲುಕೋಟೆಯ ವಂಗೀಪುರಂ ನಂಬಿಮಠದ ಇಳೈ ಆಳ್ವಾರ್ ಸ್ವಾಮೀಜಿ, ಸಮಾಜ ಸೇವಕ ರಘುರಾಮ ವಾಜಪೇಯಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಡಾ.ವಿ.ಎನ್.ಮಲ್ಲಿಕಾರ್ಜುನಸ್ವಾಮಿ, ಸಾಹಿತಿ ವಿದ್ವಾನ್ ಸುರೇಶ್, ಕರ್ನಾಟಕ ಜಾನಪದ ಅಕಾಡೆಮಿ ಸದಸ್ಯ ಡಾ.ಮೈಸೂರು ಉಮೇಶ್, ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಮಾಜಿ ಮೇಯರ್ ಬಿ.ಎಲ್.ಭೈರಪ್ಪ, ಅಗಸ್ತ್ಯ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ ಅಧ್ಯಕ್ಷ ಎಂ.ಡಿ.ಗೋಪಿನಾಥ್, ಕನ್ನಡ ಉಪನ್ಯಾಸಕ ಜಿ.ಆರ್. ಶ್ರೀವತ್ಸ, ಟ್ರಸ್ಟ್ ಅಧ್ಯಕ್ಷ ಮೈಸೂರು ಮಹಾಲಿಂಗ, ಕಾರ್ಯದರ್ಶಿ ರೂಪ, ಖಜಾಂಚಿ ನಾಗರತ್ನ ಮತ್ತಿತರರು ಹಾಜರಿದ್ದರು.

ಇಂದು ರಾಜ್ಯಾದ್ಯಂತ ಫುಲ್ ಮೀಲ್ಸ್ ಬಿಡುಗಡೆ

ಛಾಯಾಗ್ರಾಹಕ ಆಕ್ಷೇಪ, ಚಿತ್ರ ತಂಡದಿಂದ ಕ್ಷಮೆಯಾಚನೆ

ಮೈಸೂರು,ನ.20(ಜಿಎ)–ಪ್ರತಿಯೊಬ್ಬ ಛಾಯಾಚಿತ್ರ ಗ್ರಾಹಕರ ಜೀವನಕ್ಕೆ ಹತ್ತಿರವಾದ ಕಥೆಯ ಎಳೆಯುಳ್ಳ 'ಫುಲ್ ಮೀಲ್ಸ್' ಚಲನಚಿತ್ರ ನ.21ರಂದು ರಾಜ್ಯದಾದ್ಯಂತ ತೆರೆ ಕಾಣಲಿದೆ ಎಂದು ನಿರ್ದೇಶಕ ಎನ್.ವಿನಾಯಕ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಛಾಯಾಗ್ರಾಹಕನ ಜೀವನ ಪಯಣ ವಿಶಿಷ್ಟ ರೀತಿಯದ್ದಾಗಿದೆ. ಸಂಕಷ್ಟಹರ ಗಣಪತಿ, ಫ್ಯಾಮಿಲಿ ಪ್ಯಾಕ್, ಅಬ್ಬಬ್ಬ ಖ್ಯಾತಿಯ ನಟ ಲಿಖಿತ್ ಶೆಟ್ಟಿ ನಾಯಕ ನಟರಾಗಿ ನಟಿಸಿದ್ದು, ನಾಯಕಿಯರಾಗಿ ಖುಷಿ ರವಿ ಹಾಗೂ ತೇಜಸ್ವಿನಿ ನಟಿಸಿದ್ದಾರೆ. ವೆಡ್ಡಿಂಗ್ ಫೋಟೋಗ್ರಾಫರ್‌ನ ಸುತ್ತ ಸುತ್ತುವ ಕಥಾ ಹಂದರ ಈ ಚಿತ್ರ ಹೊಂದಿದೆ. ಪೂರ್ಣ ರೋಮ್ಯಾಂಟಿಕ್ ಹಾಗೂ ಹಾಸ್ಯಮಯ ಚಲನಚಿತ್ರವಾಗಿದೆ. ಹೀಗಾಗಿ ಸಿನಿಮಾ ಪ್ರೇಕ್ಷಕರು ಚಿತ್ರಮಂದಿರಕ್ಕೆ ಆಗಮಿಸಿ, ಚಿತ್ರ ವೀಕ್ಷಿಸಬೇಕೆಂದು ಕೋರಿದರು. ನಟ ಲಿಖಿತ್ ಶೆಟ್ಟಿ, ನಾಯಕಿ ನಟಿಯರಾದ ಖುಷಿ ರವಿ, ತೇಜಸ್ವಿನಿ ಉಪಸ್ಥಿತರಿದ್ದರು.

ಅಸಂಬದ್ಧ ಪದ ಬಳಕೆಗೆ ವಿರೋಧ: ಪತ್ರಕರ್ತರ ಭವನದಲ್ಲಿ ಜಿಲ್ಲಾ ಛಾಯಾಗ್ರಾಹಕರು ಹಾಗೂ ವೀಡಿಯೊಗ್ರಾಫರ್‌ಗಳ ಸಂಘದ ಜಿಲ್ಲಾಧ್ಯಕ್ಷ ಬಿ.ವಿಜಯ್ ಮಾತನಾಡಿ, 'ಫುಲ್ ಮೀಲ್ಸ್' ಚಲನಚಿತ್ರದಲ್ಲಿ ವೆಡ್ಡಿಂಗ್ ಫೋಟೋಗ್ರಾಫರ್‌ಗಳೆಲ್ಲ ಫ್ಲರ್ಟ್‌ಗಳು ಎಂಬ ಅಸಂಬದ್ಧ ಪದ ಬಳಸಲಾಗಿದೆ. ಇದು ಸಮಾಜದಲ್ಲಿ ತಪ್ಪು ಸಂದೇಶ ಹರಡುತ್ತಿದೆ. ಹೀಗಾಗಿ ಈ ವಾಕ್ಯ ತೆಗೆಯದಿದ್ದರೆ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಸಿದರು.

ಚಿತ್ರದಲ್ಲಿ ನಾಯಕಿ ನಟಿ ಈ ಮಾತನ್ನು ಹೇಳುತ್ತಾಳೆ. ಇದು ಎಲ್ಲ ಛಾಯಾಗ್ರಾಹಕರನ್ನು ಅಪಮಾನಿಸುತ್ತದೆ. ಜೊತೆಗೆ ವಿವಾಹ ಸಮಾರಂಭ ಮೊದಲಾದವುಗಳಿಗೆ ಛಾಯಾಗ್ರಾಹಕರನ್ನು ಕರೆಯುವ ಬಗ್ಗೆ ಜನತೆ ಹಿಂದೆ ಮುಂದೆ ನೋಡುವಂತಾಗುತ್ತದೆ. ಆದ್ದರಿಂದ ಆ ವಾಕ್ಯ ತೆಗೆದುಹಾಕಬೇಕೆಂದು ಆಗ್ರಹಿಸಿದರು.

ಚಿತ್ರ ತಂಡದಿಂದ ಕ್ಷಮೆಯಾಚನೆ: 'ಫುಲ್ ಮೀಲ್ಸ್' ಚಿತ್ರ ತಂಡ ಸುದ್ದಿಗೋಷ್ಠಿ ಪೂರ್ಣಗೊಂಡ ನಂತರ ಜಿಲ್ಲಾ ಛಾಯಾಗ್ರಾಹಕರು ಹಾಗೂ ವೀಡಿಯೊಗ್ರಾಫರ್‌ಗಳ ಸಂಘದ ಪದಾಧಿಕಾರಿಗಳನ್ನು ಭೇಟಿ ಮಾಡಿ ಪಾತ್ರಕ್ಕೆ ಆ ಪದ ಅವಶ್ಯಕತೆ ಇತ್ತು ಈ ಹಿನ್ನೆಲೆಯಲ್ಲಿ ಬಳಸಲಾಗಿದೆ. ಇದರಿಂದ ನೋವಾಗಿದ್ದರೆ ಕ್ಷಮೆ ಇರಲಿ ಎಂದರು.

ಛಾಯಾಗ್ರಹಕರಿಗೆ ಚಿತ್ರದಲ್ಲಿ ಅಗೌರವ ತೋರಿಲ್ಲ. ಬದಲಾಗಿ ಉತ್ತಮ ಸಂದೇಶ ನೀಡಲಾಗಿದೆ. ಸಂಜೆ ಛಾಯಾಗ್ರಾಹಕರಿಗಾಗಿ ವಿಶೇಷ ಪ್ರೀಮಿಯರ್ ಆಯೋಜಿಸಲಾಗಿದೆ ನೋಡಿ ನಂತರ ನೀವೇ ನಿರ್ಧರಿಸಿ ಎಂದು ಚಿತ್ರದ ನಿರ್ದೇಶಕ ತಿಳಿಸಿದರು. ಈ ವೇಳೆ ಸಂಘದ ಪದಾಧಿಕಾರಿಗಳನ್ನು ಚಿತ್ರ ನೋಡಲು ನಿರ್ಧರಿಸಿದರು. ಪದಾಧಿಕಾರಿಗಳಾದ ಸಂತೋಷ್, ಉಮಾ ಶಂಕರ್, ಉಮೇಶ್ ಇದ್ದರು.

ಅರಣ್ಯದ ಬಗ್ಗೆ ಗಿರಿಜನರಿಗಿರುವ ಜ್ಞಾನ ಅರಿಯಬೇಕು

ಸಂಶೋಧಕರಿಗೆ ಪರಿಸರ ವಿಜ್ಞಾನ ಸಂಸ್ಥೆ ಯೋಜನಾ ನಿರ್ದೇಶಕ ಡಾ.ಸಿ. ಮಾದೇಗೌಡ ಸಲಹೆ



ಮೈಸೂರಿನ ಭಾರತೀಯ ಭಾಷಾ ಸಂಸ್ಥಾನದ ಸಭಾಂಗಣದಲ್ಲಿ ಜನಜಾತೀಯ ಗೌರವ ದಿವಸದ ಅಂಗವಾಗಿ ಆಯೋಜಿಸಿದ್ದ ಭಾಷೆ, ಸಂಸ್ಕೃತಿ ಮತ್ತು ಜ್ಞಾನ ಪದ್ಧತಿಗಳ ಕುರಿತ 2 ದಿನಗಳ ರಾಷ್ಟ್ರೀಯ ವಿಚಾರ ಗೋಷ್ಠಿಯನ್ನು ಭಾರತೀಯ ಭಾಷಾ ಸಂಸ್ಥಾನದ ನಿರ್ದೇಶಕ ಪ್ರೊ.ಶೈಲೇಂದ್ರ ಮೋಹನ್ ಉದ್ಘಾಟಿಸಿದರು.

ಮೈಸೂರು, ನ.20(ಬಿಎಲ್‌ಯು)– ಅರಣ್ಯದ ಬಗ್ಗೆ ಗಿರಿಜನರಿಗಿರುವ ಜ್ಞಾನವನ್ನು ಸಂಶೋಧಕರು ಕೇಳಿ ತಿಳಿದುಕೊಳ್ಳಬೇಕು ಬಿಳಿಗಿರಿರಂಗನಬೆಟ್ಟದ ಅಶೋಕ ಪರಿಸರ ಸಂಶೋಧನಾ ಮತ್ತು ಪರಿಸರ ವಿಜ್ಞಾನ ಸಂಸ್ಥೆ ಯೋಜನಾ ವ್ಯವಸ್ಥಾಪಕ ಡಾ.ಸಿ.ಮಾದೇಗೌಡ ಸಲಹೆ ನೀಡಿದರು.

ಮೈಸೂರಿನ ಹುಣಸೂರು ರಸ್ತೆಯ ಭಾರತೀಯ ಭಾಷಾ ಸಂಸ್ಥಾನದ ಸಭಾಂಗಣದಲ್ಲಿ ಇಂದು ಜನಜಾತೀಯ ಗೌರವ ದಿವಸದ ಅಂಗವಾಗಿ ಆಯೋಜಿಸಿದ್ದ ಭಾಷೆ, ಸಂಸ್ಕೃತಿ ಮತ್ತು ಜ್ಞಾನ ಪದ್ಧತಿಗಳ ಕುರಿತ ಎರಡು ದಿನಗಳ ರಾಷ್ಟ್ರೀಯ ವಿಚಾರಗೋಷ್ಠಿಯಲ್ಲಿ ಮಾತನಾಡಿದ ಅವರು, ಅರಣ್ಯದಲ್ಲಿರುವ ಮರ, ಗಿಡಗಳು, ಪ್ರಾಣಿ, ಪಕ್ಷಿಗಳು, ಜಲಪಾತಗಳು ಸೇರಿದಂತೆ ಬಹಳಷ್ಟು ವಿಚಾರಗಳು ಗಿರಿಜನರಿಗೆ ತಿಳಿದಿದೆ. ಪ್ರಾಯಶಃ ಈ ವಿಚಾರದ ಬಗ್ಗೆ ಇವರಿಗಿರುವಷ್ಟು ಜ್ಞಾನ ಬೇರೆ ಯಾರಿಗೂ ಇಲ್ಲ ಎಂದು ಅಭಿಪ್ರಾಯಪಟ್ಟರು.

ಈ ಹಿನ್ನೆಲೆ ಗಿರಿಜನರ ಜೊತೆ ಸಮಾಲೋಚನೆ ನಡೆಸಿ ಅರಣ್ಯದ ಬಗ್ಗೆ ಅವರಿಗಿರುವ ಜ್ಞಾನವನ್ನು ತಿಳಿದುಕೊಳ್ಳಬೇಕು. ಜೊತೆಗೆ ಆದಿವಾಸಿಗಳ ಬಗ್ಗೆ ಇರುವ ಜ್ಞಾನವನ್ನು ಗುರುತಿಸಿ ಸಮಾಜಕ್ಕೆ ಹೇಳಬೇಕು ಎಂದು ಡಾ.ಮಾದೇಗೌಡ ಅವರು ಸಂಶೋಧಕರಿಗೆ ಕಿವಿಮಾತು ಹೇಳಿದರು.

1ರಿಂದ 5ನೇ ತರಗತಿವರೆಗಿನ ಶಾಲಾ ಪಠ್ಯದಲ್ಲಿ ಗಿರಿಜನರು ಹಾಗೂ ಅವರ ಅರಣ್ಯ ಜ್ಞಾನದ ಬಗ್ಗೆ ತಿಳಿಸಬೇಕು. ಈ ಮೂಲಕ ಗಿರಿಜನರ ಅರಣ್ಯದ ಜ್ಞಾನವನ್ನು ಪಠ್ಯದ ಮೂಲಕ ಮಕ್ಕಳಿಗೂ ಹೇಳಿಕೊಡಬೇಕು. ಇದರಿಂದ ಕಾಡಿನ ಸೂಕ್ಷ್ಮ ವಿಚಾರಗಳು ಮಕ್ಕಳಿಗೆ ಮನವರಿಕೆ ಆಗಲಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಬುಡಕಟ್ಟು ಸಮುದಾಯಗಳ ಸ್ವಾತಂತ್ರ್ಯ ಹೋರಾಟಗಾರ ಬಿರ್ಸಾ ಮುಂಡಾ ಅವರು ಆದಿವಾಸಿಗಳ ಹಕ್ಕುಗಳಿಗಾಗಿ ಹೋರಾಟ ಮಾಡಿದರು. ಸ್ವಾತಂತ್ರ್ಯ ನಂತರ ಕಾಡಿನಲ್ಲಿದ್ದ ಗಿರಿಜನರನ್ನು ಹೊರಗೆ ಕರೆ ತರಲಾಯಿತು. ಆದರೆ ಅವರಿಗೆ ಭೂಮಿ, ಮನೆ ಸೇರಿದಂತೆ ಯಾವುದೇ ಸೌಲಭ್ಯ ನೀಡಲಿಲ್ಲ. ಕಳೆದ 75 ವರ್ಷಗಳಿಂದ ನಿರಂತರ ಹೋರಾಟ ಮಾಡುತ್ತಿದ್ದರೂ ಸರ್ಕಾರದಿಂದ ಆದಿವಾಸಿಗಳಿಗೆ ದೊರೆಯಬೇಕಾದ ಸೌಲಭ್ಯ ದೊರೆತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಹುಲಿ ಯೋಜನೆ, ಪಕ್ಷಿ ಸಂಕುಲ ವಲಯ, ಮೀಸಲು ಅರಣ್ಯಕ್ಕೆ ಗಡಿರೇಖೆ ಗುರುತಿಸಲಾಗಿದೆ. ಅರಣ್ಯ ಕಾಯ್ದೆ ಪ್ರಕಾರ ಯಾರೂ ಕೂಡ ಇದರೊಳಗೆ ಹೋಗುವಂತಿಲ್ಲ ಎಂಬ ಕಟ್ಟುನಿಟ್ಟಿನ ಕಾನೂನು ಜಾರಿ ಮಾಡಲಾಗಿದೆ. ಆದರೆ ಮೀಸಲು ಅರಣ್ಯದೊಳಗೆ ಗಣಿಗಾರಿಕೆ ನಡೆಯುತ್ತಿದ್ದು, ರಸ್ತೆಗಳಾಗಿವೆ ಎಂದು ಹೇಳಿದರು.

ಅರಣ್ಯದಿಂದ ಹೊರಗೆ ಕರೆತಂದ ಗಿರಿಜನ ಹಾಡಿಗಳಿಗೆ ಸರ್ಕಾರ ಯಾವುದೇ ಸೌಲಭ್ಯ ದೊರಕಿಸಿಲ್ಲ, ಸಮರ್ಪಕ ಕುಡಿಯುವ ನೀರು, ವಿದ್ಯುತ್, ರಸ್ತೆ ಸೇರಿದಂತೆ ಯಾವುದೇ ಸೌಲಭ್ಯ ನೀಡಿಲ್ಲ. ಅನಾರೋಗ್ಯದಿಂದ ಬಳಲುವ ಆದಿವಾಸಿಗಳಿಗೆ ಸೂಕ್ತ ಚಿಕಿತ್ಸೆ ದೊರೆಯುತ್ತಿಲ್ಲ. ಅಲ್ಲದೆ ನಿರುದ್ಯೋಗದ ಸಮಸ್ಯೆ ತಾಂಡವಾಡುತ್ತಿದೆ. ಈ ಹಿನ್ನೆಲೆ ಆದಿವಾಸಿಗಳು ಹಾಡಿ ಬಿಟ್ಟು ನಗರಗಳಿಗೆ ವಲಸೆ ಹೋಗುತ್ತಿದ್ದಾರೆ ಎಂದು ಡಾ.ಮಾದೇಗೌಡ ಆತಂಕ ವ್ಯಕ್ತಪಡಿಸಿದರು.

ನ.23 ಅಥ್ಲೆಟಿಕ್ ಕ್ರೀಡಾಕೂಟ

ಮೈಸೂರು,ನ.20(ಜಿಎ)– ನಿರೀಕ್ಷಾ ಫೌಂಡೇಷನ್ ಟ್ರಸ್ಟ್ ವತಿಯಿಂದ ನ.23ರಂದು ಬೆಳಗ್ಗೆ 8ಕ್ಕೆ ಜಿಲ್ಲಾ ಮಟ್ಟದ ಅಥ್ಲೆಟಿಕ್ ಕ್ರೀಡಾಕೂಟವನ್ನು ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ನಿರೀಕ್ಷಾ ಫೌಂಡೇಷನ್ ಟ್ರಸ್ಟ್ ಅಧ್ಯಕ್ಷ ಸುಭಾಷ್ ಈ ವಿಷಯ ತಿಳಿಸಿ, ನೋಂದಣಿ ಶುಲ್ಕ ತಲಾ 300 ರೂ. ಇದ್ದು, ಇದನ್ನು ಖರ್ಚು ವೆಚ್ಚಕ್ಕೆ ಬಳಸಲಾಗುವುದು. ಎಲ್‌ಕೆಜಿಯಿಂದ ಹತ್ತನೇ ತರಗತಿವರೆಗಿನ ಮಕ್ಕಳು ಪಾಲ್ಗೊಳ್ಳಬಹುದಾಗಿದೆ. ವಿಜೇತರಿಗೆ ಪದಕ, ಪ್ರಮಾಣಪತ್ರ ನೀಡಲಾಗುವುದು ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಕಾರ್ಯಕರ್ತ ಮಂಜುನಾಥ್ ಉಪಸ್ಥಿತರಿದ್ದರು.



2025–26ನೇ ಸಾಲಿನ ಜಿಲ್ಲಾ ಮಟ್ಟದ ಬಾಲಕರ 80 ಮೀ ಹರ್ಡಲ್ಸ್‌ನಲ್ಲಿ ದೊಡ್ಡಕಾನ್ಯ ಸರ್ಕಾರಿ ಪ್ರೌಢಶಾಲೆಯ 8ನೇ ತರಗತಿಯ ವಿದ್ಯಾರ್ಥಿ ಮಲ್ಲಿಕಾರ್ಜುನ ಜಿಲ್ಲೆಗೆ ಪ್ರಥಮ ಸ್ಥಾನ ಗಳಿಸಿ, ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದಾನೆ. ಹಾಸನದಲ್ಲಿ ನಡೆಯುವ ರಾಜ್ಯ ಮಟ್ಟದ ಸ್ಪರ್ಧೆಯಲ್ಲಿ ಹರ್ಡಲ್ಸ್‌ನಲ್ಲಿ ಜಿಲ್ಲೆಯನ್ನು ಪ್ರತಿನಿಧಿಸಲಿದ್ದಾರೆ. ಶಾಲಾ ಎಸ್.ಡಿ.ಎಂ.ಸಿ ಅಧ್ಯಕ್ಷರು ಹಾಗೂ ಸದಸ್ಯರು, ಮುಖ್ಯೋಪಾಧ್ಯಾಯರು, ದೈಹಿಕ ಶಿಕ್ಷಣ ಶಿಕ್ಷಕರು, ಸಹಶಿಕ್ಷಕರ ವತಿಯಿಂದ ಅವರನ್ನು ಅಭಿನಂದಿಸಲಾಯಿತು.

ನ.23 ಬೆಳಕಿನ ಬೇಸಾಯ ಕುರಿತು ಕಾರ್ಯಾಗಾರ

ಮೈಸೂರು,ನ.20(ಜಿಎ)–ಉಳುಮೆ ಪ್ರತಿಷ್ಠಾನದ ವತಿಯಿಂದ ಮೈಸೂರಿನ ಗದ್ದಿಗೆ ರಸ್ತೆಯಲ್ಲಿರುವ ಬನವಾಸಿ ತೋಟದಲ್ಲಿ ನ.23ರಂದು ಬೆಳಕಿನ ಬೇಸಾಯ ಕ್ರಮ ಕುರಿತು ಒಂದು ದಿನದ ಕಾರ್ಯಾಗಾರ ಆಯೋಜಿಸಲಾಗಿದೆ ಎಂದು ಕೃಷಿಕ ಟಿ.ಜಿ.ಎಸ್. ಅವಿನಾಶ್ ತಿಳಿಸಿದರು. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇಂದು ವಾತಾವರಣದಲ್ಲಿ ಸಾಕಷ್ಟು ಬದಲಾವಣೆಯಾಗುತ್ತಿದ್ದು, ಅದಕ್ಕೆ ತಕ್ಕಂತೆ ಕೃಷಿ ಮಾಡಿದರೆ, ರೈತ ಉಳಿದುಕೊಳ್ಳುತ್ತಾನೆ. ಈ ಹಿನ್ನೆಲೆಯಲ್ಲಿ ಕಾರ್ಯಾಗಾರದಲ್ಲಿ ಬೆಳಕಿನ ಬೇಸಾಯ, ರೋಗ ರುಜಿನ ತಡೆಗಟ್ಟಲು ರಾಸಾಯನಿಕ ಮುಕ್ತವಾದ ಕಷಾಯಗಳನ್ನು ತಯಾರಿಸಿಕೊಳ್ಳುವುದು, ಬೆಳಕಿನ ಸದ್ಬಳಕೆ, ರಾಸಾಯನಿಕ ಮುಕ್ತವಾಗಿ ಮಣ್ಣಿನ ಫಲವತ್ತತೆ ಕಾಪಾಡಿಕೊಳ್ಳುವುದು ಎಂಬ ಅನೇಕ ವಿಚಾರಗಳನ್ನು ತಿಳಿಸಿಕೊಡಲಾಗುತ್ತದೆ ಎಂದರು. ಜೊತೆಗೆ ಒಂದು ಎಕರೆ ಪ್ರದೇಶದಲ್ಲಿ ತಿಂಗಳಿಗೆ ಕನಿಷ್ಠ 15 ಸಾವಿರ ರೂ. ಆದಾಯ ಒದಗಿಸುವಂತಹ ಮಾದರಿಗಳನ್ನು ಪರಿಚಯಿಸಲಾಗುತ್ತದೆ. ಭಾಗವಹಿಸುವವರಿಗೆ ನೋಂದಣಿ ಕಡ್ಡಾಯವಾಗಿದ್ದು, 8197856132 ಸಂಪರ್ಕಿಸಿ ಎಂದರು. ಸುದ್ದಿಗೋಷ್ಠಿಯಲ್ಲಿ ರುದ್ರಗೌಡ ಪಾಟೀಲ್ ಉಪಸ್ಥಿತರಿದ್ದರು.

ಕನ್ನಡ ರಾಜ್ಯೋತ್ಸವ ಆಚರಣೆ...



ಸರ್.ಎಂ. ವಿಶ್ವೇಶ್ವರಯ್ಯ ನಲ್ಲಿ ಮತ್ತು ಒಳಚರಂಡಿ ಕಾರ್ಮಿಕರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಶ್ರೀಭುವನೇಶ್ವರಿಗೆ ಮಾಲಾರ್ಪಣೆ ಮಾಡುವುದರ ಮುಖಾಂತರ 70ನೇ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು. ಅಧ್ಯಕ್ಷ ಜಯನಗರ ಮಹೇಶ್, ಕಾರ್ಯದರ್ಶಿ ಯೋಗೇಶ್ ಹೆಬ್ಬಾಳ್, ಖಜಾಂಚಿ ರವಿಕುಮಾರ್, ಉಪಾಧ್ಯಕ್ಷ ಸುರೇಶ್ ಕುಮಾರ್ ಎಂ.ಎಸ್, ಜಂಟಿಕಾರ್ಯದರ್ಶಿ ಪ್ರಕಾಶ್, ನಿರ್ದೇಶಕರಾದ ಕುಮಾರ್ ಬೋಗಾದಿ, ಚಂದ್ರೇಗೌಡ, ಶಿವರಾಜ್, ರುದ್ರಸ್ವಾಮಿ, ಸಂತೋಷ್‌ಕುಮಾರ್, ಜಾಕೀರ್ ಹುಸೇನ್, ಕುಮಾರ್ ಕೆ.ಜಿ.ಕೊಪ್ಪಲ್, ದಿನೇಶ್ ಮತ್ತಿತರರು ಉಪಸ್ಥಿತರಿದ್ದರು.

ನ.23, ಸರಳ ಸಮೃದ್ಧಿ ಯೋಗ ಶಿಬಿರ

ಮೈಸೂರು,ನ.20(ಜಿಎ)–ಶ್ರೀ ಪತಂಜಲಿ ಯೋಗಾಶ್ರಮ ಟ್ರಸ್ಟ್‌ನ ಕೃಷ್ಣರಾಜನಗರ ಶಾಖೆ ವತಿಯಿಂದ ನ.23ರಂದು ಸಂಜೆ 5 ಗಂಟೆಗೆ ಕೆ.ಆರ್.ನಗರದ ಪತಂಜಲಿ ಯೋಗಭವನದಲ್ಲಿ ಸರಳ ಸಮೃದ್ಧಿ ಯೋಗ (ಪತಂಜಲಿಕ್ರಿಯೆ) 13 ದಿನಗಳ ಶಿಬಿರ ಆರಂಭವಾಗಲಿದೆ ಎಂದು ಸಹ ಸಂಚಾಲಕ ಡಿ.ಟಿ.ಕೆ.ಪ್ರಸಾದ್ ತಿಳಿಸಿದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸರ್ವಾಂಗೀಣ ಅಭಿವೃದ್ಧಿ ಹೊಂದುವುದರ ಜೊತೆಗೆ ವೈದ್ಯ ಪದ್ಧತಿಗೆ ಸವಾಲೆಂಬಂತೆ ಇರುವ ಅಸ್ತಮಾ, ಬಿಪಿ, ಮೂರ್ಛೆ ರೋಗ, ಹೃದಯ ಸಮಸ್ಯೆ, ಸಕ್ಕರೆ ಕಾಯಿಲೆ, ಸೇರಿದಂತೆ ದೀರ್ಘ ಕಾಲದ ವ್ಯಾಧಿಗಳಿಗೆ ಗುರುಜಿ ಪ್ರಕಾಶ್ ಯೋಗಿಯವರು ಕಂಡು ಹಿಡಿದಿರುವ ಪತಂಜಲಿ ಕ್ರಿಯೆಯ ಮೂಲಕ ಸುಲಭ ಪರಿಹಾರವಾಗಿದ್ದು, ವ್ಯಕ್ತಿತ್ವ ವಿಕಸನ ಶಿಬಿರವಾಗಿದೆ ಎಂದರು.

ಶಿಬಿರವನ್ನು ಶಾಸಕ ಡಿ.ರವಿ ಶಂಕರ್ ಉದ್ಘಾಟಿಸಲಿದ್ದಾರೆ. ದಿವ್ಯ ಸಾನ್ನಿಧ್ಯವನ್ನು ಪತಂಜಲಿ ಯೋಗಾಶ್ರಮ ಟ್ರಸ್ಟ್‌ನ ಅಧ್ಯಕ್ಷ ಗುರೂಜಿ ಪ್ರಕಾಶ್ ಯೋಗಿ ವಹಿಸಲಿದ್ದಾರೆ. ಯೋಗಾಚಾರ್ಯ ಪ್ರಸಾದ್ ಗುರೂಜಿ ಪ್ರಾಸ್ತಾವಿಕವಾಗಿ ಮಾತನಾಡಲಿದ್ದಾರೆ. ಯೋಗಾಚಾರ್ಯ ಪಿ.ಆರ್.ವಿಶ್ವನಾಥ್ ಶೆಟ್ಟಿ ಅಧ್ಯಕ್ಷತೆ ವಹಿಸಲಿದ್ದಾರೆ. ನೊಂದಣಿ ಮತ್ತು ಹೆಚ್ಚಿನ ಮಾಹಿತಿಗಾಗಿ 9242017308, 9448259898 ಸಂಪರ್ಕಿಸಿ ಎಂದರು. ಸುದ್ದಿಗೋಷ್ಠಿಯಲ್ಲಿ ಎನ್.ಕೆ.ಅಣ್ಣಯ್ಯ, ಎಲ್.ಕೃಷ್ಣಮೂರ್ತಿ ಮತ್ತಿತರರು ಉಪಸ್ಥಿತರಿದ್ದರು.

ರಾಷ್ಟ್ರೀಯ ಗ್ರಂಥಾಲಯ ಸಪ್ತಾಹ ಆಚರಣೆ



ಜಯನಗರ ಶಾಖೆಯಲ್ಲಿ ರಾಷ್ಟ್ರೀಯ ಗ್ರಂಥಾಲಯ ಸಪ್ತಾಹ ಕಾರ್ಯಕ್ರಮ ನಡೆಯಿತು.

ಮೈಸೂರು,ನ.20–ಮೈಸೂರಿನ ಸಾರ್ವಜನಿಕ ಗ್ರಂಥಾಲಯ ಜಯನಗರ ಶಾಖೆಯಲ್ಲಿ ರಾಷ್ಟ್ರೀಯ ಗ್ರಂಥಾಲಯ ಸಪ್ತಾಹ ಏರ್ಪಡಿಸಲಾಗಿತ್ತು. ಕಾರ್ಯಕ್ರಮವನ್ನು ದೀಪ ಬೆಳಗಿಸುವುದರ ಮೂಲಕ ಪ್ರಾರಂಭಿಸಲಾಯಿತು. ಹಿಂದೂಸ್ಥಾನ್ ಕಾಲೇಜಿನ ಕನ್ನಡ ಸಹಾಯಕ ಪ್ರಾಧ್ಯಾಪಕ ಕೆ.ಪರಮೇಶ ಗ್ರಂಥಾಲಯಗಳು ಮತ್ತು ಪುಸ್ತಕಗಳ ಮಹತ್ವವನ್ನು ಕುರಿತು ಸಹೃದಯ ವಾಚಕರಿಗೆ ತಿಳಿಸಿಕೊಟ್ಟರು. ಲೇಖಕರಾದ ಬೂಕನಕೆರೆ ವಿಜಯೇಂದ್ರ ಗ್ರಂಥಾಲಯಗಳ ವಸ್ತು ಸ್ಥಿತಿಯ ಬಗ್ಗೆ ತಿಳಿಸಿದರು.

ರಾಷ್ಟ್ರೀಯ ಸಪ್ತಾಹದ ಅಂಗವಾಗಿ ರಸಪ್ರಶ್ನೆ, ಚಿತ್ರಕಲೆ ಸ್ಪರ್ಧೆಗಳನ್ನು ನಡೆಸಿ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಪುಸ್ತಕ ಹಾಗೂ ಪ್ರಶಂಸನೀಯ ಪತ್ರವನ್ನು ನೀಡಿ ಗೌರವಿಸಲಾಯಿತು. ಸಹಾಯಕ ಗ್ರಂಥಪಾಲಕರಾದ ಸೌಮ್ಯ ಎಸ್., ಸಿಬ್ಬಂದಿ ಭವ್ಯಶ್ರೀ, ಓದುಗರಾದ ಸ್ವಾಮಿ, ಶಿವಣ್ಣ, ವಿದ್ಯಾಶ್ರೀ ಮತ್ತಿತರರು ಉಪಸ್ಥಿತರಿದ್ದರು.

ಶ್ರೀ ಸತ್ಯಸಾಯಿ ಬಾಬಾ 100ನೇ ಜನ್ಮ ದಿನೋತ್ಸವದ ಅಂಗವಾಗಿ ರಕ್ತದಾನ ಶಿಬಿರ

ಮೈಸೂರು, ನ.20–ಲಯನ್ಸ್ ಜೀವಧಾರ ಮತ್ತು ಸಾಯಿರಂಗ ವಿದ್ಯಾಸಂಸ್ಥೆ, ರೋಟರಿ ಐವರಿ ಸಿಟಿ ಮೈಸೂರು ಮತ್ತು ಶಾರದಾ ವಿಲಾಸ್ ಕಾಲೇಜು ಸಹಯೋಗದಲ್ಲಿ, ಭಗವಾನ್ ಶ್ರೀ ಸತ್ಯಸಾಯಿ ಬಾಬಾ ಅವರ ಶತಮಾನೋತ್ಸವದ ಅಂಗವಾಗಿ ನ.23ರಂದು ಬೆಳಗ್ಗೆ 9ರಿಂದ ಸಂಜೆ 6ರವರೆಗೆ ಬನ್ನಿಮಂಟಪ ಬಿ ಲೇಔಟ್‌ನಲ್ಲಿರುವ ಸಾಯಿರಂಗ ವಿದ್ಯಾಸಂಸ್ಥೆ, ಶಾರದಾ ವಿಲಾಸ ಕಾಲೇಜಿನಲ್ಲಿ ರಕ್ತದಾನ ಶಿಬಿರ ಹಮ್ಮಿಕೊಳ್ಳಲಾಗಿದೆ. 17ರಿಂದ 65 ವರ್ಷದವರು ರಕ್ತದಾನ ಮಾಡಲು ಅರ್ಹತೆ ಹೊಂದಿರುತ್ತಾರೆ. ಹೆಚ್ಚಿನ ಮಾಹಿತಿಗೆ ಮೊ. 9886043580 ಸಂಪರ್ಕಿಸಬಹುದು.



ನಾಳೆ ಶಶಿಧರ ಕೋಟೆ ಸಂಗೀತ ಕಾರ್ಯಕ್ರಮ



ಮೈಸೂರು, ನ. 20– ನರಸಿಂಹರಾಜ ಮೊಹಲ್ಲಾ ಸಂಗೀತ ಸಭಾ ಚಾರಿಟೆಬಲ್ ಟ್ರಸ್ಟ್ ವತಿಯಿಂದ ಕನ್ನಡ ರಾಜ್ಯೋತ್ಸವದ ಅಂಗವಾಗಿ ನವೆಂಬರ್ 22ರಂದು ಸಂಜೆ 6.30ಕ್ಕೆ ಮೈಸೂರಿನ ಎನ್.ಆರ್.ಮೊಹಲ್ಲಾದ ಶ್ರೀ ಪ್ರಸನ್ನ ಮಹಾಗಣಪತಿ ದೇವಸ್ಥಾನದಲ್ಲಿ ಗಾನ ಗಂಧರ್ವ ಶಶಿಧರ ಕೋಟೆ ಬೆಂಗಳೂರು ಮತ್ತು ತಂಡದವರಿಂದ ಸಂಗೀತ ಕಾರ್ಯಕ್ರಮ ಏರ್ಪಡಿಸಲಾಗಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

21.11.2025 ಶುಕ್ರವಾರ, ಮಳೆ ನಕ್ಷತ್ರ: ಅನೂರಾಧ, 20.11.2025 ರಿಂದ 02.12.2025 ವಿಶ್ವಾವಸು ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಕಾರ್ತಿಕ ಮಾಸ, ಶುಕ್ಲ ಪಕ್ಷ, ತಿಥಿ: ಪಾಡ್ಯ, ನಕ್ಷತ್ರ: ಅನೂರಾಧ, ರಾಹುಕಾಲ: ಬೆಳಗ್ಗೆ 10.30ರಿಂದ 12ರವರೆಗೆ

- **ವಿದ್ಯಾವರ್ಧಕ ಸಂಯುಕ್ತ ಪದವಿಪೂರ್ವ ಕಾಲೇಜು:** ಬೆಳಗ್ಗೆ 8.30ಕ್ಕೆ ಜಿಲ್ಲಾ ಮಟ್ಟದ ಥ್ರೋಬಾಲ್, ಕಬಡ್ಡಿ ಮತ್ತು ವಾಲಿಬಾಲ್ ಪಂದ್ಯಾವಳಿಗಳು, ಅಧ್ಯಕ್ಷತೆ: ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಉದ್ಘಾಟನೆ: ಖೋ ಖೋ ಕ್ರೀಡಾಪಟು ಬಿ.ಚೈತ್ರ, ಮುಖ್ಯ ಅತಿಥಿಗಳು: ಕಾರ್ಯದರ್ಶಿ ಪಿ. ವಿಶ್ವನಾಥ್, ಗೌರವ ಅತಿಥಿಗಳು: ಹೆಚ್.ಕೆ.ರಮೇಶ್, ಎನ್.ಮಹೇಶ್, ನಹುಲ; ಸಂಜೆ 4ಕ್ಕೆ ಸಮಾರೋಪ ಸಮಾರಂಭ, ಅಧ್ಯಕ್ಷತೆ: ಕಾಲೇಜು ನಿರ್ವಹಣಾ ಮಂಡಳಿ ಅಧ್ಯಕ್ಷ ಶಿವಲಿಂಗಯ್ಯ, ಬಹುಮಾನ ವಿತರಣೆ: ಆಡಳಿತ ಮಂಡಳಿ ಸದಸ್ಯ ಅಬ್ದುಲ್ ಜಮೀಲ್, ಸ್ಥಳ: ಬೇಡನ್ ಪೊವೆಲ್ ಪಬ್ಲಿಕ್ ಸ್ಕೂಲ್ ಕ್ರೀಡಾ ಮೈದಾನ.
- **ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು :** ಎಂಸಿಎ ಕೋರ್ಸ್ ಪ್ರಾರಂಭ ಮತ್ತು ಪ್ರಥಮ ಎಂಸಿಎ ವಿದ್ಯಾರ್ಥಿಗಳ ಸೇರ್ಪಡೆ ಕಾರ್ಯಕ್ರಮ, ಮುಖ್ಯ ಅತಿಥಿಗಳು : ಮೈಸೂರು ವಿಶ್ವವಿದ್ಯಾನಿಲಯದ ಗಣಕ ವಿಜ್ಞಾನ ವಿಭಾಗದ ಹಿರಿಯ ಪ್ರಾಧ್ಯಾಪಕ ಡಾ. ಡಿ.ಎಸ್. ಗುರು, ಅಧ್ಯಕ್ಷತೆ : ವಿದ್ಯಾವರ್ಧಕ ಸಂಘದ ಗೌರವ ಅಧ್ಯಕ್ಷ ಗುಂಡಪ್ಪಗೌಡ, ಗೌರವ ಅತಿಥಿಗಳು : ಕಾರ್ಯದರ್ಶಿ ಪಿ.ವಿಶ್ವನಾಥ್, ಖಜಾಂಚಿ ಶ್ರೀಶೈಲ ರಾಮಣ್ಣವರ್, ಕಾಲೇಜು ನಿರ್ವಹಣಾ ಸಮಿತಿ ಅಧ್ಯಕ್ಷ ಟಿ. ನಾಗರಾಜು, ಎಂಸಿಎ ವಿಭಾಗದ ಮುಖ್ಯಸ್ಥರಾದ ಡಾ. ಡಿ. ಶೋಭ, ಸ್ಥಳ: ಪಿ.ಎಂ. ಚಿಕ್ಕಬೋರಯ್ಯ ಸಭಾಂಗಣ, ಬೆಳಗ್ಗೆ 9.30ಕ್ಕೆ.
- **ರಾಮ್‌ಸನ್ಸ್ ಬೊಂಬೆ ಮನೆ :** ದಸರೆಯ ಬೊಂಬೆ ಪ್ರದರ್ಶನದ 21ನೇ ಅವತರಣಿಕೆ. ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ. ಬೆಳಗ್ಗೆ 10 ರಿಂದ.
- **ಕಾವೇರಿ ಆಯುರ್ವೇದ ಆಸ್ಪತ್ರೆ :** ಪಿಸಿಓಡಿ ಮತ್ತು ಮಕ್ಕಳಲ್ಲಿ ಕಂಡು ಬರುವ ಚರ್ಮರೋಗಕ್ಕೆ ಉಚಿತ ತಪಾಸಣೆ ಮತ್ತು ಚಿಕಿತ್ಸೆ. ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್. ಬೆಳಗ್ಗೆ 10ರಿಂದ.
- **ಮಹಾಜನ ಕಾನೂನು ಕಾಲೇಜು, ಕರ್ನಾಟಕ ರಾಜ್ಯ ಕಾನೂನು ವಿವಿ, ಹುಬ್ಬಳ್ಳಿ:** 9ನೇ ಅಥ್ಲೆಟಿಕ್ ಮೀಟ್ ಆಯ್ಕೆ ಪ್ರಕ್ರಿಯೆ, ಉದ್ಘಾಟನೆ: ಹುಬ್ಬಳ್ಳಿ ಕಾನೂನು ವಿವಿ ಕುಲಪತಿ ಪ್ರೊ.ಸಿ. ಬಸವರಾಜು, ಅಧ್ಯಕ್ಷತೆ: ಮಹಾಜನ ಶಿಕ್ಷಣ ಸಂಸ್ಥೆ ಅಧ್ಯಕ್ಷ ಮುರಳೀಧರ್ ಭಾಗವತ್, ಉಪಸ್ಥಿತರು: ಪ್ರೊ.ಟಿ. ವಿಜಯಲಕ್ಷ್ಮಿ ಮುರಳೀಧರ್, ಡಾ.ಖಾಲಿದ್ ಖಾನ್, ಮಂಜುನಾಥ್, ಪ್ರೊ.ಸರೋಜಮ್ಮ, ಸ್ಥಳ: ಓವಲ್ ಮೈದಾನ, ಬೆಳಗ್ಗೆ 10ಕ್ಕೆ.
- **ಸಮರ್ಥನಂ ಅಂಗವಿಕಲರ ಸಂಸ್ಥೆ, ಕರ್ನಾಟಕ ರಾಜ್ಯ ಅಂಗವಿಕಲರ ಒಕ್ಕೂಟ, ಮೈಸೂರು ಘಟಕ :** ಬುದ್ಧಿವಿಕಲಾಚೇತನ ಮಕ್ಕಳ ಮೈಸೂರು ವಿಭಾಗ ಮಟ್ಟದ ಜನಪದ ನೃತ್ಯ ಸ್ಪರ್ಧಾ ಕಾರ್ಯಕ್ರಮ, ಉಪಸ್ಥಿತರು: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ಬಸವರಾಜು, ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ರಾಘವೇಂದ್ರ, ಮೈಸೂರು ಘಟಕ, ಕರ್ನಾಟಕ ರಾಜ್ಯ ಅಂಗವಿಕಲರ ಒಕ್ಕೂಟ ಅಧ್ಯಕ್ಷ ಶ್ರೀಧರ್ ದೀಕ್ಷಿತ್, ಸಮರ್ಥನಂ ಅಂಗವಿಕಲರ ಸಂಸ್ಥೆ ಮುಖ್ಯಸ್ಥ ಗುರುರಾಘವೇಂದ್ರ, ಸಮರ್ಥನಂ ಅಂಗವಿಕಲರ ಸಂಸ್ಥೆ ಮುಖ್ಯಸ್ಥ ಶಿವರಾಜು, ಮೈಸೂರು ಘಟಕ, ಕರ್ನಾಟಕ ರಾಜ್ಯ ಅಂಗವಿಕಲರ ಒಕ್ಕೂಟದ ಕಾರ್ಯದರ್ಶಿ ಬಿ. ಕುಮಾರ, ಸ್ಥಳ: ಕಿರುರಂಗ ಮಂದಿರ, ಬೆಳಗ್ಗೆ 10 ರಿಂದ.
- **ಪ್ರಗತಿಪರ ಸಂಘಟನೆಗಳ ಒಕ್ಕೂಟ ಮೈಸೂರು, ಗಾಂಧಿ ವಿಚಾರ ಪರಿಷತ್ತು, ಮೈಸೂರು ಹಾಗೂ ಮೈಸೂರು ವಿಶ್ವವಿದ್ಯಾನಿಲಯ ವಿದ್ಯಾರ್ಥಿಗಳು ಮತ್ತು ಸಂಶೋಧಕರು :** ರಾಷ್ಟ್ರೀಯ ವಿಚಾರ ಸಂಕಿರಣ, ಪುಸ್ತಕ ಬಿಡುಗಡೆ ಸಮಾರಂಭ, ಗಾಂಧೀ ಪ್ರಣೀತ ಧರ್ಮದರ್ಶಿತ್ವ ಮತ್ತು ಬುದ್ಧ ನಾಗಾರ್ಜುನರ ಶೂನ್ಯಯಾನ ಪುಸ್ತಕಗಳ ಇಂಗ್ಲೀಷ್ ಅನುವಾದಿತ ಕೃತಿಗಳ ಬಿಡುಗಡೆ, ಉದ್ಘಾಟನೆ : ಸಾಮಾಜಿಕ ಕಾರ್ಯಕರ್ತ ಭನ್ವರ್ ಮೇಘವಂಶಿ, ಪ್ರಾಸ್ತಾವಿಕ ನುಡಿ : ರಂಗಾಯಣ ಮಾಜಿ ನಿರ್ದೇಶಕ ಡಾ. ಹೆಚ್. ಜನಾರ್ಧನ್, ಮುಖ್ಯ ಅತಿಥಿಗಳು : ಮಾನವ ಹಕ್ಕುಗಳ ಹೋರಾಟಗಾರರಾದ ಶ್ವೇತಾ ಭಟ್, ಪ್ರಗತಿಪರ ಚಿಂತಕ ಸವಿತಾ ಪ. ಮಲ್ಲೇಶ್, ಸ್ಥಳ: ವಿಜ್ಞಾನ ಭವನ, ಮಾನಸಗಂಗೋತ್ರಿ, ಬೆಳಗ್ಗೆ 10ಕ್ಕೆ.
- **ಮೈಸೂರು ಕಾಲೇಜ್ ಆಫ್ ಇಂಜಿನಿಯರಿಂಗ್ ಅಂಡ್ ಮ್ಯಾನೇಜ್‌ಮೆಂಟ್ :** ಕನ್ನಡ ರಾಜ್ಯೋತ್ಸವ, ಮುಖ್ಯ ಅತಿಥಿಗಳು: ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಸ್ಥಳ: ಕಾಲೇಜು ಆವರಣ, ಬೆಳಗ್ಗೆ 11ಕ್ಕೆ.
- **ಜೆಎಸ್‌ಎಸ್ ಆಯುರ್ವೇದ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ :** ಕನ್ನಡ ರಾಜ್ಯೋತ್ಸವ ಮತ್ತು ಕಾಲೇಜು ದಿನಾಚರಣೆ, ಮುಖ್ಯ ಅತಿಥಿಗಳು : ಕರ್ನಾಟಕ ರಾಜ್ಯ ಮುಕ್ತ ವಿವಿ ಕುಲಪತಿ ಡಾ. ಶರಣಪ್ಪ ವಿ. ಹಲಸೆ, ಅಧ್ಯಕ್ಷತೆ : ಜೆಎಸ್‌ಎಸ್ ವೈದ್ಯಕೀಯ ಶಿಕ್ಷಣ ವಿಭಾಗದ ನಿರ್ದೇಶಕ ಆರ್. ಮಹೇಶ್, ಉಪಸ್ಥಿತರು : ಡಾ. ಸಹನಾ ಸುಧಾಕರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಮಧ್ಯಾಹ್ನ 3.30ಕ್ಕೆ.
- **ಅಖಿಲ ಭಾರತೀಯ ಗ್ರಾಹಕ ಪಂಚಾಯತ್, ಮೈಸೂರು ಘಟಕ :** ಮಕ್ಕಳಿಗೆ ಸೈಬರ್ ಅಪರಾಧ ಜಾಗೃತಿ ಕಾರ್ಯಕ್ರಮ, ಸ್ಥಳ: ವಿದ್ಯಾರಣ್ಯ ಕೋಚಿಂಗ್ ಸೆಂಟರ್, ಸಂಜೆ 5.30ಕ್ಕೆ.
- **ಶಬರಿಮಲೆ ಶ್ರೀ ಅಯ್ಯಪ್ಪ ಪೂಜಾ ಸಮಿತಿ:** 26ನೇ ವಾರ್ಷಿಕ ಧ್ವಜಾರೋಹಣ, ಸಂಜೆ 6ರಿಂದ ಧ್ವಜಾರೋಹಣ, ಸ್ಥಳ: ಶ್ರೀ ಅಯ್ಯಪ್ಪಸ್ವಾಮಿ, ಶ್ರೀ ಗುರುವಾಯೂರಪ್ಪನ್ ದೇವಾಲಯ, ಚಾಮುಂಡಿಬೆಟ್ಟದ ಪಾದ.
- **ಶ್ರೀ ನಾದಬ್ರಹ್ಮ ಸಂಗೀತ ಸಭಾ :** ಶ್ರೀಮತಿ ಸಾವಿತ್ರಿ ರಾಘವೇಂದ್ರರಾವ್ ಮತ್ತು ಆರ್.ಬಿ.ಎಂ.ರಾವ್ ಸಂಸ್ಮರಣಾ ಕಾರ್ಯಕ್ರಮ, ಸಂಜೆ 6 ರಿಂದ ವಿದುಷಿ ತನುಶ್ರೀ ಅವರಿಂದ ದೇವರನಾಮಗಳು, ಸಂಜೆ 6.30 ರಿಂದ ಗಮಕ ವಾಚನ–ವಿದುಷಿ ತನುಶ್ರೀ, ವ್ಯಾಖ್ಯಾನ : ವಿದ್ವಾನ್ ಜಿ.ಎಸ್. ಮಂಜುನಾಥ್, ಸ್ಥಳ : ಶ್ರೀ ನಾದಬ್ರಹ್ಮ ಸಂಗೀತ ಸಭಾ ಸಭಾಂಗಣ, ಜೆಎಲ್‌ಬಿ ರಸ್ತೆ.

ಮೈಸೂರು ಆಕಾಶವಾಣಿ




ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸ್ವಾತಂತ್ರ್ಯ ದೀಪ ಸ್ವರಾಜ್ಯ ಸೇನಾನಿಗಳ ಕುರಿತ ಬಾನುಲಿ ಸರಣಿ, ಪ್ರಸ್ತುತಿ : ನಿತೀಶ್ ಡಂಬಳ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ –ಕೆ.ಶ್ರೇಯಾ, ವ್ಯಾಖ್ಯಾನ–ಡಾ. ಪ್ರದೀಪ್ ಕುಮಾರ್ ಹೆಬ್ರಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಕನ್ನಡ ಚಿತ್ರಗೀತೆಗಳು, 9.00 ನಮ್ಮ ಆರೋಗ್ಯ–ವಿಶ್ವ ಸಿ.ಒ.ಪಿ.ಡಿ ದಿನಾಚರಣೆಯ ಸಂಬಂಧವಾಗಿ ಸಿ.ಒ.ಪಿ.ಡಿ ಲಕ್ಷಣಗಳು ಮತ್ತು ಚಿಕಿತ್ಸೆ ಕುರಿತು ತಿಳಿಸಿಕೊಡಲಿದ್ದಾರೆ ಮೈಸೂರಿನ ಶ್ವಾಸಕೋಶ ತಜ್ಞರಾದ ಡಾ.ಮುರಳೀ. ಬಿ.ಮೋಹನ್ ನಂತರ ಮೈಯೋಸೈಟಿಸ್ ಲಕ್ಷಣಗಳು ಮತ್ತು ಚಿಕಿತ್ಸೆ ಕುರಿತು ತಿಳಿಸಿಕೊಡಲಿದ್ದಾರೆ ಮೈಸೂರಿನ ಜೆ.ಎಸ್.ಎಸ್. ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆಯ ಸಂಧಿವಾತ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ. ಮಹಬಲೇಶ್ವರ ಮಮದಾಪುರ ಇವರೊಂದಿಗೆ ಭಾಗವಹಿಸುತ್ತಾರೆ ತೇಜಸ್ವಿನಿ ಗಿರೀಶ್ ಮತ್ತು ಬೇದ್ರೆ ಮಂಜುನಾಥ್, 9.30 ಗಾಂಧೀ ಸ್ಮೃತಿ, 9.35 ಕನ್ನಡ ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಕರೈಕುರುಚಿ ಪಿ.ಅರುಣಾಚಲಂ – ನಾದಸ್ವರ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಕಾಮನ ಬಿಲ್ಲು ಬದುಕಿನ ಬಣ್ಣಗಳ ಚಿತ್ತಾರ, ಪ್ರಸ್ತುತಿ : ಜಿ.ಎನ್. ಮಂಜುನಾಥ್

ಮಧ್ಯಾಹ್ನ: 12.35 ದೇವರನಾಮ, 12.45 ಕಾದಂಬರಿ ವಿಹಾರ, 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ದಾರಿ ದೀಪ ಪ್ರಾಯೋಜಿತ ಕಾರ್ಯಕ್ರಮ. ಪ್ರಾಯೋಜಕರು: FEBA India, 2.55 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ : ಜಿ. ಕೆ. ರವೀಂದ್ರಕುಮಾರ್, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, 4.00 ಮಹಿಳಾರಂಗ, ಸಖೀ ಸಾಹಿತ್ಯ–ಮಹಿಳಾ ಬರಹಗಾರರೊಂದಿಗೆ ಮಾತುಕತೆ, ಪ್ರಸ್ತುತಿ–ನೇತ್ರಾ, 4.30 ಪ್ರಾಯೋಜಿತ ಕಾರ್ಯಕ್ರಮ, ಆಧುನಿಕ ಕೃಷಿ ಚಾವಡಿ ವಿಜ್ಞಾನಿಗಳಿಂದ ಕೃಷಿಕರವರೆಗೆ, ಪ್ರಾಯೋಜಕರು–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ, 6.50 ಕೃಷಿರಂಗ ಹಲೋ ಕೃಷಿರಂಗ ಪ್ರಾಯೋಜಿತ ನೇರ ಫೋನ್–ಇನ್ ಕಾರ್ಯಕ್ರಮ, ಪ್ರಾಯೋಜಕರು–ಕೃಷಿ ಇಲಾಖೆ, ಕರ್ನಾಟಕ ಸರ್ಕಾರ, ವಿಷಯ–ಕೃಷಿ ಮೂಲಭೂತ ಸೌಕರ್ಯ ನಿಧಿ ಭಾಗವಹಿಸುತ್ತಾರೆ– ಉಪಕೃಷಿ ನಿರ್ದೇಶಕರಾದ ಕೆ.ಎಂ. ನಾಗರಾಜು ಮತ್ತು ಕೃಷಿ ಮೂಲಭೂತ ಸೌಕರ್ಯ ನಿಧಿ ಯೋಜನೆಯ ಆರ್ಥಿಕ ಸಲಹೆಗಾರರಾದ ಗೋವರ್ಧನ್, ಪರಾಗ–ಬೇಸಾಯದ ಬದುಕು ಸರಾಗ, 8.00 ರಸಮಂಜರಿ, 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, ಬಾಂಬೆ ಜಯಶ್ರೀ – ಹಾಡುಗಾರಿಕೆ, 10.00 ಜನಪದ ಸಂಗೀತ, 10.30 ಸವಿನೆನಪು

- **ಗಾನಭಾರತೀ :** ಶ್ರೀಮತಿ ವಸಂತಲಕ್ಷ್ಮೀ ಅವರ ಸ್ಮರಣಾರ್ಥ ಸಂಗೀತ ಕಾರ್ಯಕ್ರಮ, ವಿದ್ವಾನ್ ಅಂಜಲಿ ಶ್ರೀರಾಂ ಅವರಿಂದ ಗಾಯನ, ವಿದ್ವಾನ್ ಪೃಥ್ವೀ ಭಾಸ್ಕರ್–ಪಿಟೀಲು, ವಿದ್ವಾನ್ ಜಿ.ಎಸ್. ರಾಮಾನುಜನ್–ಮೃದಂಗ, ಸ್ಥಳ: ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 6ಕ್ಕೆ.
- **ವಸುಂಧರ ಪ್ರದರ್ಶಕ ಕಲೆಗಳ ಕೇಂದ್ರ :** ಸಂಜೆ 5.30 ರಿಂದ ವಸುಂಧರೋತ್ಸವ, ಉದ್ಘಾಟನೆ : ಅಂತರ ರಾಷ್ಟ್ರೀಯ ಪಿಟೀಲು ವಾದಕ ಡಾ.ಬೆಟ್ಟಕೋಟೆ, ಶ್ರೀ ಗಣೇಶ ಬೀಡಿ ವರ್ಕ್ಸ್ ನಿರ್ದೇಶಕ ಡಾ. ಎಂ. ಜಗನ್ನಾಥ್ ಶೆಣೈ, ಅಧ್ಯಕ್ಷತೆ : ವಿಪಿಎಸಿ ಮತ್ತು ಸಿ ಟ್ರಸ್ಟ್ ಅಧ್ಯಕ್ಷರಾದ ಶ್ರೀಮತಿ ಸವಿತಾ ರಮೇಶ್, ಸಂಜೆ 6 ರಿಂದ ವಿದುಷಿ ಸೌಂದರ್ಯ ಎಸ್.ಪಣಪಿಲ್ ಅವರಿಂದ ಭರತನಾಟ್ಯ, ಸಂಜೆ 6.45 ರಿಂದ ವಿದುಷಿ ನಾಟ್ಯ ಸರಸ್ವತಿ ಗುರು ಶುಭ ಧನಂಜಯ ಅವರಿಂದ ಭರತನಾಟ್ಯ, ಸ್ಥಳ: ವಸುಂಧರ ಭವನ, ಸರಸ್ವತಿಪುರಂ.
- **ವಿಜಯನಗರ 1ನೇ ಹಂತದ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ :** 70ನೇ ವರ್ಷದ ಕನ್ನಡ ರಾಜ್ಯೋತ್ಸವ, ಉದ್ಘಾಟನೆ : ಪುಸ್ತಕದ ಮನೆ ಖ್ಯಾತಿಯ ಅಂಕೇಗೌಡ, ಮುಖ್ಯ ಅತಿಥಿಗಳು : ಸಂಸದ ಯದುವೀರ್ ಒಡೆಯರ್, ಸ್ಥಳ: ಯೋಗಾಮಂಟಪ, ಯೋಗನರಸಿಂಹಸ್ವಾಮಿ ದೇವಸ್ಥಾನ ಎದುರು, ಸಂಜೆ 6ಕ್ಕೆ.
- **ಶ್ರೀ ರಾಮಕೃಷ್ಣ ಆಶ್ರಮ :** ಶತಮಾನೋತ್ಸವ, ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆಯ ಸುವರ್ಣ ಮಹೋತ್ಸವ, ವಿವೇಕಪ್ರಭ ಮಾಸಪತ್ರಿಕೆಯ ರಜತ ಮಹೋತ್ಸವ, ಅಧಿವೇಶನ–1 : ಶ್ರೀರಾಮಕೃಷ್ಣ ಪೂಜೆ, ಹೋಮ ಮತ್ತು ಆರತಿ, ಬೆಳಗ್ಗೆ 6.30ಕ್ಕೆ ಪೂಜೆ – ಸ್ವಾಮಿ ಅಮರೇಶ್ವರಾನಂದಜಿ, ಭಜನೆ – ಸ್ವಾಮಿ ಆತ್ಮಜ್ಞಾನಂದಜಿ ಮತ್ತು ಸ್ವಾಮಿ ಜ್ಞಾನಯೋಗಾನಂದಜಿ, ಬೆಳಗ್ಗೆ 9ಕ್ಕೆ ಹೋಮ, ಸ್ಥಳ: ಆಶ್ರಮದ ದೇವಾಲಯ; ಅಧಿವೇಶನ–2, ಬೆಳಗ್ಗೆ 10.15 ರಿಂದ ನಾರಾಯಣ ಸೇವೆ, ಸಾನ್ನಿಧ್ಯ : ಶ್ರೀ ಪೇಜಾವರ ಅಧೋಕ್ಷಜ ಮಠ, ಉಡುಪಿ ಶ್ರೀ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ, ಭಾಷಣಕಾರರು : ರಾಮಕೃಷ್ಣ ಮಿಷನ್ ಆಶ್ರಮ, ಕಡಪ ಕಾರ್ಯದರ್ಶಿ ಸ್ವಾಮಿ ಅನುಪಮಾನಂದಜಿ, ರಾಮಕೃಷ್ಣ ಮಠ, ಹಲಸೂರು ಅಧ್ಯಕ್ಷ ಸ್ವಾಮಿ ಬೋಧಸ್ವರೂಪಾನಂದಜಿ, ಶಾಸಕ ಜಿ.ಟಿ. ದೇವೇಗೌಡ, ಪಾಲಿಕೆ ಮಾಜಿ ಸದಸ್ಯ ಡಿ.ನಾಗಭೂಷಣ್, ವಿವೇಕಾನಂದ ಗಿರಿಜನ ಕಲ್ಯಾಣ ಕೇಂದ್ರ, ಬಿಳಿಗಿರಿರಂಗನಬೆಟ್ಟ ಗೌರವ ಕಾರ್ಯದರ್ಶಿ ಡಾ. ಹೆಚ್. ಸುದರ್ಶನ್, ವಿಶೇಷ ಆಹ್ವಾನಿತರು : ಮಾಜಿ ಶಾಸಕ ಎಲ್. ನಾಗೇಂದ್ರ, ಕನ್ನಡ ಪರಿಚಾರಕ ಅರವಿಂದ ಶರ್ಮ; ಅಧಿವೇಶನ–3, ಬೆಳಗ್ಗೆ 11.50 ರಿಂದ ಶತಮಾನೋತ್ಸವ ಸ್ಮರಣ ಸಂಚಿಕೆ ಲೋಕಾರ್ಪಣೆ, ಮುಖ್ಯ ಅತಿಥಿಗಳು : ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷ ಆರ್.ವಿ. ದೇಶಪಾಂಡೆ, ಸಾನ್ನಿಧ್ಯ : ಶ್ರೀರಾಮಕೃಷ್ಣ ಆಶ್ರಮ, ಮೈಸೂರು ಮಾಜಿ ಅಧ್ಯಕ್ಷ ಸ್ವಾಮಿ ಆತ್ಮವಿದಾನಂದಜಿ, ರಾಮಕೃಷ್ಣ ಮಠ, ಚೆನ್ನೈ ಅಧ್ಯಕ್ಷ ಸ್ವಾಮಿ ಸತ್ಯಜ್ಞಾನಾನಂದಜಿ, ರಾಮಕೃಷ್ಣ ಮಠ, ವೆಂಕಟಾಪುರ ಅಧ್ಯಕ್ಷ ಸ್ವಾಮಿ ಅಮೂರ್ತಾನಂದಜಿ, ಗೌರವ ಅತಿಥಿಗಳು : ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಮಾಜಿ ಶಿಕ್ಷಣ ಸಚಿವ ಬಿ.ಸಿ. ನಾಗೇಶ್, ನಿವೃತ್ತ ಪೊಲೀಸ್ ಅಧಿಕಾರಿ ಎಚ್.ಸಿ. ಕಿಶೋರ್‌ಚಂದ್ರ; ಅಧಿವೇಶನ–4, ಮಧ್ಯಾಹ್ನ 3.30 ರಿಂದ, ಸಾನ್ನಿಧ್ಯ : ರಾಮಕೃಷ್ಣ ಮಠ ಮತ್ತು ರಾಮಕೃಷ್ಣ ಮಿಷನ್, ಬೇಲೂರು ಮಠದ ಪರಮಾಧ್ಯಕ್ಷ ಸ್ವಾಮಿ ಗೌತಮಾನಂದಜಿ ಮಹಾರಾಜ್, ಮುಖ್ಯ ಅತಿಥಿಗಳು : ಮುಖ್ಯಮಂತ್ರಿ ಸಿದ್ದರಾಮಯ್ಯ, ಅತಿಥಿಗಳು : ರಾಮಕೃಷ್ಣ ಮಠ, ಊಟಿ ಅಧ್ಯಕ್ಷ ಸ್ವಾಮಿ ರಾಘವೇಶಾನಂದಜಿ, ಪ್ರವಾಸೋದ್ಯಮ ಸಚಿವ ಹೆಚ್.ಕೆ. ಪಾಟೀಲ್, ಭಾರತೀಯ ಅಂಚೆ ಸೇವೆ ಮುಖ್ಯ ಅಧೀಕ್ಷಕ ಕೆ. ಪ್ರಕಾಶ್, ಗೌರವಾರ್ಪಣೆ: ಶಾಸಕ ಶ್ಯಾಮನೂರು ಶಿವಶಂಕರಪ್ಪ, ಶಾಸಕ ಡಿ.ಆರ್. ಪಾಟೀಲ್, ವಿಧಾನ ಪರಿಷತ್ ಮಾಜಿ ಸದಸ್ಯ ಡಿ.ಮಾದೇಗೌಡ, ದೂರಸಂಪರ್ಕ ಇಲಾಖೆ, ನವದೆಹಲಿ ನಿವೃತ್ತ ಉಪನಿರ್ದೇಶಕ ಎನ್.ಎಸ್. ಚಕ್ರವರ್ತಿ, ನಿವೃತ್ತ ಪೊಲೀಸ್ ಮಹಾನಿರ್ದೇಶಕ ಹೆಚ್.ಸಿ. ಕಿಶೋರ್ ಚಂದ್ರ, ಶ್ರೀ ರಾಮಕೃಷ್ಣ ವಿದ್ಯಾಶಾಲಾ ನಿವೃತ್ತ ಪ್ರಾಂಶುಪಾಲ ಕೀರ್ತಿ ಕುಮಾರ್, ನಿವೃತ್ತ ತಹಸೀಲ್ದಾರ್ ಜೆ.ಕೆ. ಬಸಪ್ಪ, ಅಭಿದಾನ್ ಪುಣ್ಯ ಟ್ರಸ್ಟ್ ಅಧ್ಯಕ್ಷ ಸಾಯಿ ಗಿರಿಧರನ್; ಅಧಿವೇಶನ–5, ಸಂಜೆ 6.30 ರಿಂದ, ಸಾನ್ನಿಧ್ಯ : ರಾಮಕೃಷ್ಣ ಮಠ ಮತ್ತು ರಾಮಕೃಷ್ಣ ಮಿಷನ್, ಬೇಲೂರು ಮಠದ ಸಹಾಯಕ ಪ್ರಧಾನ ಕಾರ್ಯದರ್ಶಿ ಸ್ವಾಮಿ ಬಲಭದ್ರಾನಂದಜಿ, ಮುಖ್ಯ ಅತಿಥಿಗಳು : ಸಂಸದ ತೇಜಸ್ವಿ ಸೂರ್ಯ, ಮಾಜಿ ಸಂಸದ ಪ್ರತಾಪ್ ಸಿಂಹ, ಸ್ಥಳ: ರಾಮಕೃಷ್ಣ ಆಶ್ರಮ, ಯಾದವಗಿರಿ.

ಮೈಸೂರು ಪಾಲಿಕೆ ವ್ಯಾಪ್ತಿಗೆ ಚಾಮುಂಡಿ ಬೆಟ್ಟ ಸೇರಿಸಬೇಡಿ

ಸಿಎಂಗೆ ನಿವಾಸಿಗಳು, ಗ್ರಾಪಂ ಸದಸ್ಯರು ಮನವಿ



ಮೈಸೂರು,ನ.20(ಜಿಎ)–ಚಾಮುಂಡಿ ಬೆಟ್ಟ ಗ್ರಾಮ ಪಂಚಾಯಿತಿಯನ್ನು ಮೈಸೂರು ಮಹಾನಗರಪಾಲಿಕೆಗೆ ಸೇರ್ಪಡೆ ಮಾಡಬೇಡಿ. ಅದನ್ನು ಗ್ರಾಮ ಪಂಚಾಯಿತಿಯಾಗಿಯೇ ಮುಂದುವರೆಸುವಂತೆ ಚಾಮುಂಡಿ ಬೆಟ್ಟದ ಗ್ರಾಮಸ್ಥರು, ಗ್ರಾಮ ಪಂಚಾಯಿತಿ ಸದಸ್ಯರು ಮುಖ್ಯ ಮಂತ್ರಿ ಸಿದ್ದರಾಮಯ್ಯನವರಿಗೆ ಮನವಿ ಸಲ್ಲಿಸಿದ್ದಾರೆ.

ಚಾಮುಂಡಿಬೆಟ್ಟ ಗ್ರಾಮವು ಇತಿಹಾಸ ಪ್ರಸಿದ್ಧ ಪುಣ್ಯ ಕ್ಷೇತ್ರವಾಗಿದೆ. ಇಲ್ಲಿ ಸುಮಾರು 450 ಕುಟುಂಬಗಳಿದ್ದು, 3 ಸಾವಿರಕ್ಕೂ ಹೆಚ್ಚು ಜನ ಸಂಖ್ಯೆ ಹೊಂದಿದೆ. ಗ್ರಾಮದ ನಿರ್ವಹಣೆಯನ್ನು ಗ್ರಾಮ ಪಂಚಾಯಿತಿ ಅತ್ಯುತ್ತಮವಾಗಿ ನಿರ್ವಹಿಸುತ್ತಿದೆ. ಚಾಮುಂಡೇಶ್ವರಿ ಸನ್ನಿಧಿ ವಿಶ್ವದಲ್ಲಿಯೇ ವಿಶೇಷ ಗ್ರಾಮವಾಗಿದೆ. ಬೃಹತ್ ಮೈಸೂರು ಮಹಾನಗರಪಾಲಿಕೆ ವ್ಯಾಪ್ತಿಗೆ ಒಳಪಡಿಸಲು ಕೆಲವು ಮಂದಿ ನಿರಂತರವಾಗಿ ಯತ್ನಿಸುತ್ತಿದ್ದು, ಈ ಸೇರ್ಪಡೆ ಪ್ರಕ್ರಿಯೆಯನ್ನು ಗ್ರಾಮಸ್ಥರೆಲ್ಲರೂ ಒಕ್ಕೊರಲಿನಿಂದ ವಿರೋಧಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಬೆಂಗಳೂರಿನಲ್ಲಿ ಭೇಟಿ ಮಾಡಿ ಮನವಿ ಸಲ್ಲಿಸಿದ್ದಾರೆ.

ಗ್ರಾಮದಲ್ಲಿ ಶೇ.90ರಷ್ಟು ಮಂದಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಕ್ಕೆ ಸೇರಿದವರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಜೀವನೋಪಾಯಕ್ಕೆ ವ್ಯಾಪಾರ ಅವಲಂಬಿಸಿದ್ದಾರೆ. ಪಾಲಿಕೆ ವ್ಯಾಪ್ತಿಗೆ ಒಳಪಡಿಸುವುದರಿಂದ ತೆರಿಗೆ ದರ ಹೆಚ್ಚಳವಾಗಿ ಬಡವರು ಹಾಗೂ ಮಧ್ಯಮ ವರ್ಗದವರಿಗೆ ಹೊರೆಯಾಗುತ್ತದೆ. ಗ್ರಾಮವು ಮೀಸಲು ಅರಣ್ಯ ವ್ಯಾಪ್ತಿಗೆ ಹೊಂದಿಕೊಂಡಿರುವುದರಿಂದ ಯಾವುದೇ ಬಡಾವಣೆ ನಕ್ಷೆ ಅನುಮೋದನೆ ಹಾಗೂ ಅಭಿವೃದ್ಧಿ ಕಾರ್ಯಗಳ ಅವಶ್ಯಕತೆ ಇರುವುದಿಲ್ಲ ಎಂದು ತಿಳಿಸಿದ್ದಾರೆ.

ಪಾಲಿಕೆ ವ್ಯಾಪ್ತಿಗೆ ಸೇರ್ಪಡೆಯಾಗಿ ನಗರಪಾಲಿಕೆ ಸದಸ್ಯರಾಗಿ ಆಯ್ಕೆ ಆಗುವುದು ಕಠಿಣವಾಗುತ್ತದೆ. ಧಾರ್ಮಿಕ ಕ್ಷೇತ್ರವಾಗಿರುವುದರಿಂದ ರಾಜಕೀಯ ಪ್ರಭಾವ ಹೆಚ್ಚಾಗಿ ಕ್ಷೇತ್ರಕ್ಕೆ ಧಕ್ಕೆ ಉಂಟಾಗುತ್ತದೆ. ಈಗಾಗಲೇ ಚಾಮುಂಡಿ ಬೆಟ್ಟ ಗ್ರಾಮವನ್ನು ಬೃಹತ್ ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಸೇರಿಸುವ ಪ್ರಕ್ರಿಯೆಯನ್ನು 2022ರ ಮೇ 12 ರಂದು ಗ್ರಾಮ ಪಂಚಾಯಿತಿ ಸಭೆಯಲ್ಲಿ ಸರ್ವಾನುಮತದಿಂದ ವಿರೋಧಿಸಿ ನಿರ್ಣಯ ಮಾಡಲಾಗಿದೆ. ಗ್ರಾಮ ಸಭೆಯಲ್ಲಿ ಸೇರ್ಪಡೆ ವಿರೋಧಿಸಿ ಗ್ರಾಮಸ್ಥರು ಮನವಿ ಸಲಿಸಿದ್ದಾರೆ ಎಂದು ಪತ್ರದಲ್ಲಿ ವಿವರಿಸಲಾಗಿದೆ.

ವಿಶೇಷ ಪೂಜೆ...



ಶ್ರೀ ಮಲೆ ಮಾದೇಶ್ವರ ಸ್ವಾಮಿ ದೇವಸ್ಥಾನದ ಟ್ರಸ್ಟ್ ವತಿಯಿಂದ ಸಿಎಂ ಸಿದ್ದರಾಮಯ್ಯ ಅವರ ಧರ್ಮಪತ್ನಿ ಪಾರ್ವತಿ ಅವರ ಅನಾರೋಗ್ಯದ ಹಿನ್ನೆಲೆಯಲ್ಲಿ ಶೀಘ್ರ ಗುಣಮುಖರಾಗಲೆಂದು ವಿಶೇಷ ಪೂಜೆ, ಹೋಮ ಪೂರ್ಣಾಹುತಿ, ಮಹಾ ಮಂಗಳಾರತಿ, ಪ್ರಸಾದ ವಿನಿಯೋಗ ನಡೆಸಲಾಯಿತು. ಅಲ್ಲದೆ, ರೇಣುಕಾಸ್ವಾಮಿ ನೇತೃತ್ವದಲ್ಲಿ ಅಮಾವಾಸ್ಯೆ ಪೂಜೆ ನೆರವೇರಿತು. ದೇವಸ್ಥಾನದ ಗುಡ್ಡಪ್ಪನವರಾದ ರವಿಕುಮಾರ್, ದೇವಸ್ಥಾನ ಗೌರವಾಧ್ಯಕ್ಷ ಎಂ.ಶಿವಣ್ಣ, ಮಹಾಪೋಷಕರಾದ ರಾಚಯ್ಯ, ರಾಜೇಂದ್ರ, ವೆಂಕಟದಾಸಾಚಾರ್, ಜಗನ್ನಾಥ್, ಸುರೇಶ್‌ಬಾಬು, ನಾಗೇಂದ್ರ, ರವಿ, ಮಹದೇವ ಹಾಗೂ ಪದಾಧಿಕಾರಿಗಳು, ಭಕ್ತಾದಿಗಳು ಈ ವೇಳೆ ಹಾಜರಿದ್ದರು.

ಬಳ್ಳಾರಿ ಜೀನ್ಸ್ ಉದ್ಯಮಕ್ಕೆ ಕೆಎಸ್‌ಪಿಸಿಬಿ ಶಾಕ್: 36 ವಾಷಿಂಗ್ ಘಟಕಗಳಿಗೆ ಬೀಗ

ಸಾವಿರಾರು ಕಾರ್ಮಿಕರ ಭವಿಷ್ಯ ಅತಂತ್ರ...!



ಬಳ್ಳಾರಿ: ಬಳ್ಳಾರಿ ಜೀನ್ಸ್ ಉದ್ಯಮಕ್ಕೆ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಶಾಕ್ ನೀಡಿದ್ದು, ಮಂಡಳಿಯು 36 ಜೀನ್ಸ್ ವಾಷಿಂಗ್ ಯೂನಿಟ್‌ಗಳನ್ನು ಮುಚ್ಚಲು ಆದೇಶಿಸಿದೆ. ಕಲುಷಿತ ನೀರನ್ನು ನಾಲೆಗೆ ಹರಿಸುತ್ತಿದ್ದ ಕಾರಣ ಮಾಲಿನ್ಯ ನಿಯಂತ್ರಣ ಮಂಡಳಿಯು 36 ಜೀನ್ಸ್ ವಾಷಿಂಗ್ ಯೂನಿಟ್‌ಗಳನ್ನು ಮುಚ್ಚಲು ಆದೇಶಿಸಿದೆ. ಈ ಕ್ರಮದಿಂದಾಗಿ ನಗರದ ಜೀನ್ಸ್ ಉದ್ಯಮವು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದು, ಸಾವಿರಾರು ಜನರ ಉದ್ಯೋಗಕ್ಕೆ ಕುತ್ತು ಬಂದಿದೆ.

ಇದೀಗ ಈ ಘಟಕಗಳ ಮಾಲೀಕರು ರಾಜ್ಯ ಸರ್ಕಾರವು ತಕ್ಷಣ ಮಧ್ಯಪ್ರವೇಶಿಸಿ, ಕೆಎಸ್‌ಪಿಸಿಬಿ ಜೊತೆ ಮಾತುಕತೆ ನಡೆಸಿ ಮಾನದಂಡಗಳನ್ನು ಪಾಲಿಸಲು ಹೆಚ್ಚುವರಿ ಸಮಯ ನೀಡಬೇಕೆಂದು ಒತ್ತಾಯಿಸಿದ್ದಾರೆ.

ಜೀನ್ಸ್ ಘಟಕದ ಮಾಲೀಕ ಮಲ್ಲಿಕಾರ್ಜುನ್ ಮಾತನಾಡಿ, ಬಳ್ಳಾರಿಯಲ್ಲಿ 500ಕ್ಕೂ ಹೆಚ್ಚು ರೆಡಿಮೇಡ್ ಉಡುಪು ಘಟಕಗಳಿದ್ದು, ಅವು ಪ್ರತಿದಿನ 50,000ಕ್ಕೂ ಹೆಚ್ಚು ಜೀನ್ಸ್ ಉತ್ಪಾದಿಸುತ್ತವೆ. ಹಬ್ಬಗಳ ಸಮಯದಲ್ಲಿ ಉತ್ಪಾದನೆ ಮಟ್ಟ ದ್ವಿಗುಣಗೊಳ್ಳುತ್ತದೆ. ಒಂದು ಕಾಲದಲ್ಲಿ 1 ಲಕ್ಷಕ್ಕೂ ಹೆಚ್ಚು ಜನರನ್ನು ನೇಮಿಸಿಕೊಂಡಿತ್ತು. ಆದರೆ, ಈಚೆಗೆ ಹೆಚ್ಚುತ್ತಿರುವ ಉತ್ಪಾದನಾ ವೆಚ್ಚ, ನೀರಿನ ಕೊರತೆ, ವಿದ್ಯುತ್ ಸಮಸ್ಯೆಗಳು, ಕಾರ್ಮಿಕರ ನಿರ್ಬಂಧಗಳಿಂದಾಗಿ ಉದ್ಯಮ ಸಂಕಷ್ಟದಲ್ಲಿದೆ. ಡೆನಿಮ್ ಉತ್ಪನ್ನಗಳಿಗೆ ಈ ಘಟಕಗಳು ನಿರ್ಣಾಯಕವಾಗಿವೆ. ಇವುಗಳನ್ನೇ ಬಂದ್ ಮಾಡಿ ಉದ್ಯಮವೇ ಸ್ಥಗಿತಗೊಳ್ಳಲಿದೆ ಎಂದಿದ್ದಾರೆ.

ಇಂದಿರಾಗಾಂಧಿಯವರೇ ವೀರ ಸಾವರ್ಕರ್ ಅವರನ್ನ ಕೊಂಡಾಡಿದ್ದರು

● ಅಂಕಣಕಾರ ಪ್ರವೀಣ್‌ಕುಮಾರ್ ಮಾವಿನಕಾಡು ಮಾಹಿತಿ ● ಇತ್ತೀಚಿನ ದಿನಗಳಲ್ಲಿ ಮತ ರಾಜಕಾರಣದಿಂದ ಸ್ವಾತಂತ್ರ್ಯ ಹೋರಾಟಗಾರರ ಬಗ್ಗೆ ತುಚ್ಛ ಹೇಳಿಕೆ ನೀಡಲಾಗುತ್ತಿದೆ

ಮೈಸೂರು,ನ.20(ಎಂಟಿವೈ)–ದಿವಂಗತ ಪ್ರಧಾನಿ ಇಂದಿರಾಗಾಂಧಿ ಅವರು ಸ್ವಾತಂತ್ರ್ಯ ಹೋರಾಟಗಾರ ಸಾವರ್ಕರ್ ಅವರನ್ನು 'ಮರೆಯಲಾಗದ ಭಾರತದ ಹೆಮ್ಮೆಯ ಸುಪುತ್ರ' ಎಂದು ಬಣ್ಣಿಸಿದ್ದರು ಎಂದು ಅಂಕಣಕಾರ ಹಾಗೂ ಚಿಂತಕ ಪ್ರವೀಣ್ ಕುಮಾರ್ ಮಾವಿನಕಾಡು ತಿಳಿಸಿದ್ದಾರೆ.

ಮೈಸೂರು ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಸಾವರ್ಕರ್ ಪ್ರತಿಷ್ಠಾನ ಮೈಸೂರು ವತಿಯಿಂದ ದಿವಂಗತ ಪ್ರಧಾನಿ ಇಂದಿರಾ ಗಾಂಧಿ ಜಯಂತಿ ಪ್ರಯುಕ್ತ ಗುರುವಾರ ಆಯೋಜಿಸಿದ್ದ 'ಇಂದಿರಾ ಗಾಂಧಿ ಮತ್ತು ಸಾವರ್ಕರ್' ಕುರಿತ ವಿಚಾರಗೋಷ್ಠಿ ಕಾರ್ಯಕ್ರಮದಲ್ಲಿ ವಿಷಯ ಮಂಡಿಸಿ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ಮತ ರಾಜಕಾರಣಕ್ಕಾಗಿ ಅನೇಕ ಸ್ವಾತಂತ್ರ್ಯ ಹೋರಾಟಗಾರರ ಬಗ್ಗೆ ತುಚ್ಛವಾಗಿ ಮಾತನಾಡುವ ಸಂಸ್ಕೃತಿ ಹೆಚ್ಚಾಗಿದೆ. ದೇಶದ ಇತಿಹಾಸದಲ್ಲಿ ಸ್ವಾತಂತ್ರ್ಯ ವೀರ ಎಂದೇ ಜನ ಮಾನಸದಲ್ಲಿ ನೆಲೆಸಿರುವ ವಿನಾಯಕ ದಾಮೋದರ ಸಾವರ್ಕರ್ ಅವರ ಬಗ್ಗೆ ಕೆಲ ನಾಯಕರು ಬಾಯಿಗೆ ಬಂದ ಹಾಗೆ ಮಾತನಾಡುವುದನ್ನು ನಾವೆಲ್ಲರೂ ಗಮನಿಸಿದ್ದೇವೆ.

1980ರಲ್ಲಿ ಮಾಜಿ ಪ್ರಧಾನಿ ಇಂದಿರಾ ಗಾಂಧಿಯವರು ಸ್ವಾತಂತ್ರ್ಯವೀರ ಸಾವರ್ಕರ್ ರಾಷ್ಟ್ರೀಯ ಸ್ಮಾರಕದ ಕಾರ್ಯದರ್ಶಿಗಳಾಗಿದ್ದ ಪಂಡಿತ್ ಬಾಕ್ಲೆರವರಿಗೆ ಪತ್ರ ಬರೆದು ಸ್ವಾತಂತ್ರ್ಯ ಹೋರಾಟದಲ್ಲಿ ಬ್ರಿಟಿಷರ ವಿರುದ್ಧ ಹೋರಾಡಿದ್ದ ಸಾವರ್ಕರ್ ಪಾತ್ರ ಅವಿಸ್ಮರಣೀಯ, ಅವರೊಬ್ಬ ಮರೆಯಲಾಗದ ಭಾರತದ ಹೆಮ್ಮೆಯ ಸುಪುತ್ರ ಎಂದು ಬಣ್ಣಿಸಿದ್ದರು. ಇಂದಿರಾ ಗಾಂಧಿಯವರು ತಮ್ಮ ಹಣದಲ್ಲಿ ಸಾವರ್ಕರ್ ಟ್ರಸ್ಟಿಗೆ 11 ಸಾವಿರ ರೂ. ದೇಣಿಗೆ ನೀಡಿದ್ದರು ಎಂದರು.

ಸರ್ವೋಚ್ಛ ನ್ಯಾಯಾಲಯ ಛೀಮಾರಿ ಹಾಕಿತ್ತು: ಸಾವರ್ಕರ್ ಪ್ರತಿಷ್ಠಾನದ ಕಾರ್ಯದರ್ಶಿ ರಾಕೇಶ್ ಭಟ್ ಮಾತನಾಡಿ, ಕಾಂಗ್ರೆಸ್ ವರಿಷ್ಠರಾದ ರಾಹುಲ್ ಗಾಂಧಿ, ಸಾವರ್ಕರ್ ಬಗ್ಗೆ ಹಗುರವಾಗಿ ಹೇಳಿಕೆ ನೀಡಿದ್ದಕ್ಕೆ ಸರ್ವೋಚ್ಛ ನ್ಯಾಯಾಲಯ ಛೀಮಾರಿ ಹಾಕಿತ್ತು. ಅಲ್ಲದೆ, ಅವರಿಗೆ ಎಚ್ಚರಿಕೆಯನ್ನು ಸಹ ನೀಡಿತ್ತು. ಆದರೂ ಕಾಂಗ್ರೆಸ್‌ನ ಕೆಲವು ನಾಯಕರು ಸಾವರ್ಕರ್ ಅವರ ವಿರುದ್ಧ ಹಗುರವಾದ ಹೇಳಿಕೆ ನೀಡುತ್ತಿರುವುದು ಖಂಡನೀಯ ಎಂದರು.



ಮೈಸೂರಲ್ಲಿ ಸಾವರ್ಕರ್ ಪ್ರತಿಷ್ಠಾನ ಮೈಸೂರು ವತಿಯಿಂದ ಮಾಜಿ ಪ್ರಧಾನಿ ಇಂದಿರಾ ಗಾಂಧಿ ಜಯಂತಿ ಪ್ರಯುಕ್ತ ಆಯೋಜಿಸಿದ್ದ 'ಇಂದಿರಾ ಗಾಂಧಿ ಮತ್ತು ಸಾವರ್ಕರ್' ವಿಚಾರ ಗೋಷ್ಠಿ ಕಾರ್ಯಕ್ರಮದಲ್ಲಿ ಆದಿತ್ಯ ಅಧಿಕಾರಿ ಆಸ್ಪತ್ರೆಯ ವೈದ್ಯ ಡಾ.ಚಂದ್ರಶೇಖರ, ಅಂಕಣಕಾರ ಪ್ರವೀಣ್ ಕುಮಾರ್ ಮಾವಿನಕಾಡು ಇಂದಿರಾಗಾಂಧಿ, ಸಾವರ್ಕರ್‌ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುತ್ತಿರುವುದು.

ಖಂಡನಾ ನಿರ್ಣಯ: ಸಭೆಯಲ್ಲಿ ಇಂದಿರಾ ಗಾಂಧಿ ಕಾಲದಲ್ಲಿ ಕಾಂಗ್ರೆಸಿಗರಿಂದ ವೀರ ಎನ್ನಿಸಿಕೊಂಡಿದ್ದ ಸಾವರ್ಕರ್ ಅವರನ್ನು ಇಂದು ರಾಹುಲ್ ಗಾಂಧಿ ಕಾಲದಲ್ಲಿ ಹೇಡಿ ಎಂದು ಕರೆಯುತ್ತಿರುವ ಬಗ್ಗೆ ಟೀಕಿಸಲಾಯಿತು. ಅದರಲ್ಲಿಯೂ ಪ್ರಿಯಾಂಕ ಖರ್ಗೆ, ಬಿ.ಕೆ.ಹರಿಪ್ರಸಾದ್‌ರಂತಹವರ ವಿರುದ್ಧ ಆಕ್ರೋಶ ವ್ಯಕ್ತವಾಯಿತು.

ಪತ್ರ ಪ್ರದರ್ಶನ: ಇದೇ ವೇಳೆ 1980ರಲ್ಲಿ ಇಂದಿರಾ ಗಾಂಧಿಯವರು ಸ್ವಾತಂತ್ರ್ಯವೀರ ಸಾವರ್ಕರ್ ರಾಷ್ಟ್ರೀಯ ಸ್ಮಾರಕದ ಕಾರ್ಯದರ್ಶಿಗಳಾಗಿದ್ದ ಪಂಡಿತ್ ಬಾಕ್ಲೆರವರಿಗೆ ಪತ್ರ ಬರೆದು ಸ್ವಾತಂತ್ರ್ಯ ಹೋರಾಟದಲ್ಲಿ ಬ್ರಿಟಿಷರ ವಿರುದ್ಧ ಹೋರಾಡಿದ್ದ ಸಾವರ್ಕರ್ ಪಾತ್ರ ಅವಿಸ್ಮರಣೀಯ, ಅವರೊಬ್ಬ ಮರೆಯಲಾಗದ ಭಾರತದ ಹೆಮ್ಮೆಯ ಸುಪುತ್ರ ಎಂದು ಬಣ್ಣಿಸಿದ್ದ ಪತ್ರವನ್ನು ಪ್ರದರ್ಶಿಸಲಾಯಿತು.

ಸಾವರ್ಕರ್ ಗೌರವಾರ್ಥ ಇದೇ ಇಂದಿರಾ ಗಾಂಧಿಯವರು ಬಿಡುಗಡೆ ಮಾಡಿದ್ದ ಅಂಚೆ ಚೀಟಿಯನ್ನು ಪ್ರದರ್ಶಿಸಲಾಯಿತು. ಎಲ್ಲಾ ಅಂಚೆ ಚೀಟಿಯಲ್ಲಿ ವ್ಯಕ್ತಿಯ ಚಿತ್ರ ಮಾತ್ರ ಇದ್ದರೆ, ಸಾವರ್ಕರ್ ಅಂಚೆ ಚೀಟಿಯಲ್ಲಿ ಅವರು ಕರಿನೀರಿನ ಶಿಕ್ಷೆ ಅನುಭವಿಸಿದ್ದ ಅಂಡಮಾನಿನ ಜೈಲಿನ ಚಿತ್ರವೂ ಇರುವುದನ್ನು ಉಲ್ಲೇಖಿಸಲಾಯಿತು.

ಕಾರ್ಯಕ್ರಮದಲ್ಲಿ ಸಾವರ್ಕರ್ ಪ್ರತಿಷ್ಠಾನದ ಕಾರ್ಯದರ್ಶಿ ರಾಕೇಶ್ ಭಟ್, ಆದಿತ್ಯ ಅಧಿಕಾರಿ ಆಸ್ಪತ್ರೆಯ ವೈದ್ಯರಾದ ಡಾ.ಚಂದ್ರಶೇಖರ, ಪ್ರತಿಷ್ಠಾನದ ಸಹ–ಕಾರ್ಯದರ್ಶಿ ಶಿವು ಚಿಕ್ಕಕಾನ್ಯ, ಸಾವರ್ಕರ್ ಯುವ ಬಳಗದ ವಿಕ್ರಂ ಅಯ್ಯಂಗಾರ್, ಸಂದೇಶ್ ಪವಾರ್, ಪ್ರತಿಷ್ಠಾನದ ಮೈಸೂರು ಕೇಂದ್ರ ಸಮಿತಿಯ ಎಸ್.ಮಹೇಶ್‌ಕುಮಾರ್, ಶಿವು ಪಟೇಲ್, ಡಿ. ರಾಘವೇಂದ್ರ, ಹೆಚ್.ಎಸ್.ಹಿರಿಯಣ್ಣ, ಮಂಗಳ ಗೌರಮ್ಮ ಸೇರಿದಂತೆ ಅನೇಕ ಇಂದಿರಾ ಹಾಗೂ ಸಾವರ್ಕರ್ ಅಭಿಮಾನಿಗಳು ಪಾಲ್ಗೊಂಡಿದ್ದರು.

ಜಿಲ್ಲಾ ಮಟ್ಟದ ಸಾಂಸ್ಕೃತಿಕ, ಪಠ್ಯೇತರ ಚಟುವಟಿಕೆ ಸ್ಪರ್ಧೆಗಳಿಗೆ ಚಾಲನೆ

ಮೈಸೂರು,ನ.20(ಎಂಕೆ)– ಮೈಸೂರಿನ ಜಯಲಕ್ಷ್ಮಿಪುರಂನಲ್ಲಿರುವ ವಿವೇಕಾನಂದ ಪದವಿ ಪೂರ್ವ ಕಾಲೇಜಿನಲ್ಲಿ ಶಾಲಾ ಶಿಕ್ಷಣ ಇಲಾಖೆ (ಪದವಿಪೂರ್ವ) ಮತ್ತು ಕರ್ನಾಟಕ ರಾಜ್ಯ ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ನಿಧಿ ವತಿಯಿಂದ ಆಯೋಜಿಸಿದ್ದ ಜಿಲ್ಲಾ ಮಟ್ಟದ ಸಾಂಸ್ಕೃತಿಕ ಹಾಗೂ ಪಠ್ಯೇತರ ಚಟುವಟಿಕೆ ಸ್ಪರ್ಧೆಗಳಿಗೆ ಗುರುವಾರ ಚಾಲನೆ ನೀಡಲಾಯಿತು.

ವೇದಿಕೆ ಕಾರ್ಯಕ್ರಮ ಉದ್ಘಾಟಿಸುವ ಮೂಲಕ ಸ್ಪರ್ಧೆಗಳಿಗೆ ಚಾಲನೆ ನೀಡಿದ ಕುವೆಂಪು ವಿದ್ಯಾವರ್ಧಕ ಟ್ರಸ್ಟ್ ಅಧ್ಯಕ್ಷ ಜೆ.ಶಶಿಧರ ಪ್ರಸಾದ್ ಮಾತನಾಡಿ, ಸ್ಪರ್ಧೆಗಳಲ್ಲಿ ಭಾಗವಹಿಸುವುದರಿಂದ ಸ್ಪರ್ಧಾ ಮನೋಭಾವ ಬೆಳೆಯುವುದರ ಜೊತೆಗೆ ನಮಗರಿವಿಲ್ಲದಂತೆ ಭವಿಷ್ಯದ ಸವಾಲುಗಳಿಗೆ ಸಿದ್ಧರಾಗುತ್ತೇವೆ. ವಿವೇಕಾನಂದ ಕಾಲೇಜು ಸಂತಕವಿ ಕುವೆಂಪು ಅವರು ಓಡಾಡಿದ ಪುಣ್ಯ ನೆಲವಾಗಿದ್ದು, ಇಲ್ಲಿ ಬಹುಮಾನಕ್ಕಿಂತ ಭಾಗವಹಿಸುವಿಕೆ ಮುಖ್ಯ ಎಂದು ಪ್ರೋತ್ಸಾಹಿಸಿದರು.



ಸಾಂಸ್ಕೃತಿಕ ಹಾಗೂ ಪಠ್ಯೇತರ ಚಟುವಟಿಕೆ ಸ್ಪರ್ಧೆಗಳಿಗೆ ಚಾಲನೆ ನೀಡಲಾಯಿತು.

ಪದವಿಪೂರ್ವ ಶಿಕ್ಷಣ ಇಲಾಖೆ ಉಪ ನಿರ್ದೇಶಕಿ ಎಂ.ಪಿ.ನಾಗಮ್ಮ ಮಾತನಾಡಿ, ಶಿಕ್ಷಕ ವಿದ್ಯಾರ್ಥಿಗೆ ಶಿಕ್ಷಣದ ಮೂಟೆ ಹೊರಿಸಿದರೆ ಸಾಲದು, ಸಾಂಸ್ಕೃತಿಕ, ಕ್ರೀಡಾ ಸ್ಪರ್ಧೆಯಲ್ಲಿ ತೊಡಗಿಸಿಕೊಳ್ಳುವಂತೆ ಪ್ರೇರೇಪಿಸಬೇಕು. ಇದರಿಂದ ಮಕ್ಕಳ ಪ್ರತಿಭೆ ಅನಾವರಣಗೊಳ್ಳುತ್ತದೆ. ಅಲ್ಲದೆ ಮುಂದಿನ ದೊಡ್ಡ ವೇದಿಕೆಗೆ ಇದು ಸಣ್ಣ ಪ್ರಯತ್ನವಾಗಬಹುದು. ಮನಸ್ಸಿಗೆ ಗಾಯವಾದರೆ ಸಂಗೀತದಿಂದ ಶಮನಗೊಳಿಸಬಹುದು. ಸಾಂಸ್ಕೃತಿಕ ಸ್ಪರ್ಧೆಯು ಮಕ್ಕಳ ಮಾನಸಿಕ ಪ್ರಜ್ಞೆಯನ್ನು ಜಾಗೃತಗೊಳಿಸುತ್ತದೆ ಎಂದರು. ಕುವೆಂಪು ವಿದ್ಯಾವರ್ಧಕ ಟ್ರಸ್ಟ್‌ನ ಧರ್ಮದರ್ಶಿ ಜಿ.ರಮೇಶ್, ಕಾರ್ಯದರ್ಶಿ ಶಿವಸುಂದರ ಸತ್ಯೇಂದ್ರ, ಕಾಲೇಜಿನ ಪ್ರಾಂಶುಪಾಲ ಎಂ.ವೆಂಕಟೇಶ್ ಮತ್ತಿತರರು ಉಪಸ್ಥಿತರಿದ್ದರು.

ಬೆಳಗಾವಿ ಕಿರು ಮೃಗಾಲಯದಲ್ಲಿ ಕೃಷ್ಣಮೃಗಗಳ ಸಾವು ಪ್ರಕರಣ

ಮೈಸೂರು ಮೃಗಾಲಯದಲ್ಲಿ ಕಟ್ಟೆಚ್ಚರ



ಮೈಸೂರು,ನ.20(ಎಂಟಿವೈ)–ಬೆಳಗಾವಿ ಕಿರು ಮೃಗಾಲಯದಲ್ಲಿ ಗಳಲೆ ಕಾಯಿಲೆಗೆ 31 ಕೃಷ್ಣಮೃಗಗಳು ಮೃತಪಟ್ಟಿರುವ ಹಿನ್ನೆಲೆಯಲ್ಲಿ ಮೈಸೂರು ಮೃಗಾಲಯದಲ್ಲಿ ಕಟ್ಟೆಚ್ಚರ ವಹಿಸಲಾಗಿದೆ.

ಕೃಷ್ಣಮೃಗಗಳ ಅಸಹಜ ಸಾವು ಪ್ರಕರಣದಿಂದ ರಾಜ್ಯದ ಎಲ್ಲಾ 9 ಮೃಗಾಲಯಗಳ ಕಾರ್ಯನಿರ್ವಾಹಕ ನಿರ್ದೇಶಕರೊಂದಿಗೆ ಅರಣ್ಯ ಸಚಿವ ಈಶ್ವರ್ ಬಿ.ಖಂಡ್ರೆ ಆನ್‌ಲೈನ್ ಮೂಲಕ ಸಭೆ ನಡೆಸಿದ್ದು, ಮೃಗಾಲಯಗಳಲ್ಲಿರುವ ಜಿಂಕೆ, ಕೃಷ್ಣಮೃಗ, ಸಾಂಬರ್ ಸೇರಿದಂತೆ ಸಸ್ಯಹಾರಿ ಹಾಗೂ ಮಾಂಸಹಾರಿ ಪ್ರಾಣಿಗಳ ಆರೋಗ್ಯ ಸ್ಥಿತಿಗತಿಗಳ ಬಗ್ಗೆ ಮಾಹಿತಿ ಪಡೆದು, ಪ್ರಾಣಿಗಳ ಆರೋಗ್ಯ ಕಾಪಾಡಲು ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಿದ್ದರು. ಈ ಹಿನ್ನೆಲೆಯಲ್ಲಿ ಮೃಗಾಲಯಗಳಲ್ಲಿ ಕೈಗೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳ ಬಗ್ಗೆ ಗೈಡ್ಲೈನ್ ಹೊರಡಿಸಲಾಗಿತ್ತು.

ಸರ್ಕಾರ ಹೊರಡಿಸಿರುವ ಮಾರ್ಗಸೂಚಿ ಅನುಸಾರ ಇದೀಗ ಮೈಸೂರು ಮೃಗಾಲಯದಲ್ಲಿ ಕಟ್ಟೆಚ್ಚರ ವಹಿಸಲಾಗಿದೆ. ಸದ್ಯದ ಪರಿಸ್ಥಿತಿಯಲ್ಲಿ ಮೈಸೂರು ಮೃಗಾಲಯದಲ್ಲಿರುವ ಎಲ್ಲಾ ಪ್ರಾಣಿಗಳ ಆರೋಗ್ಯ ಪರಿಸ್ಥಿತಿ ಉತ್ತಮವಾಗಿದೆ ಆದರೂ ಪ್ರಾಣಿಗಳ ಮೇಲೆ ನಿಗಾ ಇಡಲಾಗಿದೆ. ಅದರಲ್ಲೂ ಗಳಲೆ ಕಾಯಿಲೆ ಕಾಣಿಸಿಕೊಳ್ಳುವ ಸಸ್ಯಹಾರಿ ಪ್ರಾಣಿಗಳಾದ ಜಿಂಕೆ, ಕೃಷ್ಣಮೃಗ, ಸಾಂಬಾರ್ ಡೀರ್ ಇನ್ನಿತರ ಪ್ರಾಣಿಗಳ ಮೇಲೆ ನಿಗಾ ಇಡಲಾಗಿದೆ.

ಪ್ರಾಣಿಗಳ ಗುಂಪಿನಲ್ಲಿ ಯಾವುದಾದರೂ ಪ್ರಾಣಿಗಳನ್ನು ಅನಾರೋಗ್ಯದ ಲಕ್ಷಣ ಕಂಡು ಬಂದರೆ, ಆ ಪ್ರಾಣಿಯನ್ನು ಪ್ರತ್ಯೇಕಿಸಿ, ಚಿಕಿತ್ಸೆ ನೀಡಲು ಕ್ರಮ ಕೈಗೊಳ್ಳಲಾಗಿದೆ. ಪ್ರಸ್ತುತ ಮೈಸೂರು ಮೃಗಾಲಯದಲ್ಲಿ ಆತಂಕಪಡುವ ವಾತಾವರಣವಿಲ್ಲ. ಆದರೂ ಮುನ್ನೆಚ್ಚರಿಕಾ ಕ್ರಮವಾಗಿ ಸೋಂಕು ನಿವಾರಕ ದ್ರಾವಣ ಸಿಂಪಡಿಸಲಾಗುತ್ತಿದೆ ಎಂದು ತಿಳಿದು ಬಂದಿದೆ.

> "ಬೆಳಗಾವಿ ಕಿರು ಮೃಗಾಲಯದಲ್ಲಿ ಕೃಷ್ಣಮೃಗಗಳ ಅಸಹಜ ಸಾವಿನ ಪ್ರಕರಣದಿಂದ ಮೃಗಾಲಯದಲ್ಲಿ ಕೈಗೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳ ಕುರಿತಂತೆ ಮಾರ್ಗಸೂಚಿ ಹೊರಡಿಸಲಾಗಿದೆ. ಆ ಮಾರ್ಗಸೂಚಿಯಂತೆ ಮೃಗಾಲಯದಲ್ಲಿ ಅಗತ್ಯ ಕ್ರಮ ಕೈಗೊಳ್ಳಲಾಗಿದೆ.
> –ಪಿ.ಅನುಷಾ, ಕಾರ್ಯನಿರ್ವಾಹಕ ನಿರ್ದೇಶಕರು, ಮೈಸೂರು ಮೃಗಾಲಯ

ನ.25ರಂದು ಪ್ರಬಂಧ, ಭಾಷಣ ಸ್ಪರ್ಧೆಗಳು

ಮೈಸೂರು, ನ.20–ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಡಾ. ಬಿ.ಆರ್. ಅಂಬೇಡ್ಕರ್ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಡಾ.ಬಿ.ಆರ್.ಅಂಬೇಡ್ಕರ್ ತರಬೇತಿ, ಸಂಶೋಧನೆ ಹಾಗೂ ವಿಸ್ತರಣಾ ಕೇಂದ್ರ, ಬೆಂಗಳೂರು ವತಿಯಿಂದ ನ. 25ರಂದು ಬೆಳಗ್ಗೆ 11 ಗಂಟೆಗೆ ಸಂವಿಧಾನ ದಿನಾಚರಣೆ ಅಂಗವಾಗಿ ಪ್ರಬಂಧ ಮತ್ತು ಭಾಷಣ ಸ್ಪರ್ಧೆಗಳನ್ನು ಕಾವೇರಿ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ. ಪ್ರಬಂಧ ವಿಷಯ: ರಾಷ್ಟ್ರ ನಿರ್ಮಾಣದಲ್ಲಿ ಡಾ. ಬಿ.ಆರ್.ಅಂಬೇಡ್ಕರ್‌ರವರ ಪಾತ್ರ, ಭಾಷಣ ಸ್ಪರ್ಧೆ ವಿಷಯ : ಭಾರತದ ಪ್ರಗತಿಯಲ್ಲಿ ಸಂವಿಧಾನದ ಆದರ್ಶಗಳ ಪ್ರಾಮುಖ್ಯತೆ. ಹೆಚ್ಚಿನ ಮಾಹಿತಿಗೆ ಮೊ. 7204819172, 9686314012 ಸಂಪರ್ಕಿಸಬಹುದು.

ನ.24ರಿಂದ ಸಂವಿಧಾನದ ಬಗ್ಗೆ ವಿಶೇಷ ಉಪನ್ಯಾಸ

ಮೈಸೂರು: ಮೈಸೂರಿನ ಸಾಂಸ್ಕೃತಿಕ ಸಂಸ್ಥೆ ಪರಂಪರೆ ವತಿಯಿಂದ ಸಂವಿಧಾನ ದಿನಾಚರಣೆ ಪ್ರಯುಕ್ತ ನ.24ರಿಂದ 26ರವರೆಗೆ ಸಂವಿಧಾನದ ಬಗ್ಗೆ ವಿಶೇಷ ಉಪನ್ಯಾಸಗಳನ್ನು ಕೆ.ವಾಸುದೇವಾಚಾರ್ಯ ಭವನದಲ್ಲಿ ಪ್ರತಿದಿನ ಸಂಜೆ 6ರಿಂದ 8ರವರೆಗೆ ಏರ್ಪಡಿಸಲಾಗಿದೆ. ನ.24ರಂದು ಅಭಿವ್ಯಕ್ತಿ ಸ್ವಾತಂತ್ರ್ಯ ಕುರಿತು ತುಮಕೂರಿನ ರಾಮಕೃಷ್ಣ–ವಿವೇಕಾನಂದ ಆಶ್ರಮದ ಮುಖ್ಯಸ್ಥರಾದ ಶ್ರೀ ವೀರೇಶಾನಂದ ಸರಸ್ವತಿ ಸ್ವಾಮೀಜಿ, ನ.25ರಂದು ಸಂವಿಧಾನ ಪೀಠಿಕೆಯ ಮಹತ್ವ ಕುರಿತು ಕರ್ನಾಟಕ ಉಚ್ಛ ನ್ಯಾಯಾಲಯದ ನ್ಯಾಯಮೂರ್ತಿ ವಿ.ಶ್ರೀಶಾನಂದ ಹಾಗೂ ನ.26ರಂದು ಭಾರತದ ರಾಷ್ಟ್ರಗೀತೆ ಕುರಿತು ಹಿರಿಯ ಸಂಶೋಧಕ ಜಿ.ಬಿ.ಹರೀಶ್ ಉಪನ್ಯಾಸ ನೀಡಲಿದ್ದಾರೆ. ಉಪನ್ಯಾಸಗಳ ಮೊದಲು ನ.24ರಂದು ರಂಗಾಯಣದ ಮಾಜಿ ನಿರ್ದೇಶಕ ಜನ್ನಿ (ಜನಾರ್ಧನ್) ತಂಡದವರು, ನ.25ರಂದು ವಿದುಷಿ ಮಹಾಲಕ್ಷ್ಮಿ ತಂಡದವರು, ನ.26ರಂದು ವಿದುಷಿ ಶುಭಾ ರಾಘವೇಂದ್ರ ಮತ್ತು ತನುಶ್ರೀ ದೇಶಭಕ್ತಿ ಗೀತೆಗಳನ್ನು ಪ್ರಸ್ತುತಪಡಿಸಲಿದ್ದಾರೆ.

ಎಲ್‌ಕೆಜಿ, ಯುಕೆಜಿ ಶಿಕ್ಷಕ ತರಬೇತಿಗಾಗಿ ಅರ್ಜಿ ಆಹ್ವಾನ

ಮೈಸೂರು: ರಾಷ್ಟ್ರೀಯ ಡಿಜಿಟಲ್ ಸಾಕ್ಷರತಾ ಮಿಷನ್ ಸಹಭಾಗಿತ್ವದಲ್ಲಿ ನಗರದ ಎಸ್‌ಎಸ್‌ಐಟಿ ಸಲೂಷನ್ಸ್ ಟೀಚರ್ ಟ್ರೈನಿಂಗ್ ಅಕಾಡೆಮಿಯು ಎಲ್‌ಕೆಜಿ ಯುಕೆಜಿ ಶಿಕ್ಷಕ ಅಭ್ಯರ್ಥಿಗಳಿಗಾಗಿ ತರಬೇತಿ ತರಗತಿಗಳನ್ನು ಆಯೋಜಿಸಿದೆ. ಎಸ್‌ಎಸ್‌ಎಲ್‌ಸಿ ನಂತರದ ವಿದ್ಯಾಭ್ಯಾಸ ಹೊಂದಿರುವ 18ರಿಂದ 55ವಯೋಮಾನದ ಎಲ್ಲಾ ವರ್ಗದ ಮಹಿಳೆಯರು ತರಬೇತಿಯ ಫಲಾನುಭವಿಗಳಾಗಿರುತ್ತಾರೆ. ನುರಿತ ಅಧ್ಯಾಪಕರಿಂದ ಮಕ್ಕಳ ಮಾನಸಿಕ ಬೆಳವಣಿಗೆ, ಪೋಷಕಾಂಶ, ಕಲಿಕಾ ಸಾಮರ್ಥ್ಯ, ಗ್ರಹಿಕೆ, ಚಟುವಟಿಕೆ, ಮುಂತಾದವುಗಳ ಕುರಿತು ಸೈದ್ಧಾಂತಿಕ ತರಗತಿಗಳು ಹಾಗೂ ಪ್ರಾಯೋಗಿಕ ತರಗತಿ ನಡೆಸಲಾಗುತ್ತದೆ. ತರಬೇತಿಯು ಆನ್‌ಲೈನ್ ನಲ್ಲಿಯೂ ಸಹ ಲಭ್ಯವಿದ್ದು ನೋಂದಣಿ ಮಾಡಿಕೊಂಡ ಎಲ್ಲಾ ವಿದ್ಯಾರ್ಥಿಗಳಿಗೂ ಪ್ರಮಾಣಪತ್ರ ನೀಡಲಾಗುತ್ತದೆ. ಆಸಕ್ತರು ಅರ್ಜಿಗಳಿಗಾಗಿ ನ.30ರೊಳಗೆ 8310306882, 9964790442 ಸಂಪರ್ಕಿಸಬಹುದು.

ಮೈಸೂರು ವಿವಿ ವಿದ್ಯಾರ್ಥಿಗಳಿಗೆ ಮೂಲ ಸೌಕರ್ಯ ಕಲ್ಪಿಸಲು ಆಗ್ರಹಿಸಿ ಪ್ರತಿಭಟನೆ



ಮೈಸೂರು ವಿವಿಯಲ್ಲಿರುವ ವಿದ್ಯಾರ್ಥಿನಿಲಯಗಳಿಗೆ ಮೂಲ ಸೌಕರ್ಯ ಒದಗಿಸುವಂತೆ ಒತ್ತಾಯಿಸಿ ಭಾರತ ವಿದ್ಯಾರ್ಥಿ ಫೆಡರೇಷನ್ ವತಿಯಿಂದ ಹಳೆ ಜಿಲ್ಲಾಧಿಕಾರಿ ಕಚೇರಿ ಬಳಿ ಪ್ರತಿಭಟನೆ ನಡೆಸಲಾಯಿತು.

ಮೈಸೂರು,ನ.20(ಜಿಎ)– ಮೈಸೂರು ವಿವಿಯಲ್ಲಿರುವ ವಿದ್ಯಾರ್ಥಿನಿಲಯಗಳಿಗೆ ಮೂಲ ಸೌಕರ್ಯ ಒದಗಿಸುವಂತೆ ಒತ್ತಾಯಿಸಿ ಭಾರತ ವಿದ್ಯಾರ್ಥಿ ಫೆಡರೇಷನ್ ವತಿಯಿಂದ ಹಳೆ ಜಿಲ್ಲಾಧಿಕಾರಿ ಕಚೇರಿ ಬಳಿ ಪ್ರತಿಭಟನೆ ನಡೆಸಲಾಯಿತು.

ಮೈಸೂರು ವಿಶ್ವವಿದ್ಯಾಲಯ ರಾಜ್ಯದ ಪ್ರತಿಷ್ಠಿತ ವಿವಿಯಾಗಿದೆ. ಇಲ್ಲಿ ವಿದ್ಯಾಭ್ಯಾಸ ಮಾಡಲು ಹೊರ ಜಿಲ್ಲೆ, ರಾಜ್ಯ, ವಿದೇಶದಿಂದ ಬರುತ್ತಾರೆ. ಆ ವಿದ್ಯಾರ್ಥಿಗಳೆಲ್ಲ ವಿಶ್ವವಿದ್ಯಾಲಯದ ವಸತಿ ನಿಲಯಗಳನ್ನೇ ಅವಲಂಬಿಸಿದ್ದಾರೆ. ಆದರೆ, ವಸತಿ ನಿಲಯಗಳಲ್ಲಿ ಮೂಲ ಸೌಕರ್ಯಗಳು ಸರಿಯಾಗಿಲ್ಲ. ಸರಿಯಾದ ಸ್ವಚ್ಛತೆ ಇಲ್ಲ. ಸೂಕ್ತವಾಗಿ ಸ್ವಚ್ಛತೆ ಮಾಡದ ಕಾರಣ ಹಲವು ವಿದ್ಯಾರ್ಥಿಗಳು ಅನಾರೋಗ್ಯಕ್ಕೆ ತುತ್ತಾಗುತ್ತಿದ್ದಾರೆ. ಜತೆಗೆ ಕುಡಿಯುವ ನೀರಿನ ವ್ಯವಸ್ಥೆಯೂ ಸರಿಯಾಗಿಲ್ಲ. ವಿದ್ಯಾರ್ಥಿಗಳು ಹೊರಗಡೆಯಿಂದ ನೀರು ತಂದು ಕುಡಿಯುವ ಪರಿಸ್ಥಿತಿ ನಿರ್ಮಾಣವಾಗಿದೆ. ಶೌಚಾಲಯಗಳಂತು ಸ್ವಚ್ಛತೆ ಇಲ್ಲದೆ ಗಬ್ಬು ನಾರುತ್ತಿವೆ. ಇದರಿಂದ ಶೌಚಾಲಯಗಳನ್ನು ಉಪಯೋಗಿಸಲು ಆಗುತ್ತಿಲ್ಲ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

ವಿದ್ಯಾರ್ಥಿನಿಲಯಗಳಲ್ಲಿ ವಿದ್ಯಾರ್ಥಿಗಳಿಗೆ ನೀಡುವ ಆಹಾರ ಕಳಪೆ ಮಟ್ಟದ್ದಾಗಿದೆ. ವಿದ್ಯಾರ್ಥಿಗಳಿಗೆ ಪೌಷ್ಟಿಕ ಆಹಾರ ನೀಡಬೇಕು. ಆದರೆ ಊಟದಲ್ಲಿ ತರಕಾರಿ, ಕಾಳು, ಧಾನ್ಯಗಳೇ ಇರುವುದಿಲ್ಲ. ವಿದ್ಯಾರ್ಥಿಗಳಿಗೆ ಹಲವು ತೊಂದರೆಗಳಿದ್ದು, ವಿದ್ಯಾರ್ಥಿಗಳ ಶೈಕ್ಷಣಿಕ ವಿದ್ಯಾಭ್ಯಾಸದ ಮೇಲೆ, ಆರೋಗ್ಯದ ಮೇಲೆ ಪರಿಣಾಮ ಬೀರುತ್ತಿದೆ. ಕೂಡಲೇ ವಿಶ್ವವಿದ್ಯಾಲಯದ ಹಾಸ್ಟೆಲ್‌ಗಳಿಗೆ ಕುಡಿಯುವ ನೀರು, ಶೌಚಾಲಯ ಸ್ವಚ್ಛತೆ, ಪೌಷ್ಟಿಕ ಆಹಾರ ನೀಡಬೇಕು. ಹಾಸ್ಟೆಲ್‌ಗಳಿಗೆ ಮೂಲ ಸೌಕರ್ಯ ಒದಗಿಸಬೇಕು. ಗೀಜರ್‌ಗಳಲ್ಲಿ ಕರೆಂಟ್ ಶಾಕ್ ಹೊಡೆಯುತ್ತಿದ್ದು, ಅವುಗಳನ್ನು ಸರಿಪಡಿಸಬೇಕೆಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ವಿವಿ ಘಟಕದ ಅಧ್ಯಕ್ಷ ಚಿರಾಗ್ ಎಸ್.ಕೆ.ಮೂರ್ತಿ, ರಾಜ್ಯ ಸಮಿತಿ ಸದಸ್ಯ ಅಭಿ, ಜಿಲ್ಲಾ ಕಾರ್ಯದರ್ಶಿ ಪ್ರಜ್ವಲ್, ಜಿಲ್ಲಾಧ್ಯಕ್ಷ ಭರತ್, ಜೀವನ್, ಪ್ರಿಯ, ಗಜೇಂದ್ರ, ರಾಜೇಶ್ ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

ಎಲೆ ತೋಟದಲ್ಲಿ ಭೂಮಿ ಕಳೆದುಕೊಂಡವರಿಗೆ ಚಿಕ್ಕಕಾಟೂರು ಬಳಿ ಭೂಮಿ ನೀಡಲು ನಿರ್ಧಾರ

● ಸದರಿ ಸ್ಥಳದ ಸರ್ವೆ ನಡೆಸಿ ವರದಿ ನೀಡಲು ಡಿಸಿ ಸೂಚನೆ ● ಪರಿಶಿಷ್ಟರ ನಾನಾ ಸಮಸ್ಯೆಗೆ ಪರಿಹಾರ ಕಲ್ಪಿಸುವಲ್ಲಿ ಜಿಲ್ಲಾಡಳಿತದ ನಿರಾಸಕ್ತಿ ಆರೋಪ

ಮೈಸೂರು,ನ.20(ಎಂಟಿವೈ)– ಮೈಸೂರಿನ ಎಲೆ ತೋಟದಲ್ಲಿ ಜಮೀನು ಕಳೆದುಕೊಂಡವರಿಗೆ ಮೈಸೂರು ತಾಲೂಕಿನ ಜಯಪುರ ಹೋಬಳಿಯ ಚಿಕ್ಕಕಾಟೂರು ಗ್ರಾಮದ ಸರ್ವೆ ನಂ.60ರಲ್ಲಿ ಭೂಮಿ ನೀಡಲು ಡಿಸೆಂಬರ್ ಅಂತ್ಯದೊಳಗೆ ಸರ್ವೆ ಮಾಡಿ ನಕ್ಷೆಯೊಂದಿಗೆ ವಿವರವಾದ ವರದಿ ನೀಡುವಂತೆ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ ಸೂಚಿಸಿದ್ದಾರೆ.

ಮೈಸೂರಿನ ಪಡುವಾರಹಳ್ಳಿಯಲ್ಲಿರುವ ಡಾ.ಬಾಬು ಜಗಜೀವನರಾಮ್ ಭವನದಲ್ಲಿ ನಡೆದ ಜಿಲ್ಲಾ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಜಾಗೃತ ಮತ್ತು ಉಸ್ತುವಾರಿ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಎಲೆ ತೋಟದ ಜಮೀನು ಕಳೆದುಕೊಂಡವರಿಗೆ ಭೂಮಿ ನೀಡಲು ಅಧಿಕಾರಿಗಳು ಸದರಿ ಜಾಗದ ಸರ್ವೆ ಕಾರ್ಯವನ್ನು ಶೀಘ್ರ ಪೂರ್ಣಗೊಳಿಸಿ, ವರದಿ ಸಲ್ಲಿಸಬೇಕು. ಆದಷ್ಟು ಬೇಗ ಎಲೆ ತೋಟದಲ್ಲಿ ಭೂಮಿ ಕಳೆದುಕೊಂಡವರಿಗೆ ಭೂಮಿ ನೀಡುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಿದರು.

ಎಸ್‌ಸಿಎಸ್‌ಪಿ, ಟಿಎಸ್‌ಪಿ ಅನುದಾನದಲ್ಲಿ ನಿರ್ಮಿಸಿರುವ ಸಮುದಾಯ ಭವನಗಳಿಗೆ ತಾಲೂಕು ವ್ಯಾಪ್ತಿಯ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಸಮುದಾಯ ಭವನಗಳ ನಿರ್ವಹಣಾ ಸಮಿತಿ ರಚಿಸಿ ಆಯಾ ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ವರದಿ ಸಲ್ಲಿಸುವಂತೆ ತಿಳಿಸಿದರು. ಬಹಳ ವರ್ಷಗಳಿಂದ ನೆನಗುದಿಗೆ ಬಿದ್ದ ಹುಣಸೂರು ತಾಲೂಕು ಹನಗೋಡು ಗ್ರಾಮದಲ್ಲಿ ನಿರ್ಮಾಣವಾಗಬೇಕಿದ್ದ ಅಂಬೇಡ್ಕರ್ ಭವನಕ್ಕೆ ಸರ್ಕಾರ 1 ಕೋಟಿ ಅನುದಾನ ಒದಗಿಸಿದ್ದು, ಕಾಮಗಾರಿ ಪ್ರಗತಿಯಲ್ಲಿದೆ ಎಂದರು.



ಮೈಸೂರಿನ ಪಡುವಾರಹಳ್ಳಿಯಲ್ಲಿರುವ ಡಾ.ಬಾಬು ಜಗಜೀವನರಾಮ್ ಭವನದಲ್ಲಿ ಜಿಲ್ಲಾ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಜಾಗೃತ ಮತ್ತು ಉಸ್ತುವಾರಿ ಸಮಿತಿ ಸಭೆಯಲ್ಲಿ ಡಿಸಿ ಜಿ.ಲಕ್ಷ್ಮೀಕಾಂತರೆಡ್ಡಿ ಮಾತನಾಡಿದರು.

ವಿಧಾನಪರಿಷತ್ ಸದಸ್ಯ ಮಂಜೇಗೌಡ ಮಾತನಾಡಿ, 2021–22ನೇ ಸಾಲಿನಲ್ಲಿ ಟಿಎಸ್‌ಪಿ ಫಲಾನುಭವಿಯೊಬ್ಬರ ಜಮೀನಿನ ಕೊಳವೆ ಬಾವಿ ಕೊರೆಯಿಸಿ ವಿದ್ಯುತ್ ಸಂಪರ್ಕ ಕಲ್ಪಿಸಿಲ್ಲ ಎಂಬುದು ವಿಪರ್ಯಾಸ. ಈ ವಿಷಯವನ್ನು ರಾಜ್ಯ ಮಟ್ಟದ ಸಮಿತಿಯ ಗಮನಕ್ಕೆ ತಂದು ಕೂಡಲೇ ವಿದ್ಯುತ್ ಸಂಪರ್ಕ ಕಲ್ಪಿಸಲು ಕ್ರಮ ವಹಿಸಬೇಕು ಎಂದರು.

ಜಿಲ್ಲಾಡಳಿತ ನಿರ್ಲಕ್ಷಿಸುತ್ತಿದೆ: ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಜಾಗೃತ ಮತ್ತು ಉಸ್ತುವಾರಿ ಸಮಿತಿ ಸದಸ್ಯ ಅಹಿಂದ ಜವರಪ್ಪ ಮಾತನಾಡಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನರ ಸಮಸ್ಯೆ ಪರಿಹಾರಕ್ಕೆ ಜಿಲ್ಲಾಡಳಿತ ನಿರ್ಲಕ್ಷಿಸುತ್ತಿದೆ. ಪೊಲೀಸರ ಮೂಲಕ ಜೈಲಿಗೆ ಕಳುಹಿಸುವುದಾಗಿ ಹೆದರಿಸುತ್ತಿದ್ದಾರೆ. ಜಾಗೃತ ಸಮಿತಿ ಸಭೆಯಲ್ಲಿ ಮಂಡಿಸಲಾದ ಸಮಸ್ಯೆಗಳನ್ನು ಅಧಿಕಾರಿಗಳು ಇತ್ಯರ್ಥಪಡಿಸುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ರಮ್ಮನಹಳ್ಳಿ ಪಟ್ಟಣ ಪಂಚಾಯಿತಿ ವ್ಯಾಪ್ತಿಗೆ ಒಳಪಡುವ ಸಾತಗಹಳ್ಳಿ ಗ್ರಾಮಕ್ಕೆ ಅಂಬೇಡ್ಕರ್ ಬಡಾವಣೆ ನಾಮಫಲಕ ಅಳವಡಿಕೆಗೆ ಸಭೆಯಲ್ಲಿ ತೀರ್ಮಾನ ಮಾಡಲಾಗಿದೆ. ಅಂಬೇಡ್ಕರ್ ನಾಮಫಲಕ ಹಾಕಿದರೆ ಕಿಡಿಗೇಡಿಗಳು ಬಣ್ಣ ಬಳಿಯುತ್ತಾರೆ. ಇದರ ಬಗ್ಗೆ ಜಿಲ್ಲಾಡಳಿತ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ. ಹಾರೋಹಳ್ಳಿ ಗ್ರಾಮದ ಸರ್ವೇ ನಂ. 791ರಲ್ಲಿ 70 ವರ್ಷಗಳಿಂದ ಉಳುಮೆ ಮಾಡುತ್ತಿರುವ ರೈತರನ್ನು ಒಕ್ಕಲೆಬ್ಬಿಸಲಾಗುತ್ತಿದೆ. ನೋಟಿಸ್ ಕೊಡದೇ ಅಧಿಕಾರಿಗಳು ಸರ್ವೇ ಕಾರ್ಯ ನಡೆಸಿದ್ದಾರೆ. ಸರ್ವೇ ಕಾರ್ಯ ತಡೆದ ರೈತರನ್ನು ಪೊಲೀಸರು ತಳ್ಳಿದ್ದಾರೆ. ಜಿಲ್ಲಾಡಳಿತ ಯಾರ ಪರವಾಗಿದೆ? ಎಂದು ಪ್ರಶ್ನಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ, ಹಾರೋಹಳ್ಳಿ ಗ್ರಾಮದಲ್ಲಿ ನ್ಯಾಯಾಲಯದ ಅನುಸಾರ ಕ್ರಮ ಜರುಗಿಸಲಾಗಿದೆ. ದಾಖಲೆ ಇಲ್ಲದವರ ಒತ್ತುವರಿ ತೆರವು ಮಾಡಲಾಗಿದೆ. ಮನೆ ನಿರ್ಮಿಸಿದ್ದವರಿಗೆ ಯಾವುದೇ ರೀತಿ ತೊಂದರೆ ನೀಡಿಲ್ಲ ಎಂದು ಸ್ಪಷ್ಟನೆ ನೀಡಿದರು.

ಜಿಲ್ಲಾಡಳಿತ ಇದನ್ನು ಮರು ಪರಿಶೀಲಿಸಬೇಕು. ಬಡ ರೈತರಿಗೆ ಪರಿಹಾರ ಕೊಡಬೇಕು. ಯಾರನ್ನೂ ಒಕ್ಕಲೆಬ್ಬಿಸಬಾರದು ಎಂದು ಅಹಿಂದ ಜವರಪ್ಪ ಒತ್ತಾಯಿಸಿದರು.

ಜಿಪಂ ಸಿಇಓ ಯುಕೇಶ್‌ಕುಮಾರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಎನ್.ವಿಷ್ಣುವರ್ಧನ್, ಮಹಾನಗರ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸೀಫ್, ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ರಂಗೇಗೌಡ, ಜಾಗೃತ ಮತ್ತು ಉಸ್ತುವರಿ ಸಮಿತಿ ಸದಸ್ಯರಾದ ರವಿಕುಮಾರ್, ವೇಣುಗೋಪಲ್, ಪಾರ್ವತಮ್ಮ, ಮಹದೇವ್ ಹಾಗೂ ಬಸವರಾಜು ಉಪಸ್ಥಿತರಿದ್ದರು.